ಮುಖ್ಯ ಅಧಿಕಾರಿಯೊಬ್ಬರೇ ಮಾಡಿರತಕ್ಕಂಥ ಕೃತ್ಯ ಅಲ್ಲ. ಈ ಉದ್ದೇಶಕ್ಕೇ ಅಲ್ಲದೆ ಬೇರೆ ಉದ್ದೇಶಕ್ಕೋಸ್ಕರ 18 ಲಕ್ಷ ರೂಪಾಯಿಗಳನ್ನು ತುಂಡುತುಂಡಾಗಿ ಬಿಲ್‌ಮಾಡಿ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್‌ನ್ನು ಉಲ್ಲಂಘನೆ ಮಾಡಿ ಇದೆಲ್ಲಾ ಮಾಡಿರುವುದರಲ್ಲಿ ಜಿಲ್ಲಾಪಂಚಾಯತ್ ಸಿ.ಇ.ಓ.ಬೀದರ್ ಅವರೂ ಶಾಮಿಲಾಗಿದ್ದಾರೆ ಮತ್ತು ಅಕೌಂಟ್ಸ್ ಆಫೀಸರ್ ಅವರೂ ಕೂಡ ಶಾಮಿಲಾಗಿದ್ದಾರೆ. ಆದ್ದರಿಂದ ಇದು ಟೋಟಲ್ ಆಗಿ ಈ ಜಿಲ್ಲಾಪಂಚಾಯತ್‌ನಲ್ಲಿ ನಡೆದಿರತಕ್ಕಂಥ ಅವ್ಯವಹಾರವಾಗಿದೆ. ಆಮೇಲೆ ಮಾನ್ಯ ಸಚಿವರು ಹೇಳಿದ ಪ್ರಕಾರ ಮೇಲ್ನೋಟಕ್ಕೆ ಈ ಅವ್ಯವಹಾರ ಸಾಬೀತಾಗಿದೆ ಎಂದು ತಾವು ಹೇಳಿದ್ದೀರಿ. ಆಮೇಲೆ ಸಾಕ್ಷ್ಯಾಧಾರಗಳನ್ನು ತರಿಸಿಕೊಂಡಿದ್ದೇನೆ ಎಂದು ಉತ್ತರದಲ್ಲಿ ತಾವು ಹೇಳಿದ್ದೀರಿ. ನನ್ನ ಒಂದು ಕಳಕಳಿ, ವಿನಂತಿ ಏನೆಂದರೆ ಇಡೀ ಬೀದರ್ ಜಿಲ್ಲೆ ಕಳೆದ ಹತ್ತಾರು ವರ್ಷಗಳಿಂದ ಈ ಲಂಚಗುಳಿತನದಲ್ಲಿ ಕೊಳೆಯುತ್ತಿದೆ, ಬಳಲುತ್ತಿದೆ. ಇದಕ್ಕೆ ತಾವು ಸ್ವಲ್ಪ ಚೇತನವನ್ನು ನೀಡಬೇಕು ಮತ್ತು ಚೇತರಿಸಿಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ, ಈ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಪ್ರಕಾರ 18 ಲಕ್ಷ ರೂಪಾಯಿಗಳ ಒಂದೇ ಆರ್ಡರ್ ಇದ್ದರೂ ಕೂಡ ತುಂಡುತುಂಡು ಮಾಡಿ 98 ಸಾವಿರ ರೂಪಾಯಿಗಳಿಗೆ ಒಂದು ಆರ್ಡರ್ ಎಂದು ಮಾಡಿ, ಒಟ್ಟು 18 ಆರ್ಡರ್‌ಗಳನ್ನು ಮಾಡಿ ಕಾಯದೆಯನ್ನು ಉಲ್ಲಂಘನೆ ಮಾಡಿ ಅವರೇನು ಸ್ಕ್ಯಾಂಡಲ್ ಮಾಡಿದ್ದಾರೆ, ಅವರ ವಿರುದ್ಧವಾಗಿ ಕ್ರಿಮಿನಲ್ ಮೊಕದ್ದಮೆ ಹಾಕಿ ಅವರ ಮೇಲೆ ಕ್ರಮ ತೆಗೆದುಕೊಂಡರೆ ಮಾತ್ರ ಬೇರೆ ಯಾರೇ ಅಧಿಕಾರಿಗಳಿಗೆ ಇದು ಒಂದು ಮಾರ್ಗಸೂಚಿಯಾಗುತ್ತದೆ ಅಥವಾ ಅಂಜಿಕೆ ಕೊಡತಕ್ಕಂಥ ಕ್ರಮವಾಗುತ್ತದೆ. ಈ ಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ಹೇಳಿ ಇಡೀ ನನ್ನ ಬೀದರ್ ಜನತೆಯ ವತಿಯಿಂದ ಕೇಳಿಕೊಳ್ಳುತ್ತೇವೆ. ಏಕೆಂದರೆ ಇಂಥಾದ್ದು ಬಹಳ ನಡೆಯುತ್ತದೆ. ಇದನ್ನು ನಾವು ಕಂಟ್ರೋಲ್ ಮಾಡಬೇಕಾದರೆ ತಾವು ಇವರ ಮೇಲೆ ಉಗ್ರ ಕ್ರಮ ಜರುಗಿಸುತ್ತೀರೆಂದು ನಂಬಿಕೆಯನ್ನು ಇಟ್ಟು ಮತ್ತೊಂದು ಸಲ ತಮ್ಮನ್ನು ಪ್ರಾರ್ಥಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಿರತಕ್ಕಂಥ ಸಲಹೆಗಳನ್ನು ಗಂಭೀರವಾಗಿ ನಾನು ಪರಿಗಣಿಸುತ್ತೇನೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಮುಗಿಯಿತು. ಇನ್ನು ವಿತ್ತೀಯ ಕಾರ್ಯಕಲಾಪಗಳು.

4) ವಿತ್ತೀಯ ಕಾರ್ಯಕಲಾಪಗಳು

**2002-2003ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ: (ಬೇಡಿಕೆ ಸಂಖ್ಯೆ 46, 01, 02, 03, 53, 04, 09, 61, 10, 59 ಮತ್ತು 11)**

ಅಧ್ಯಕ್ಷರು: ಈಗ ಆರ್.ಡಿ.ಪಿ.ಆರ್ ಮತ್ತು ಇತರೇ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ. ಶ್ರೀ ಬೆಲ್ಲದ್‌ರವರೇ ಪ್ರಾರಂಭ ಮಾಡಿ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಂತ್ರಿಗಳು ಇಲ್ಲ.

ಅಧ್ಯಕ್ಷರು: ನೀವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಪ್ರಾರಂಭಮಾಡಿ. ಮಂತ್ರಿಗಳನ್ನು ಕರೆಸುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ 2002-03ನೇ ಸಾಲಿನ ಬಜೆಟ್‌ನಲ್ಲಿ ಪ್ರತಿಯೊಂದು ಇಲಾಖೆಯಲ್ಲಿ ಸರ್ಕಾರ ಕೊಟ್ಟಿರುವ ಆದ್ಯತೆಗಳಲ್ಲಿ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನನಗೆ ಒಂದು ಕನ್‌ಫ್ಯೂಷನ್ ಆಗುತ್ತಿದೆ. ಆರೋಗ್ಯ ಇಲಾಖೆಗೆ ಮೂರು ಜನ ಮಂತ್ರಿಗಳು ಇದ್ದಾರೆ. ಕಾಗೋಡು ತಿಮ್ಮಪ್ಪನವರು ಇದ್ದಾರೆ, ಡಾ: ಮಾಲಕರೆಡ್ಡಿಯವರು ಇದ್ದಾರೆ. ನನಗೆ ಇವತ್ತೇ ಗೊತ್ತಾಗಿದ್ದು. ಡಾ:ಮಲಕಾ ರೆಡ್ಡಿಯವರು ಮತ್ತು ಶ್ರೀಮತಿ ನಫೀಜಾಫಜಲ್ ಅವರಿಗೆ ಇಬ್ಬರಿಗೂ ಜಗಳ ನಡೆಯುತ್ತಿದೆ ಎಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದಾಗಲೇ ಗೊತ್ತಾದದ್ದು. ಇದು ಎಲ್ಲಿಂದ ಎಲ್ಲಿಯ ಸಂಬಂಧ. ಈ ಪೋರ್ಟ್‌ಫೋಲಿಯೊಗಳನ್ನು ಯಾವರೀತಿ ಹಂಚಿದ್ದಾರೆ ಎಂಬುದು ನಮಗೆ ಅರ್ಥವೇ ಆಗುವುದಿಲ್ಲ. ಅವರಿಗೆ ಸೈನ್ಸ್ ಅಂಡ್ ಟೆಕ್ನಾಲಜಿ ಜೊತೆಗೆ ಆಯುರ್ವೇದ ಡೈರೆಕ್ಟರ್ ಎಂದರೆ ಇದೊಂದು ಬಾಲಂಗೋಚಿ ಇದ್ದಹಾಗೆ. ಈಗ ಹೋಮಿಯೋಪಥಿಯನ್ನು ಯಾರಿಗೆ ಕೊಟ್ಟಿದ್ದೀರಿ ಎಂದು ಕೇಳುವಂಥ ಸ್ಥಿತಿ ನಮಗೆ ಬಂದಿದೆ. ಪಾಪ, ಮಾಲಕರೆಡ್ಡಿಯವರು ಇರುವುದರಲ್ಲಿ ಚೆನ್ನಾಗಿ ಮಾಡುತ್ತಿದ್ದರು. ಅದನ್ನು ಕಿತ್ತು ಮೂರು ಭಾಗ ಮಾಡಿ ಅವರಿಗೆ ಭಾಗವನ್ನು ಕೊಟ್ಟಿದ್ದಾರೆ. ಏಕೆ ಈ ರೀತಿ ಮಾಡುತ್ತಿದ್ದಾರೆಂಬುದು ನಮಗೆ ಅರ್ಥವಾಗುವುದಿಲ್ಲ. ಈ ತರಹ ಹಂಚಿದ್ದಾರೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲೂ ಅವರೇನೋ ಮಾಡುತ್ತಿದ್ದರು. ಅದನ್ನೂ ಮೂರು-ನಾಲ್ಕು ಇಲಾಖೆಗಳು ಎಂದು ಮಾಡಿದ್ದಾರೆ. ಕೊನೇಪಕ್ಷ ಒಬ್ಬರಾದರೂ ಇರಬಹುದಾಗಿತ್ತು. ಸ್ವಾಭಾವಿಕವಾಗಿ ಹಿರಿಯ ಮಂತ್ರಿ ಘೋರ್ಪಡೆಯವರಿಗೆ ಖಾತೆ ವಿಭಾಗ ಮಾಡಿದ್ದಾರೆ ಎಂದು ಬೇಜಾರಾಗಿಯೇ ಇರುತ್ತದೆ. ಈಗ ಇನ್ನೊಬ್ಬರಿಗೆ ಕಿತ್ತು ಹಂಚಿದ್ದಾರೆ, ಆ ಮಂತ್ರಿಗಳನ್ನಾದರೂ ಕರೆಸಿ. ಅವರಿಗೆ ಸ್ವಲ್ಪ ಎನ್‌ಥೂಸಿಯಾಸಂ ಇದೆ. ಪಾಪ, ಆಗಲೇ ಅವರು ಮೀಟಿಂಗ್ ಎಲ್ಲಾ ಶುರು ಮಾಡಿದ್ದಾರೆ. ಕುಡಿಯುವ ನೀರು ಅದು ಇದು ಹುಡುಕುತ್ತಿದ್ದಾರೆ. ಬೇಡಿಕೆ ಮೇಲೆ ಚರ್ಚೆ ಮಾಡುವಾಗಲೂ ಬರಲಿಲ್ಲವೆಂದರೆ ಹೇಗೆ? ಯಾರಾದರೂ ಒಬ್ಬರನ್ನು ಕರೆಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದು ಏನೆಂದರೆ ನಿಮ್ಮ ಕಾಲದಲ್ಲಿ ಆದಂಥ ನೋಟಿಫಿಕೇಷನ್ಸ್ ಇದ್ದುವಲ್ಲಾ, ಹೆಚ್ಚು ಕಡಿಮೆ ಅವುಗಳನ್ನು ತೆಗೆದು ನೋಡಿಯೇ ಮಾಡಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಹಾಗಾದರೆ, ನಮ್ಮ ದಾರಿಯಲ್ಲಿ ನೀವು ಬರುತ್ತಿದ್ದೀರಿ ಅಂದರೆ ನಮ್ಮದೇನೂ ತಕರಾರು ಇಲ್ಲ. ಸಂತೋಷ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಅಧ್ಯಕ್ಷರೇ, ನಾನು ಮೊನ್ನೆಯೇ ಹೇಳಿದ್ದೆ. ಈಗ ಮೇಲ್ಮನೆಯಲ್ಲಿ ಮಂತ್ರಿಗಳನ್ನು ಸಭೆಗೆ ಪರಿಚಯ ಮಾಡಿಕೊಟ್ಟಿದ್ದಾರೆ. ನಿನ್ನೆ ದಿವಸ ಪಾರ್ಲಿಮೆಂಟ್‌ನಲ್ಲೂ ಮಾಡಿಕೊಟ್ಟಿದ್ದಾರೆ. ಇಲ್ಲಿ ಈ ಒಂದು ಕ್ರಮ ನಿಂತು ಹೋಗಿದೆ. ಹಿಂದೆ ಇದೆಲ್ಲಾ ನಡೆಯುತ್ತಿತ್ತು. ಕೊನೆ ಪಕ್ಷ ನೀವು ಪರಿಚಯ ಮಾಡಿ ಕೊಟ್ಟಿದ್ದರೆ ಯಾರಿಗೆ ಯಾವ ಪೋರ್ಟ್‌ಫೋಲಿಯೋ ಎಂಬುದು ನಮಗೆ ಗೊತ್ತಾಗುತ್ತಿತ್ತು.

ಅಧ್ಯಕ್ಷರು: ನೀವು ಪ್ರಾರಂಭ ಮಾಡಿ ಮಂತ್ರಿಗಳು ಬರುತ್ತಾರೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಈ ಬಜೆಟ್‌ನಲ್ಲಿ ಬಹಳ ಪ್ರಾಮುಖ್ಯವಾಗಿ ರಾಜ್ಯದ ಮತ್ತು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಬಹಳ ಪ್ರಮುಖವಾದಂಥ ಪಾತ್ರವನ್ನು ವಹಿಸುವ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ರೇಷ್ಮೆ - ಈ ಇಲಾಖೆಗಳ ಮೇಲೆ ಸರ್ಕಾರ ಎಷ್ಟೊಂದು ಆದ್ಯತೆಯನ್ನು ಕೊಡಬೇಕಿತ್ತು, ಕೊಡಬೇಕಾಗಿದೆ, ಅದನ್ನು ಸರಿಯಾದ ರೀತಿಯಲ್ಲಿ ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ, ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಬಹುಸಂಖ್ಯಾತ ಜನ ಏನು ಇವತ್ತು ಗ್ರಾಮೀಣ ಪ್ರದೇಶದಲ್ಲಿ ಇದ್ದಾರೆ. ಈ ಗ್ರಾಮೀಣ ಪ್ರದೇಶದ ಮಾನವ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳತಕ್ಕಂಥ ದೃಷ್ಟಿಯಿಂದ ಬಹಳ ಪ್ರಾಮುಖ್ಯವಾದ ಈ ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಪಶುಸಂಗೋಪನೆ ಈ ಎಲ್ಲಾ ಇಲಾಖೆಗಳ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಅಥವಾ ಬೇಡಿಕೆ ಮೇಲೆ ಕೆಲವು ವಿಚಾರಗಳನ್ನು ತಿಳಿಯಪಡಿಸುವುದಕ್ಕೆ ಇಚ್ಛಿಸುತ್ತೇನೆ. ಈ ರಾಷ್ಟ್ರದ ಬೆನ್ನೆಲುಬು ರೈತ ಎಂದು ನಾವೆಲ್ಲರೂ ಹೇಳುತ್ತೇವೆ. ಆತನನ್ನು ಈ ದೇಶದ ಬೆನ್ನೆಲುಬು ಎಂದು ಹೇಳುವಾಗ ರೈತನ ಕಸುಬಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಹಿಪ್ಪುನೇರಳೆ ಅಂದರೆ ರೇಷ್ಮೆ - ಇಂತಹ ಬಹಳ ಮಹತ್ವವಾದಂಥ ಕಾಯಕಗಳಲ್ಲಿ ತೊಡಗಿರುವಂಥ ರೈತರಿಗೆ ನಮ್ಮ ಕರ್ನಾಟಕದಲ್ಲಿ ಸಾಕಷ್ಟು ನಿಸರ್ಗ ನೀಡಿದಂಥ ಸಂಪನ್ಮೂಲಗಳನ್ನು ಸರಿಯಾಗಿ ಬಳಕೆ ಮಾಡುವುದರ ಮೂಲಕ ರಾಜ್ಯದ ಜನತೆಯ ಅಭಿವೃದ್ಧಿ, ರಾಜ್ಯದ ಆರ್ಥಿಕ ಅಭಿವೃದ್ಧಿ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಂಥ ಈ ಇಲಾಖೆಗಳಿಗೆ ಸರ್ಕಾರ ಹೆಚ್ಚಿನ ಆದ್ಯತೆ ಕೊಡುವ ದೃಷ್ಟಿಯಲ್ಲಿ ಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯ ಬಹುಶ : ಭಾರತದ ಅನೇಕ ರಾಜ್ಯಗಳನ್ನು ನಾವು ತುಲನೆ ಮಾಡಿ ನೋಡಿದಾಗ ಪ್ರತಿಯೊಂದು ರಾಜ್ಯಗಳಲ್ಲಿರುವಂತಹ ನಿಸರ್ಗದ ಸಂಪನ್ಮೂಲಗಳನ್ನು ತುಲನೆ ಮಾಡಿ ನೋಡಿದಾಗ ಕರ್ನಾಟಕ ದೈವದತ್ತವಾಗಿ ನಿಸರ್ಗ ನೀಡಿದಂತಹ ಈ ಸಂಪನ್ಮೂಲಗಳು ಅಂದರೆ ಉತ್ತಮವಾದ ಮತ್ತು ಫಲವತ್ತಾದ ಭೂಮಿಯನ್ನು ಅನೇಕ ಉತ್ತಮವಾದ ಹವಾಗುಣಗಳನ್ನು ಹೊಂದಿದಂತಹ ಪ್ರದೇಶವನ್ನು ಮತ್ತು ನಿಸರ್ಗ ನೀಡುವಂತಹ ಸೂರ್ಯಪ್ರಕಾಶವನ್ನು ಮತ್ತು ಮಳೆ ಬಹುಶ: ಅತಿ ಕಡಿಮೆ ಮಳೆಯಾಗುವ ಪ್ರದೇಶಗಳನ್ನು ಹಿಡಿದುಕೊಂಡು ಅತಿ ಹೆಚ್ಚು ಮಳೆಯಾಗುವ ಪ್ರದೇಶಗಳನ್ನು ಹಿಡಿದುಕೊಂಡು ಇಂತಹ ಎಲ್ಲಾ ನಿಸರ್ಗದ ಕೊಡುಗೆಗಳನ್ನು ಪಡೆದಂತಹ ಪ್ರದೇಶ-ರಾಜ್ಯ. ಈ ರಾಜ್ಯದಲ್ಲಿ ಈ ಎಲ್ಲಾ ಕೃಷಿಯ ಬೆಳವಣಿಗೆ ಕೃಷಿಯ ಉತ್ಪಾದನೆಗಳಿಂದ ರೈತನ ಅಭಿವೃದ್ಧಿ, ತೋಟಗಾರಿಕೆಯ ಬೆಳವಣಿಗೆ, ತೋಗಾರಿಕೆಯಿಂದ ರೈತರ ಅಭಿವೃದ್ಧಿ ಮತ್ತು ಪಶುಸಂಗೋಪನೆ ಬಹುಶ: ಉಳಿದ ಎಲ್ಲಾ ರಾಜ್ಯಗಳಿಗಿಂತ ಇಲ್ಲಿ ಪಶುಸಂಗೋಪನೆಗೆ ಸಹ ಬಹಳ ಉತ್ತಮವಾದಂತಹ ಹವಾಗುಣಗಳನ್ನು ಪಡೆದಿದೆ ಮತ್ತು ರೇಷ್ಮೆ ಬಗ್ಗೆ ಹೇಳುವಂತಹ ಒಂದು ಹೆಮ್ಮೆ ಅಂದರೆ ಬಹುಶ: ಭಾರತದಲ್ಲಿ ರೇಷ್ಮೆಯ ಒಂದು ಉತ್ಪಾದನೆಯಲ್ಲಿ ಬಹು ದೊಡ್ಡ ಸ್ಥಾನವನ್ನು ಪಡೆದಿರುವುದು ಕರ್ನಾಟಕ ರಾಜ್ಯ. ಈ ಎಲ್ಲಾ ದೃಷ್ಟಿಯಿಂದ ಸರ್ಕಾರ ಏನು ಆಧ್ಯತೆಯನ್ನು ಕೊಡಬೇಕಾಗಿದೆ ಆ ದೃಷ್ಟಿಯಿಂದ ಇವತ್ತು ಆದ್ಯತೆ ಕೊಟ್ಟಿಲ್ಲ, ಕೊಡುತ್ತಿಲ್ಲ ಎನ್ನುವಂತಹ ವಿಚಾರವನ್ನು ನಾನು ಪ್ರಾರಂಭ ಮಾಡುತ್ತಿದ್ದೇನೆ. ಈ ಒಂದು ಕೃಷಿಯಲ್ಲಿ ಬಹಳ ಮುಖ್ಯವಾಗಿ ಆಹಾರದ ಬೆಳೆಗಳು ಎನ್ನಬಹುದು ಅಥವಾ ಹಣಕಾಸಿನ ಬೆಳೆಗಳು ಎನ್ನಬಹುದು ಅಥವಾ ಮಸಾಲೆ ಸಾಮಾನುಗಳು, ತೋಟಗಾರಿಕೆ ಬೆಳೆಗಳು ಎನ್ನಬಹುದು. ಹಣ್ಣು ಹಂಪಲು ಬೆಳೆಗಳನ್ನು ನಾವು ಇವತ್ತು ಈ ತೋಟಗಾರಿಕೆಯಲ್ಲಿ

ನಾವು ವಿಚಾರ ಮಾಡಿದಾಗ ಇವತ್ತು ನಾವು ಇಲ್ಲಿ ಎಲ್ಲಾ ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶ ಇದೆ. ರಾಜ್ಯದ ಸೀರಿಯಲ್ಸ್, ಆಹಾರಧಾನ್ಯ ಬೆಳೆಯುವಂತಹ ಈ ಪ್ರದೇಶದಲ್ಲಿ ಮಳೆ ಬಹಳ ಕಡಿಮೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಬಹುಶ : ಕರ್ನಾಟಕ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಮಳೆ ಕಡಿಮೆಯಾಗುತ್ತಿರುವುದರಿಂದ ನಿಸರ್ಗ ನೀಡಿದಂತಹ ಮಳೆಯ ಒಂದು ಅವಕಾಶವನ್ನು ಪಡೆದು ಸಾಕಷ್ಟು ಪ್ರದೇಶದಲ್ಲಿರುವ ಕೆರೆಕಟ್ಟೆಗಳಲ್ಲಿ ಹೂಳು ತೆಗೆಯುವಂತಹ ಯೋಜನೆಗಳಲ್ಲಿ ಸರ್ಕಾರ ಹೇಳುತ್ತಾ ಬಂದಿದೆ. ಆದರೆ ಎಷ್ಟೊಂದು ಆದ್ಯತೆ ಕೊಟ್ಟು ಆ ಕೆರೆ ಕಟ್ಟೆಗಳ ಕೆಲಸಗಳನ್ನು ಈ ರಾಜ್ಯದಲ್ಲಿ ನೆರವೇರಿಸಬೇಕಿತ್ತು ಆ ಕಾರ್ಯವನ್ನು ಮಾಡಲಿಕ್ಕೆ ಸರ್ಕಾರ ವಿಫಲವಾಗಿದೆ ಎನ್ನುವಂತಹ ವಿಚಾರವನ್ನು ಹೇಳಬೇಕಾಗುತ್ತದೆ. ಬಹುಶ 25 ಸಾವಿರಕ್ಕಿಂತ ಹೆಚ್ಚು ಕೆರೆಗಳು ಇರುವಂತಹ ಈ ರಾಜ್ಯದಲ್ಲಿ 40 ಸಾವಿರಕ್ಕಿಂತ ಹೆಚ್ಚು ಕೆರೆಗಳು ಇರುವಂತಹ ಈ ರಾಜ್ಯದಲ್ಲಿ ಕನಿಷ್ಟ 25 ಸಾವಿರ ಕೆರೆಗಳ ಹೂಳು ಎತ್ತುವ ಕೆಲಸವನ್ನು ಪ್ರಾರಂಭ ಮಾಡಬೇಕೆನ್ನುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ, ಈ ವರ್ಷದಲ್ಲಿ ನಾವು 5 ಸಾವಿರ ಕೆರೆಗಳ ಹೂಳು ಎತ್ತುವ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ, ಎನ್ನುವಂತಹ ಸರ್ಕಾರದ ಘೋಷಣೆ ಆ ದಿಸೆಯಲ್ಲಿ ಸರಿಯಾದಂತಹ ಪ್ರಯತ್ನ, ಎಂದೂ ಕಾಣದಂತಹ ಒಂದು ಬರಗಾಲವನ್ನು ಕಳೆದ ವರ್ಷ ನಾವು ಕಂಡಿದ್ದೇವೆ. ಬಹುಶ : ಇಂತಹ ಬರಗಾಲವನ್ನು ಧಾರವಾಡ ನಮ್ಮ ಜಿಲ್ಲೆ ಎಂದೂ ಕಂಡಿಲ್ಲ. ಐತಿಹಾಸಿಕವಾದ ಒಂದು ಬರಗಾಲವನ್ನು ಧಾರವಾಡ ಜಿಲ್ಲೆ ಕಂಡಿದೆ ಮತ್ತು ಕರ್ನಾಟಕ ರಾಜ್ಯದ 175 ತಾಲ್ಲೂಕುಗಳಲ್ಲಿ ಸಹ ಹಿಂದೆಂದೂ ಕಾಣದಂತಹ ಒಂದು ಬಂಗಾಲವನ್ನು ಕಂಡಿದ್ದು ಕಳೆದ ವರ್ಷ. ಆದರೆ ಈ ನೀರಾವರಿಗೆ ಸರ್ಕಾರ ಎಷ್ಟೊಂದು ಆದ್ಯತೆ ಕೊಡುತ್ತೇವೆಂದು ಪ್ರಚಾರ ಮಾಡುತ್ತಾ ಬಂತು, ಆ ಪ್ರಚಾರಕ್ಕೆ ತಕ್ಕಂತೆ ಯೋಜನೆಯನ್ನು ರೂಪಿಸಿ, ಪ್ರತಿಯೊಂದು ಮತ ಕ್ಷೇತ್ರದಲ್ಲಿ ಅಥವಾ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಬರುವಂತಹ ಕೆರೆಗಳನ್ನು ವಿಂಗಡಣೆ ಮಾಡಿ ಅವುಗಳ ಹೂಳು ತೆಗೆಸುವಂತಹ ಕಾರ್ಯವಾಗಲಿ, ಅವುಗಳ ಅಚ್ಚುಕಟ್ಟುಗಳನ್ನು ಸರಿಪಡಿಸುವಂತಹ ಕಾರ್ಯವಾಗಲಿ ಅಥವಾ ಆದಕ್ಕೆ ಜಲಾನಯನ ಪ್ರದೇಶದಲ್ಲಿ ಏನು ನೀರು ಬರುತ್ತಿದೆ, ಆ ಪ್ರದೇಶವನ್ನು ಬೆಳವಣಿಗೆ ಮಾಡುವಂತಹ ಕಾರ್ಯವಾಗಲಿ ಇವು ಯಾವುವು ಹೆಚ್ಚು ಆದ್ಯತೆಯಿಂದ ಸರ್ಕಾರ ಮಾಡಲಿಲ್ಲ ಎಂದು ನಾನು ಹೇಳಬೇಕಾಗಿದೆ. ಬಹಳ ಮುಖ್ಯವಾಗಿ ರೈತನಿಗೆ ಫಲವತ್ತಾದ ಭೂಮಿ ಇದ್ದಾಗ್ಯೂ ಸಹ, ಉತ್ತಮವಾದ ಹವಾಮಾನ ಇದ್ದಾಗ್ಯೂ ಸಹ ಬಹಳ ಮುಖ್ಯವಾಗಿ ಬೆಳೆಯನ್ನು ಬೆಳೆಯಲಿಕ್ಕೆ ಬೇಕಾದದ್ದು ನೀರು. ಈ ನೀರು, ಯಾವ ಕಾಲದಲ್ಲಿ ಮಳೆ ಬೀಳಬೇಕಾಗಿದೆ ಆ ಕಾಲದಲ್ಲಿ ಬೀಳದೇ ಇರುವುದರಿಂದ ಇವತ್ತು ಇರುವಂತಹ ಕೆರೆಕಟ್ಟೆಗಳ ಮೂಲಕ ನಾವು ನೀರು ಸಂಗ್ರಹಿಸಿ ಎಲ್ಲೆಲ್ಲಿ ನೀರಾವರಿಯನ್ನು ಆ ಕೆರೆಗಳ ಮೂಲಕ ಮಾಡಲಿಕ್ಕೆ ಸಾಧ್ಯತೆ ಇದೆ ಅವುಗಳನ್ನು ಮಾಡಲಿಕ್ಕೆ ಸಾಧ್ಯವಾಗಿದೆ. ಹೂಳು ತೆಗೆಸುವಂತ ಕಾರ್ಯವನ್ನು ಮೊದಲ ಆದ್ಯತೆಯಲ್ಲಿ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ಸದಸ್ಯರಾದ ಬೆಲ್ಲದ್‌ರವರು ಮಾತನಾಡುತ್ತಿದ್ದಾರೆ. ನಾವು ಕೇಳುತ್ತಿದ್ದೇವೆ. ಆದರೆ ಆ ಕಡೆ ಯಾರಾದರೂ ಕೇಳುತ್ತಿದ್ದಾರೆಯೇ? ಆದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

ಶ್ರೀ ಚಂದ್ರಕಾಂತ ಬೆಲ್ಲದ್: ಅಲ್ಲಿ ಏನಾಗಿದೆ ಎನ್ನುವುದನ್ನು ಮಾನ್ಯ ಅಧ್ಯಕ್ಷರು ಗಮನಿಸಬೇಕು. ಸರಿಯಾದ ರೀತಿಯಲ್ಲಿ ಅವರಿಗೆ ಹೇಳಬೇಕು.

ಅಧ್ಯಕ್ಷರು: ಇವತ್ತು ಎಷ್ಟು ಬೇಡಿಕೆಗಳನ್ನು ಮಂಡಿಸಿದ್ದೇವೆ, ಆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಅವರು ಏನು ಮಾತನಾಡುತ್ತಿದ್ದಾರೆ ಆ ಕಡೆ ಗಮನಹರಿಸಿದರೆ ಒಳ್ಳೆಯದು. ತಾವುಗಳು ಕಿವಿ ಕೊಟ್ಟು ಕೇಳಿ.

ಶ್ರೀ ಚಂದ್ರಕಾಂತ ಬೆಲ್ಲದ್: ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು ಇದ್ದಾರೆಯೇ ಎನ್ನುವುದನ್ನು ತಾವೇ ಗಮನಿಸಬೇಕಾಗುತ್ತದೆ ಅಧ್ಯಕ್ಷರೇ.

ಅಧ್ಯಕ್ಷರು: ಹನ್ನೊಂದು ಬೇಡಿಕೆಗಳನ್ನು ಇವತ್ತು ಏನು ಮಂಡಿಸಿದ್ದೇವೆ, ಆ ಬಗ್ಗೆ ಮಾನ್ಯ ಸದಸ್ಯರುಗಳು ಏನು ಹೇಳುತ್ತಾರೆ ಎನ್ನುವುದನ್ನು ಸಂಬಂಧಪಟ್ಟ ಮಂತ್ರಿಗಳು ದಯವಿಟ್ಟು ಕೇಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಪಟ್ಟಿಯಲ್ಲಿರುವ ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡಬಹುದು?

ಅಧ್ಯಕ್ಷರು: ಎಲ್ಲಾ ಅಂದರೆ 11 ಬೇಡಿಕೆಗಳು ಮಾತ್ರ. ಆಮೇಲೆ ಉಳಿದ ಬೇಡಿಕೆಗಳನ್ನು ತೆಗೆದುಕೊಳ್ಳೋಣ.

ಶ್ರೀ ಚಂದ್ರಕಾಂತ ಬೆಲ್ಲದ್: ಬಹುಶ: ಈ ರಾಜ್ಯದಲ್ಲಿ ಕಡಿಮೆ ಪ್ರಮಾಣದ ಮಳೆಯಾಗಿ ರಾಜ್ಯದಲ್ಲಿ ಬರಗಾಲ ಅನುಭವಿಸುತ್ತಿರುವಾಗ ಎಲ್ಲಾ ಕೆರೆಗಳಲ್ಲಿ ನೀರು ಇಲ್ಲದೆ ಒಣಗಿ ಹೋದ ಈ ಪ್ರಸಂಗದಲ್ಲಿ ಬಹಳ ಆದ್ಯತೆಯಿಂದ ಸರ್ಕಾರ ಈ ಹೂಳು ತೆಗೆಸುವಂತಹ ಕೆಲಸ, ಅಚ್ಚುಕಟ್ಟುಗಳನ್ನು ಸರಿಪಡಿಸುವಂತಹ ಕೆಲಸ ಕಾಲುವೆಗಳನ್ನು ಸರಿಪಡಿಸುವಂತಹ ಕೆಲಸ ನಡೆಯಬೇಕಾಗಿತ್ತು; ಅದು ನಡೆಯಲಿಲ್ಲ. ಬಹುಶ : ದೊಡ್ಡ ದೊಡ್ಡ ಜಲಾಶಯಗಳು ಏನಿವೆ ಭದ್ರಾ ಹಿಡಿದುಕೊಂಡು ನಮ್ಮ ಮಲಪ್ರಭಾ ಹಿಡಿದುಕೊಂಡು ಘಟಪ್ರಭಾ ಹಿಡಿದುಕೊಂಡು ಈ ಎಲ್ಲಾ ಜಲಶಾಯಗಳಲ್ಲಿ ಸಹ ಸರಿಯಾಗಿ ನೀರು ಬರದೇ ಇವತ್ತು ಅಲ್ಲಿಯು ಸಹ ಸರ್ಕಾರ ಆದ್ಯತೆ ಕೊಟ್ಟು ಅಲ್ಲಿ ಸಹ ಅನೇಕ ವರ್ಷಗಳಿಂದ ನಮ್ಮ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿದ ನಂತರದಲ್ಲಿ ಅಲ್ಲಿ ಶೇಖರಣೆಯಾದ ಹೂಳು ತೆಗೆಸಲಿಕ್ಕೂ ಸಹ ಆದ್ಯತೆಯನ್ನು ಕೊಟ್ಟು ಆ ಹೂಳು ತೆಗೆಸಬಹುದಾಗಿತ್ತು ಮತ್ತು ಕಾಲುವೆಗಳ ರಿಪೇರಿಯನ್ನು ಸಹ ಸರಿಯಾದ ಪ್ರಮಾಣದಲ್ಲಿ ರಿಪೇರಿ ಮಾಡಿ ಈ ವರ್ಷದ ನೀರಾವರಿಯಿಂದ ಹೆಚ್ಚು ಪ್ರಯೋಜನವಾಗಿ ರೈತರಿಗೆ ಮುಟ್ಟುವಲ್ಲಿ ಅಣೆಕಟ್ಟುಗಳು ಕಾಲುವೆಗಳು ಏನು ಇವೆ ಅವುಗಳನ್ನು ಸಹ ಸರಿಯಾಗಿ ಮಾಡಬಹುದಾಗಿತ್ತು. ಆದರೆ ಅದಕ್ಕೂ ಸಹ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಲಿಲ್ಲವೆಂದು ಹೇಳಬೇಕಾಗುತ್ತದೆ. ಇವತ್ತು ಈ ರಾಜ್ಯ ಎಣ್ಣೆ ಕಾಳು ಬೆಳೆಯುವುದರಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸುವಂತಹ ಈ ರಾಜ್ಯ ಮತ್ತು ಆಹಾರಧಾನ್ಯ, ಜೋಳ, ಗೋವಿನ ಜೋಳ, ಇವುಗಳನ್ನು ಸಹ ಬೆಳೆಯುವಂತಹ ಈ ರಾಜ್ಯ ಅಥವಾ ಹತ್ತಿ ಬೆಳೆಯುವಂತಹ ಪ್ರದೇಶ, ಇವತ್ತು ಯಾವ ಒಂದು ದಿಸೆಯಲ್ಲಿ ನಮ್ಮ ಕೀಟಗಳ ಬಾಧೆಯಿಂದ ಅಥವಾ ಹವಾಮಾನದ ಪ್ರತಿಕೂಲವಾದಂತಹ ವಾತಾವರಣದಿಂದ ಇವತ್ತು ಏನು ಉತ್ತಮವಾದಂತಹ ಬೆಳೆ ಸಿಗಬೇಕಾಗಿದೆ ಅದು ಸಿಗುತ್ತಿಲ್ಲ ಅದರ ಪ್ರಮಾಣ ಎಣ್ಣೆ ಕಾಳುಗಳ ಉತ್ಪಾದನೆ ಸಹ ಕಡಿಮೆಯಾಗುತ್ತಿದೆ. ಸೀರಿಯಲ್ಸ್ ಅಂದರೆ ಆಹಾರಧಾನ್ಯಗಳ ಉತ್ಪಾದನೆಯು ಕಡಿಮೆಯಾಗುತ್ತಿದೆ. ಅದರ ಜೊತೆಗೆ ಹಣಕಾಸಿನ ಬೆಳೆಯಾದ ಹತ್ತಿ ಉತ್ಪಾದನೆ

ಸಹ ಕಡಿಮೆಯಾಗಿದೆ. ಹತ್ತಿ ಬೆಳೆಯುವಂತಹ ಪ್ರದೇಶಗಳಾದ ರಾಯಚೂರು, ಬಳ್ಳಾರಿ ಅಥವಾ ಅತಿ ಹೆಚ್ಚು ಪ್ರಮಾಣದಲ್ಲಿ ಹತ್ತಿ ಬೆಳೆಯುವಂತಹ ಈ ಪ್ರದೇಶದಲ್ಲಿ ಸಹ ಹತ್ತಿ ಬೆಳೆಯಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಅನೇಕ ರೋಗರುಜಿನಗಳಿಂದ ಇಳುವರಿ ಕಡಿಮೆಯಾಗುತ್ತದೆ ಮತ್ತು ಅದರ ಜೊತೆಗೆ ಸರಿಯಾದ ಭೂಮಿಯ ಫಲವತ್ತತೆ ಸಹ ಹಾಳಾಗಿ ಆ ಜಲಾನಯನ ಪ್ರದೇಶದಲ್ಲಿ ಇರುವಂತಹ ಫರ್ಟಿಲಿಟಿ ಏನು ಇದೆ ಅದು ಹಾಳಾಗಿದೆ. ಅದಕ್ಕೂ ಸಹ ಸರಿಯಾದಂತಹ ಒಂದು ತಾಂತ್ರಿಕ ಜ್ಞಾನವನ್ನು ನೀಡಿ ಅಥವಾ ಅದರ ಸುಧಾರಣೆಯನ್ನು ಮಾಡಿ ಅಲ್ಲಿ ರೈತರು ಅನುಭವಿಸುತ್ತಿರುವಂತಹ ಆ ಪ್ರದೇಶದ ಭವಣೆಯನ್ನು ನೀಗಿಸುವಲ್ಲಿ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳು ಸಹ ವಿಫಲಾವಾಗಿದೆ. ಆ ದಿಸೆಯಲ್ಲಿ ಸಹ ಸರ್ಕಾರ ಯಾವ ಪ್ರಯತ್ನವನ್ನು ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ ಎಂದು ನಾನು ಹೇಳಬೇಕಾಗಿದೆ. ಒಂದು ದೃಷ್ಟಿಯಿಂದ ನಾವು ಇವತ್ತು ಬೆಳೆಗಳ ಬಗ್ಗೆ ನಾವು ಲಕ್ಷ್ಯ ಕೊಟ್ಟರೆ ಅದರಿಂದ ಬಹಳ ಪ್ರಯೋಜನವಾಗುತ್ತದೆ. ಈವತ್ತು ಅನೇಕ ಪ್ರದೇಶದಲ್ಲಿ ಎಲ್ಲಾ ಬೆಳೆಗಳನ್ನು ಬೆಳೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಎಲ್ಲಾ ಬೆಳೆಗಳನ್ನು ಎಲ್ಲಾ ಪ್ರದೇಶದಲ್ಲಿ ಬೆಳೆಯುವುದನ್ನು ನಾವು ನೋಡಲಿಕ್ಕಾಗಿ ಅದು ಅನೇಕ ದೃಷ್ಟಿಯಿಂದ ಅಂದರೆ ಹವಾಮಾನದ ವೈಪರೀತ್ಯದಿಂದ ಆಗಲಿ, ಭೂಮಿಯಲ್ಲಿರುವ ಫರ್ಟಿಲಿಟಿಯ ದೃಷ್ಟಿಯಿಂದ ಆಗಲಿ ಅಥವಾ ಇವತ್ತು ರೋಗ ರುಜಿನಗಳಿಂದ ಆಗಲಿ ಕೆಲವು ಪ್ರದೇಶದಲ್ಲಿ ಕೆಲವು ಬೆಳೆಗಳನ್ನು ಬೆಳೆಯುವುದಕ್ಕೆ ನಾವು ನಿರ್ಬಂಧವನ್ನೂ ಕೃಷಿ ವಿಶ್ವವಿದ್ಯಾನಿಲಯ ಮಾಡಬೇಕಾಗುತ್ತದೆ.

ಏಕೆಂದರೆ, ಅಲ್ಲಿ ಆ ರೈತನಿಗೆ ಲಾಭದಾಯಕವಾಗಿ ಆ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಈ ಹವಾಮಾನ ಮತ್ತು ಭೂಮಿಯ ಫಲವತ್ತತೆ ಮತ್ತು ನೀರಿನ ಅವಕಾಶ ಮತ್ತು ರೋಗರುಜಿನಗಳ ಒತ್ತಡವನ್ನು ಗಮನಿಸಿ ಕೆಲವು ವಲಯಗಳನ್ನು ಕೆಲವು ಬೆಳೆಗಳಿಗಾಗಿಯೇ ನಿರ್ದಿಷ್ಟವಾಗಿ ಗುರುತು ಹಚ್ಚಬೇಕು. ಅಲ್ಲಿ ಲಾಭದಾಯಕವಾದಂಥ ಯಾವ ಯಾವ ಬೆಳಗಳನ್ನು ಅಲ್ಲಿರುವ ರೈತ ಬೆಳೆಯಬಹುದು ಎಂಬುದಕ್ಕೆ ಹೆಚ್ಚು ಒತ್ತುಕೊಟ್ಟು ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆ ಈ ಕೆಲಸಗಳನ್ನು ಮಾಡಬೇಕಾಗಿದೆ. ಇವತ್ತಿನ ದಿವಸ ಈ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳು ಎಷ್ಟು ಜನ ಗ್ರಾಮಗಳಿಗೆ ಹೋಗುತ್ತಿದ್ದಾರೆ? ಇವತ್ತು ಅವಶ್ಯಕತೆ ಇರುವಂಥ ಹೊಸ ಹೊಸ ಬೆಳೆಗಳ ಬಗ್ಗೆ ಯಾಗಲೀ ಅಥವಾ ಇವತ್ತಿನ ವೈಜ್ಞಾನಿಕ ಕಾಲದಲ್ಲಿ, ಅನೇಕ ವೈಜ್ಞಾನಿಕ ವಿಧಾನಗಳಿಂದ ಬೆಳೆ ತೆಗೆಯುವುದಕ್ಕಾಗಲೀ ಅಥವಾ ನೀರಾವರಿಯನ್ನು ಸರಿಯಾಗಿ ಉಪಯೋಗ ಮಾಡಿ ಅದರ ಲಾಭವನ್ನು ರೈತ ತೆಗೆದುಕೊಳ್ಳುವುದರಲ್ಲೇ ಆಗಲೀ ಅಥವಾ ಬರುವಂಥ ರೋಗ ರುಜಿನಗಳ ಬಗ್ಗೆ ಸರಿಯಾದಂಥ ಮುತುವರ್ಜಿಯಿಂದ ಅಭ್ಯಾಸ ಮಾಡಿ, ಅವರನ್ನು ಸಂರಕ್ಷಣೆ ಮಡಿ, ಅದರ ಫಸಲು ಉತ್ತಮವಾಗಿ ಬರುವಂತೆ ನೋಡಿಕೊಳ್ಳುವಲ್ಲಿ ಕೃಷಿ ವಿಸ್ತರಣಾ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾ ಇದೆ. ಇವತ್ತು ಕೃಷಿ ವಿಸ್ತರಣಾ ಇಲಾಖೆಯಲ್ಲಿ ಏನು ಕೃಷಿ ಅಧಿಕಾರಿಗಳು ಇದ್ದಾರೆ, ಅವರುಗಳು ಗ್ರಾಮಗಳಿಗೇ ಹೋಗುವುದಿಲ್ಲ. ಅವರ ಮುಖ್ಯ ಉದ್ದೇಶ ಗ್ರಾಮಗಳಿಗೆ ಹೋಗಿ, ಅಲ್ಲಿರುವಂಥ ರೈತರಿಗೆ ಇವತ್ತಿನ ವಿಜ್ಞಾನದ ಕೊಡುಗೆಯಾಗಲೀ ಅಥವಾ ಆ ಪ್ರದೇಶದಲ್ಲಿ ಬೆಳೆಯುವಂಥ ಬೆಳೆಗಳ ಬಗ್ಗೆ ಸೌಲಭ್ಯಗಳನ್ನು ಒದಗಿಸುವುದಕ್ಕಾಗಲೀ ಅಥವಾ ಆ ಜ್ಞಾನದ ತರಬೇತಿಯನ್ನು ನೀಡುವುದಾಗಲೀ ಇಂತಹ ಕಾರ್ಯದಲ್ಲಿ

ಎಷ್ಟರಮಟ್ಟಿಗೆ ಇವತ್ತು ಈ ಇಲಾಖೆ ಕೆಲಸ ಮಾಡುತ್ತಿದೆ, ಎಂಬುದನ್ನು ಇವತ್ತು ನಾವು ಗಮನಿಸಬೇಕಾಗಿದೆ. ಇವತ್ತು ಯಾವುದೇ ಹಳ್ಳಿಗೆ ಹೋಗಿ, ಇಲಾಖೆಯಿಂದ ಸರಿಯಾದಂಥ ಮಾಹಿತಿಯನ್ನು ಕೊಡುತ್ತಾ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಸರಿಯಾದಂಥ ಬೆಳೆಗಳ ಮಾಹಿತಿ ಬೇಕೆಂದರೆ ನಮ್ಮ ಕೃಷಿ ಇಲಾಖೆಯಲ್ಲಿ ಸಿಗಲಿಕ್ಕೆ ಸಾಧ್ಯವಿಲ್ಲ. ಇವತ್ತು ಎಷ್ಟು ಪ್ರಮಾಣದಲ್ಲಿ, ಯಾವ ಯಾವ ಬೆಳೆಗಳನ್ನು ಅಥವಾ ಆಹಾರ ಧಾನ್ಯಗಳನ್ನು ರಾಜ್ಯದಲ್ಲಿ ಬೆಳೆಯುತ್ತಾ ಇದೆ. ಅದರಲ್ಲಿ ಯಾವ ವಲಯದಲ್ಲಿ ಯಾವ ಬೆಳೆಗಳನ್ನು ಹೆಚ್ಚು ಬೆಳೆಯುವುದಕ್ಕೆ ಅನುಕೂಲವಾಗಿದೆ, ಈ ಅಂಕಿ ಅಂಶಗಳ ನಮ್ಮ ಕೃಷಿ ಇಲಾಖೆಯಲ್ಲಿ ಸಿಗುತ್ತಾ ಇಲ್ಲ. ಅದರಿಂದ, ಇವತ್ತು ಅನೇಕ ಪ್ರದೇಶಗಳಲ್ಲಿ ಬೇರೆ ಬೇರೆ ಬೆಳೆಗಳನ್ನು ಬೆಳೆದು ಕೈಸುಟ್ಟುಕೊಳ್ಳುವಂತಹ ಪ್ರಸಂಗಳನ್ನು ಕಾಣುತ್ತಿದ್ದೇವೆ. ಅದರ ಜೊತೆಗೆ ಕೃಷಿ ವಿಶ್ವವಿದ್ಯಾಲಯ ನೀಡುವ ಅನೇಕ ವೈಜ್ಞಾನಿಕ ಪ್ರಯೋಗಗಳ ಮೂಲಕ ಹೊಸ ಹೊಸ ಬೆಳೆಗಳ ಬಗ್ಗೆ ಯಾಗಲೀ ಹೊಸ ಹೊಸ ಭೂಮಿಯಲ್ಲಿರುವಂಥ ಲವಣಗಳ ಕೊರತೆಯಿಂದ ಆಗುವಂಥ ಬೆಳೆಗಳಲ್ಲಿ ನಾವು ಎಷ್ಟು ಉತ್ತಮವಾದ ಫಸಲು ಪಡೆಯಬಹುದು ಮತ್ತು ಅದನ್ನು ಪಡೆಯುವುದಕ್ಕೆ ಸಾಧ್ಯವಿಲ್ಲದೇ ಇರುವುದನ್ನು ನಮ್ಮ ಕೃಷಿ ವಿಶ್ವ ವಿದ್ಯಾನಿಲಯಗಳು, ಕೃಷಿ ಇಲಾಖೆಯ ಜನರಿಗೆ, ವಿಸ್ತರಣಾ ವಿಭಾಗದಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳಿಗೆ ಸರಿಯಾದಂಥ ತರಬೇತಿಯನ್ನು ನೀಡಿ, ಅವರನ್ನು ಗ್ರಾಮಗಳಿಗೆ ಕಳುಹಿಸಿ, ಅಲ್ಲಿರುವಂಥ ರೈತರಿಗೆ ತರಬೇತಿ ಕೊಟ್ಟು ಹೆಚ್ಚು ಉತ್ತಮವಾದ ಫಸಲು ಪಡೆಯುವುದಕ್ಕೆ ಅಥವಾ ಅವರಿಗೆ ವೈಜ್ಞಾನಿಕ ತಿಳುವಳಿಕೆ ಕೊಡುವಲ್ಲಿ ಈ ಇಲಾಖೆ ಕೆಲಸ ಮಾಡಬೇಕಾಗಿದೆ. ಅದರ ಜೊತೆಗೆ, ಕೃಷಿ ಇಲಾಖೆಯ ಅನೇಕ ಫಾರಂಗಳು ಇವೆ. ಆ ಫಾರಂಗಳಲ್ಲಿ ಯಾವ ಯಾವ ಬೆಳೆಗಳನ್ನು, ಆ ಪ್ರದೇಶದ ಜನರ ಸಲುವಾಗಿ ಬೆಳೆಯುತ್ತಾ ಇದ್ದಾರೆ ಅಥವಾ ಬೆಳೆದು ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸುತ್ತಿದ್ದಾರೆ ಮತ್ತು ಆ ಕೃಷಿ ಇಲಾಖೆಯ ಫಾರಂಗಳು ಎಷ್ಟರಮಟ್ಟಿಗೆ ಇವತ್ತು ಲಾಭದಾಯಕವಾಗಿ ಮತ್ತು ಪ್ರಯೋಗಗಳನ್ನು ಮಾಡಿ ಅಥವಾ ಪ್ರಾತ್ಯಕ್ಷಿಕೆಗಳನ್ನು ಮಾಡಿ ರೈತರಿಗೆ ಅದನ್ನು ತೋರಿಸುವುದರ ಮೂಲಕ ಆ ಭಾಗದಲ್ಲಿ ಆ ಬೆಳೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡುವಂಥ ಕಾರ್ಯಗಳನ್ನು ಆ ಕೃಷಿ ಇಲಾಖೆಯ ಫಾರಂಗಳು ಮಾಡುತ್ತಿವೆಯೇ ಹೇಗೆ? ಬಹುಶ: ಯಾವ ಕೃಷಿ ಇಲಾಖೆಯ ಫಾರಂನಲ್ಲಿಯೂ ಸಹಿತ ಸರಿಯಾದ ಉತ್ಪನ್ನಗಳನ್ನು ತೆಗೆಯುತ್ತಾಇಲ್ಲ. ಅಲ್ಲಿರುವಂಥ ಅಧಿಕಾರಿಗಳು, ಆ ಪ್ರದೇಶದಲ್ಲಿ ಮೂಲಭೂತವಾದಂಥ ಬೆಳೆಗಳನ್ನು ಬೆಳೆದು ಸುತ್ತಲಿನ ಪ್ರದೇಶದ ರೈತರಿಗೆ ತರಬೇತಿಯನ್ನು ನೀಡಬೇಕು. ಪ್ರಾತ್ಯಕ್ಷಿಕೆ ಮಾಡಿ, ರೈತರು ಹೆಚ್ಚು ಲಾಭದಾಯಕವಾಗಿ ಬೆಳೆಯುವುದಕ್ಕೆ ಏನು ಮಾಹಿತಿಯನ್ನು ಒದಗಿಸಬೇಕು, ಈ ಕಾರ್ಯಗಳನ್ನು ಆ ಫಾರಂಗಳು ಮಾಡುತ್ತಾ ಇಲ್ಲ. ಕೃಷಿ ಇಲಾಖೆ ಆ ಫಾರಂಗಳ ಮೂಲಕ ಇವತ್ತು ರೈತರಿಗೂ ಲಾಭ ಕೊಡುತ್ತಾ ಇಲ್ಲ ಮತ್ತು ಅದರ ಲಾಭ ಸರ್ಕಾರಕ್ಕೂ ಬರುತ್ತಾ ಇಲ್ಲ. ಈ ದಿಸೆಯಲ್ಲಿ ಈ ಇಲಾಖೆ ಕೃಷಿ ಫಾರಂಗಳನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಅವರ ಮೂಲಕವೇ ಆ ಫಾರಂಗಳ ಅಭಿವೃದ್ಧಿಯನ್ನು ಮಾಡಬೇಕು. ಆ ಭಾಗದಲ್ಲಿ ಬೇಕಾಗುವಂಥ ಬೀಜಗಳನ್ನಾಗಲೀ ಅಥವಾ ಹೊಸ ಹೊಸ ಸಂಶೋಧನೆಗಳ ಮೂಲಕ ಸಂಸ್ಕರಣೆ ಮಾಡಿದಂಥ ತಳಿಗಳನ್ನಾಗಲೀ ಒದಗಿಸುವುದಕ್ಕೆ ಕೃಷಿ ವಿಶ್ವವಿದ್ಯಾನಿಲಯಕ್ಕೆ ಎಲ್ಲಾ ಫಾರಂಗಳನ್ನು ಒಪ್ಪಿಸುವುದು ಬಹಳ ಸೂಕ್ತವೆಂದು ನಾನು ಹೇಳಬೇಕಾಗುತ್ತದೆ. ಈ ಒಂದು ದಿಸೆಯಲ್ಲಿ ನಮ್ಮ ಕೃಷಿ ಇಲಾಖೆ ಸಬ್ಸಿಡಿ ಕೊಡುವಂಥ ಕೆಲಸವನ್ನು ಅಥವಾ ರೈತರಿಗೆ ಮುಟ್ಟಿಸಬೇಕಾದಂಥ ಗೊಬ್ಬರ ಬೀಜ ಅಥವಾ ಕೀಟನಾಶಕಗಳು

ಇವುಗಳನ್ನೂ ಸಹಿತ ಕೊಡುವ ದಿಕ್ಕಿನಲ್ಲಿ ಇವತ್ತು ಕೃಷಿ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಬಹುಶ : ಖೊಟ್ಟಿ ಕಾಯಿದೆಗಳ ಮೂಲಕ ಇವತ್ತು ಗಮಕ ನೀಡುವಂಥ ಎಲ್ಲಾ ಅಂಕಿಸಂಖ್ಯೆಗಳು ಖೊಟ್ಟಿ ಅಂಕಿಸಂಖ್ಯೆಗಳು. ಇದು ಯಾವಾಗ ನಮಗೆ ಕಂಡು ಬರುತ್ತದೆಂದರೆ, ರೈತನಿಗೆ ಬೆಂಬಲ ಬೆಲೆಯನ್ನು ನೀಡಬೇಕೆಂದು ಸರ್ಕಾರ ಪ್ರಯತ್ನ ಮಾಡಿದಾಗ ನಮಗೆ ಕಂಡುಬರುವಂಥಾದ್ದು, ಯಾವ ರೈತ ಆ ಬೆಂಬಲ ಬೆಲೆಗೆ ಅಪೇಕ್ಷೆಪಟ್ಟು ಮಾರುಕಟ್ಟೆಗೆ ತನ್ನ ಉತ್ಪಾದನೆಗಳನ್ನು ತರುತ್ತಾನೆ, ಆಗ ಎಷ್ಟೋ ಖೊಟ್ಟಿ ಮಾಹಿತಿಯನ್ನು ಒದಗಿಸುತ್ತಾರೆ. ಬಹುಶ : ಆ ಬೆಳೆಯನ್ನು ಆ ರೈತರ ಒಮ್ಮೆ ಬೆಳೆದಿರುವುದಿಲ್ಲ. ಅವರ ಹೆಸರಿನ ಮೇಲೆ ಬೇರೆಯವರು ತೆಗೆದುಕೊಂಡು ಬರುವಂಥ ಪ್ರಸಂಗ ಬರುತ್ತದೆ. ಇಂಥಾದ್ದೆಲ್ಲಾ ಆಗಬೇಕಾದರೆ, ನಮ್ಮ ಕೃಷಿ ಇಲಾಖೆಯಲ್ಲಿ ಸರಿಯಾಗಿ, ನಮ್ಮ ರೈತ ಏನೇನು ಬೆಳೆಗಳನ್ನು ಬೆಳೆದಿದ್ದಾನೆ ......

ಶ್ರೀ ಎಸ್. ಸುರೇಶ್ ಕುಮಾರ್: ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಯಾರಿಗೋಸ್ಕರ ಮಾತನಾಡುತ್ತಿದ್ದಾರೆ? ನಮ್ಮದು ಬಹಳ ದೊಡ್ಡ ಬೇಡಿಕೆ ಎಂದರೆ, ಬೇಡಿಕೆಗಳ ಚರ್ಚೆ ಬಗ್ಗೆ ಕೇಳುವುದಕ್ಕೆ ಒಬ್ಬರು ಇರಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಈಗ ಕೇಳದೇ ಇರುವವರು ಯಾರು?

ಶ್ರೀ ಎಸ್. ಸುರೇಶ್ ಕುಮಾರ್: ನೀವು ಕೇಳುತ್ತಾ ಇದ್ದೀರಿ, ಏನು ಕೇಳುತ್ತಾ ಇದ್ದೀರಿ ಎಂಬುದು ಪ್ರಶ್ನೆ.

ಅಧ್ಯಕ್ಷರು: ಈಗಿನ ಬೇಡಿಕೆಗಳ ಬಗ್ಗೆ ನಾಲ್ಕು ಜನ ಮಂತ್ರಿಗಳು ಇಲ್ಲಿದ್ದಾರೆ ಮಿಕ್ಕವರನ್ನು ಮಧ್ಯಾಹ್ನ 3 ಗಂಟೆಗೆ ಬರುವುದಕ್ಕೆ ಮಾನ್ಯ ಚೀಫ್ ವಿಫ್‌ರವರು ಹೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಬೆಲ್ಲದ್‌ರವರು ಏನು ಹೇಳುತ್ತಿದ್ದಾರೆಂದು ನಾವು ಕೇಳುತ್ತಾ ಇದ್ದೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಹಾಗಾದರೆ, ಅವರು ಏನು ಮಾತನಾಡುತ್ತಿದ್ದಾರೆ, ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಈಗ ಏನೂ ಮಾತನಾಡುತ್ತಾ ಇಲ್ಲ, ನಿಂತಿದ್ದಾರೆ ಅಷ್ಟೆ.

ಅಧ್ಯಕ್ಷರು: ಇದರ ಬಗ್ಗೆ ಚರ್ಚೆ ಬೇಡ.

ಶ್ರೀ ಎಸ್. ಸುರೇಶ್ ಕುಮಾರ್: ಹೀಗೆಯೇ ಸಾರಿಗೆ ಬಸ್ಸುಗಳೂ ಓಡುತ್ತಿದ್ದುದು...

ಶ್ರೀ ಕೆ.ಹೆಚ್. ರಂಗನಾಥ್: ನಾವು ಇಲ್ಲೇನು ತಮಾಷೆಗೆ ಕುಳತುಕೊಂಡಿರುತ್ತೇವೆಯೇ? ತಮಾಷೆಗೆ ಕುಳಿತುಕೊಂಡಿರುವುದಿಲ್ಲ. ಮಾನ್ಯ ಸದಸ್ಯರು ಹೇಳುತ್ತಾ ಇದ್ದರು, ಇವತ್ತಿನ ದಿವಸ ಅದು ಸರಿಯಾಗಿ ಆಗುತ್ತಾ ಇಲ್ಲ, ಸಬ್ಸಿಡಿ ಕೊಡತಕ್ಕ ಗೊಬ್ಬರ, ಔಷಧದ ಬಗ್ಗೆ ಬೆಲ್ಲದ್‌ರವರು ಪ್ರಸ್ತಾಪ ಮಾಡುತ್ತಿದ್ದರು. ನಾವು ಕೇಳಿಸಿಕೊಳ್ಳುತ್ತಾ ಇದ್ದೇವೆ. ಸುಮ್ಮನೆ ಅವಹೇಳನ ಮಾಡುವಂಥ ಸಂಪ್ರದಾಯ ಆಗಬಾರದು ಮತ್ತು ಒಂದು ರೀತಿ ಲೇವಡಿ ಮಾಡುವಂಥಾದ್ದು ಆಗಬಾರದು. ಮಂತ್ರಿಗಳು ಬರಬೇಕು, ಅಧಿಕಾರಿಗಳು ಬರಬೇಕು ಎಂಬುದು ನಿಜವಾಗಿಯೂ ಒಪ್ಪತಕ್ಕ ಮಾತೇ.

ಆದರೆ, ಅವರು ಏನು ಹೇಳುತ್ತಿದ್ದಾರೆ, ಹೇಳಿ ಎಂದರೆ ಹೇಗೆ? ಇದೇ ರೀತಿ ಸದಸ್ಯರನ್ನೂ ಕೇಳಿದರೆ ಸರಿಯಾಗುತ್ತದೆಯೇ? ವಿರೋಧ ಪಕ್ಷದಲ್ಲಿರತಕ್ಕ ಎಲ್ಲಾ ಸದಸ್ಯರೂ ಕೇಳುತ್ತಾ ಕುಳಿತಿರುತ್ತಾರೆಯೇ?

ಶ್ರೀ ಎಸ್. ಸುರೇಶ್ ಕುಮಾರ್: ಸಭಾಧ್ಯಕ್ಷರೇ, ಮಾನ್ಯ ರಂಗನಾಥ್‌ರವರು ಎಷ್ಟು ಅಟೆಂಟೀವ್ ಆಗಿ ಇರುತ್ತಾರೆಂಬುದು ನಮಗೆ ಗೊತ್ತು. ಯಾರು ಅಟೆಂಟೀವ್ ಆಗಿ ಇರುವುದಿಲ್ಲ, ಅವರಿಗೆ ಕೇಳಿದ್ದೇವೆ, ನಿಮಗೆ ಏಕೆ ತೊಂದರೆ?

ಶ್ರೀ ಕೆ.ಹೆಚ್. ರಂಗನಾಥ್: ಅದು ಸರಿಯಲ್ಲ. ಇಲ್ಲಿ ನಾನು ಅಟೆಂಟೀವ್ ಆಗಿ ಇರುವುದು, ಇನ್ನೊಬ್ಬರು ಅಟೆಂಟೀವ್ ಆಗಿ ಇಲ್ಲವೆಂದು ಹೇಳುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಬರಬೇಕೆಂದು ಹೇಳತಕ್ಕ ಮಾತಿನಲ್ಲಿ ಅರ್ಥ ಇದೆ. ನಾವು ಇರಬೇಕಾದದ್ದು ನಮ್ಮ ಕರ್ತವ್ಯ. ಆದರೆ, ಈಗ ಅವರು ಏನು ಹೇಳಿದರು ಹೇಳಿ ಎಂದು ಹೇಳತಕ್ಕ ಮಟ್ಟಕ್ಕೆ ಹೋದರೆ ಸರಿ ಹೋಗುತ್ತದೆಯೇ ಅದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಸ್ವಾಮಿ, ತಮಗೇ ಗೊತ್ತು. ನಾನು ಏನು ಹೇಳಿದೆ ಅವರು ಯಾರಿಗೋಸ್ಕರ ಮಾತನಾಡುತ್ತಿದ್ದಾರೆ ಎಂದು ಕೇಳಿದೆ. ಸವಾಲು ಬಂದಿದ್ದು ಅಲ್ಲಿಂದ, ಈ ಸವಾಲು ನನ್ನದಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ನಿಮ್ಮ ಮನಸ್ಸಿಗೆ ಒಪ್ಪಿಗೆ ಎಂದರೆ ನಮ್ಮದೇನೂ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ದಯವಿಟ್ಟು ಈ ಪಾಠವನ್ನು ತಮ್ಮ ಸದಸ್ಯರಿಗೆ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್: ನಾನು ಈ ಕಡೆಗೂ ಹೇಳಬೇಕಾಗುತ್ತದೆ, ನಿಮಗೂ ಹೇಳಬೇಕಾಗುತ್ತದೆ. ಈ ರೀತಿ ಬಿಹೇವ್ ಮಾಡಬಾರದು ಎಂದು ನಿಮಗೂ ಹೇಳಬೇಕಾಗುತ್ತದೆ.

ಶ್ರೀ ಚಂದ್ರಕಾಂತ ಬೆಲ್ಲದ್: ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿಯ ಕೃಷಿ ಇಲಾಖೆಯು ಚುರುಕುಗೊಳ್ಳಬೇಕಾದಂಥ ಅವಶ್ಯಕತೆ ಇದೆ.

ಶ್ರೀ ಕೆ.ಹೆಚ್. ರಂಗನಾಥ್: ಸದನ ನಡೆಯುವಾಗ ಪ್ರತಿ ದಿನವೂ ಪ್ರತಿ ಇಲಾಖೆಯವರೂ ತಮ್ಮ ಅಧಿಕಾರಿಗಳನ್ನು ಕಳುಹಿಸಿರುತ್ತಾರೆ. ಅವರು ಸಂಬಂಧಪಟ್ಟ ವಿಚಾರಗಳನ್ನು ನೋಟ್ ಮಾಡಿಕೊಳ್ಳುತ್ತಿರುತ್ತಾರೆ. ತದನಂತರ ಅದನ್ನು ಅವರು ಮಂತ್ರಿಗಳಿಗೆ ಕಳುಹಿಸಿಕೊಡುತ್ತಾರೆ. ಯಾರೂ ಏನೂ ಸುಮ್ಮನೆ ಕುಳಿತಿರುವುದಿಲ್ಲ. ತಾವುಗಳು ಅವರಿಗೆ ಪಾಠವನ್ನು ಹೇಳಿ ಎಂದು ಹೇಳುವ ಮಾತು ಸರಿಯಲ್ಲ. "ನಾನು ಈಗ ಏನು ಹೇಳಿದ್ದೇನೆ ಎಂದು ಹೇಳಿ" ಎಂದು ಕೇಳುವುದು ಯಾವ ರೂಲ್‌ನಲ್ಲಿ ಇದೆ?

ಶ್ರೀ ಎಸ್.ಸುರೇಶ್ ಕುಮಾರ್: ಅವರು, ನಾನು ಏನೆಂದು ಹೇಳಿ ಎಂದು ಕೇಳಿದ್ದು. ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ಮಾತನಾಡುತ್ತಾ ಇದ್ದಾರೆ. ಅವರು ಮಾತನಾಡುವಾಗಲಲ್ಲಿ ಗುಂಪು ಚರ್ಚೆ ಮಾಡುತ್ತಾ ಇದ್ದರೆ ಮಾತನಾಡುವವರಿಗೆ ಹೇಗೆ ಸ್ಫೂರ್ತಿ ಬರುತ್ತದೆ?

ಶ್ರೀ ಚಂದ್ರಕಾಂತ ಬೆಲ್ಲದ್: ಪಾಠ ಹೇಳಿಸಿಕೊಳ್ಳಲು, ಹೇಳಿಕೊಡಲು ನಾವು ಮಾಸ್ತರ್‌ಗಳೂ ಅಲ್ಲ, ವಿದ್ಯಾರ್ಥಿಗಳೂ ಅಲ್ಲ. ಆ ವಿಷಯವನ್ನು ಬಿಡೋಣ... ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡುವ ಬಹಳ ಮಹತ್ವದ ವಿಚಾರ ಅಂದರೆ, ಯಾವ ಗ್ರಾಮೀಣ ರೈತರು ಇವೊತ್ತು ಮಾಡುವಂಥ ವ್ಯವಸಾಯದಲ್ಲಿ ಅವರು ತೊಡಗಿಸುವಂಥ ಹಣವಾಗಲೀ, ಅವರ ಪರಿಶ್ರಮವಾಗಲೀ ಅಥವಾ ಅವರ ಎಲ್ಲಾ ಕುಟುಂಬವೇ ಅದರಲ್ಲಿ ಬೆವರು ಸುರಿಸಿ ನಂತರ ಅವರು ಪಡೆಯುವಂಥ ಉತ್ಪಾದನೆಯು ಲಾಭದಾಯಕವಾದರೆ ಮಾತ್ರ ಗ್ರಾಮೀಣ ಪ್ರದೇಶದಲ್ಲಿರುವಂಥ ರೈತರ ಕುಟುಂಬಗಳು ಗ್ರಾಮಗಳಲ್ಲಿದ್ದು ಉತ್ತಮವಾದಂಥ ಜೀವನ ಮಾಡಲು ಸಾಧ್ಯವಿದೆ. ಇವೊತ್ತು 70 ಪ್ರತಿಶತ:ದಷ್ಟು ಜನರು ಗ್ರಾಮೀಣ ಭಾಗದಲ್ಲಿರುವುದರಿಂದ ನಾವು.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಕೆಲವು ಸಚಿವರು ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದಾಗಿ ಸಭೆಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ನಾವು ಅನಿವಾರ್ಯವಾಗಿ ಇಂಥ ಪರಿಸ್ಥಿತಿಗೆ ಒಳಗಾಗಿದ್ದೇವೆ. ಬಿಎಸಿ ತೀರ್ಮಾನದ ಪ್ರಕಾರ ಈ ವಿಷಯ ಯಾವತ್ತೋ ಚರ್ಚೆಗೆ ಬರಬೇಕಾಗಿತ್ತು? ತಮಗೆ ಗೊತ್ತಿರುವ ಹಾಗೆ ಅನಿವಾರ್ಯವಾಗಿ ಬರಲಿಕ್ಕೆ ಸಾಧ್ಯವಾಗಲಿಲ್ಲ. ಬಿಎಸಿ ವರದಿಯು ಈ ಸಭೆಗೆ ಬಂದ ಮೇಲೆ, ಈ ಸಭೆಯು ಅದನ್ನು ಒಪ್ಪಿಕೊಂಡ ಮೇಲೆ, ಈ ಸಭೆಯು ಅದನ್ನು ಪಾಲನೆ ಮಾಡತಕ್ಕಂಥಾದ್ದು ಆದ್ಯ ಕರ್ತವ್ಯವಾಗುತ್ತದೆ. ಅದಕ್ಕೆ ಯಾರು ಭಾಗಿಗಳಾಗಿರುತ್ತಾರೋ ಅವರು ಸಭೆಯ ನಡವಳಿಕೆಗಳನ್ನು ಮಾಡತಕ್ಕಂಥಾದ್ದರಲ್ಲಿ ನಮಗೆ ಸಹಾಯ ಮಾಡಲೇಬೇಕಾಗುತ್ತದೆ. ಅನಿವಾರ್ಯವಾಗಿ ಏನೋ ಆಗುತ್ತದೆ ವಿಷಯ ಮುಂದಕ್ಕೆ ಹೋಗುತ್ತದೆ. ಈಗ ನಾನು ನನ್ನ ಡಿವ್ಯ್ಯಾಂಡನ್ನು ನಿನ್ನೆ ಮೂವ್ ಮಾಡಬೇಕಾಗಿತ್ತು. ಇನ್ನೂ ಕೂಡ ನನಗೆ ಮೂವ್ ಮಾಡಲು ಅವಕಾಶವಾಗಿಲ್ಲ. ಹಾಗೆಯೇ ಮಂತ್ರಿಗಳೂ ಕೂಡ, ಬರುತ್ತಿರುವಾಗ ಏನೋ ವಿಷಯ ಪ್ರಸ್ತಾವವಾಗಿ ಅಲ್ಲಿ ಇಲ್ಲಿ ಕಾರ್ಯನಿಮಿತ್ತ ಕುಳಿತಿರಬಹುದು. ಸಕಾಲದಲ್ಲಿ ಸಭೆಗೆ ಬರಲು ಆಗದಿರಬಹುದು. ಅದನ್ನು ಒಂದು ದೊಡ್ಡ ಅಪರಾಧ ಎನ್ನುವಂಥ ರೀತಿಯಲ್ಲಿ ತೆಗೆದುಕೊಂಡು ಅವಹೇಳನ ಮಾಡತಕ್ಕಂಥ ರೀತಿಯಲ್ಲಿ ಪ್ರಸ್ತಾಪ ಮಾಡುವುದಾರೆ ನನಗನ್ನಿಸುತ್ತದೆ, ಒಂದು ರೀತಿಯಲ್ಲಿ ಇದು ನಮ್ಮ ಹಕ್ಕಿನ ದುರುಪಯೋಗ. ಇದು ಸದನದ ಸದಸ್ಯರ ಹಕ್ಕಿನ ದುರುಪಯೋಗವಾಗುತ್ತದೆ ಎಂದು ಹೇಳಿ ನನ್ನ ಅನಿಸಿಕೆಯನ್ನು ತಮ್ಮ ಮುಂದಿಡುತ್ತೇನೆ. ನಾನು ಇಲ್ಲಿ ಯಾರಿಗೂ ಬುದ್ಧಿ ಹೇಳಲು ಬಂದಿಲ್ಲ. ನನ್ನ ಕ್ಷೇತ್ರದ ಜನರು ಬುದ್ಧಿ ಹೇಳಲೆಂದು ನನ್ನನ್ನು ಇಲ್ಲಿ ಆರಿಸಿ ಕಳುಹಿಸಿಲ್ಲ. ನನ್ನನ್ನು ಕೆಲವು ಜವಾಬ್ದಾರಿಗಳನ್ನು ನಿರ್ವಹಣೆ ಮಾಡಲು ಜನ ಆರಿಸಿ ಕಳುಹಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಂಗನಾಥ್‌ರವರಿಗೆ ಈ ಸಭೆಯಲ್ಲಿ, ಚರ್ಚೆಯಲ್ಲಿ ಭಾಗವಹಿಸಬೇಕೆಂಬ ಬಗ್ಗೆ ಏನು ಕಾಳಜಿ ಇದೆ ಅಟೆಂಟೀವ್ ಆಗಿ ಇರತಕ್ಕದ್ದು ಏನಿದೆ ಅದು ಎಲ್ಲರಲ್ಲಿಯೂ ಇಲ್ಲ ಎನ್ನುವ ಒಂದು ಭಾವನೆ ಇದೆ. ಅದರ ಬಗ್ಗೆ ಹೇಳಿದೆ.

ಶ್ರೀ ಕೆ.ಹೆಚ್. ರಂಗನಾಥ್: ಹಾಗೆ ಭಾವಿಸತಕ್ಕದ್ದು ಸರಿಯೇ? ಬುದ್ಧಿ ಪೂರ್ವಕವಾಗಿ ನಾವು ಹಾಗೆ ನಡೆದುಕೊಂಡಿದ್ದೇವೆಯೇ ತಾವು ಹೇಳಿ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ಮಾತನಾಡುತ್ತಿದ್ದಾರೆ, ಆ ಕಡೆಯಲ್ಲಿ ಗುಂಪು ಗುಂಪಾಗಿ ಚರ್ಚೆ ಮಾಡುತ್ತಿದ್ದಾರೆ. ಇದು ಸರಿಯೇ? ಗುಂಪು ಗುಂಪಾಗಿ ಚರ್ಚೆ ಮಾಡುವುದಾದರೆ ಲೌಂಜ್‌ನಲ್ಲಿ ಮಾಡಬಹುದಲ್ಲವೇ? ಲೌಂಜ್‌ನಲ್ಲಿ ಹೋಗಿ ಚರ್ಚೆ ಮಾಡಲಿ. ಅದು ಬಿಟ್ಟು ಇಲ್ಲಿ ಗುಂಪು ಗುಂಪಾಗಿ ಚರ್ಚೆ ಮಾಡುತ್ತಾರೆ ಅಂದರೆ, ಮಾತನಾಡುವವರು ಯಾವ ರೀತಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಬೇಕು? ಆ ಒಂದು ದೃಷ್ಟಿಕೋನದಿಂದ ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು. ಇದರಲ್ಲಿ ಬೇರೆ ಅರ್ಥ ಮಾಡಿಕೊಳ್ಳುವುದು ಯಾವುದೂ ಇಲ್ಲ. ಮಾನ್ಯ ಸದಸ್ಯರು ಮಾತನಾಡಲು ಪ್ರಾರಂಭ ಮಾಡಿ 15 ನಿಮಿಷಗಳು ಆಯಿತು. ಸಂಬಂಧಪಟ್ಟ ಸಚಿವರು ಬಂದಿಲ್ಲ. ಅವರು ಎಲ್ಲಿದ್ದರೂ ಕರೆಸುವಂಥ ವ್ಯವಸ್ಥೆಯಾಗಬೇಕಾಗುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ; ಪಂಚಾಯತ್‌ರಾಜ್ ಸಚಿವರಾಗಲೀ, ರಾಜ್ಯ ಸಚಿವರಾಗಲೀ ಇಲ್ಲಿ ಉಪಸ್ಥಿತರಿರಬೇಕಾಗುತ್ತದೆ. ಕೃಷಿ ಮಂತ್ರಿಗಳು ಉಪಸ್ಥಿತರಿರಬೇಕಾಗುತ್ತದೆ. ಸದಸ್ಯರು ಭಾಷಣ ಪ್ರಾರಂಭ ಮಾಡುವಾಗಲೇ ಇರಬೇಕೆಂದು ನಾವು ಹೇಳುತ್ತಿಲ್ಲ. ಸ್ವಲ್ಪ ಹೊತ್ತಿನ ನಂತರವಾದರೂ ಬರುವುದು ಬೇಡವೇ?

ಅಧ್ಯಕ್ಷರು: ದಯವಿಟ್ಟು ಮಾನ್ಯ ಕೋಳಿವಾಡ್‌ರವರನ್ನು ಉಪಸ್ಥಿತರಿರುವಂತೆ ಹೇಳಿ. ಮಧ್ಯಾಹ್ನ ಮೂರು ಗಂಟೆಗಾದರೂ ಇಲ್ಲಿ ಇರಲಿ.

ಶ್ರೀ ಜಗದೀಶ್ ಶೆಟ್ಟರ್: ಒಂದು ಒಳ್ಳೆಯ ದೃಷ್ಟಿಯಿಂದ ಮಾನ್ಯ ಸುರೇಶ್‌ಕುಮಾರ್ ಅವರು ಈ ಬಗ್ಗೆ ಹೇಳಿದ್ದಾರೆ. ದಯವಿಟ್ಟು ತಾವುಗಳು ಯಾವುದೇ ಅಪಾರ್ಥವನ್ನು ಮಾಡಿಕೊಳ್ಳತಕ್ಕಂಥಾದ್ದಲ್ಲ. ಅವರು ಯಾವುದೇ ಲೇವಡಿಯ ದೃಷ್ಟಿಯಿಂದ ಮಾತನಾಡಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಡಿಸ್‌ಕಷನ್ಸ್ ಮಾಡುವಾಗ ಈ ತರಹದ ಮಾತುಗಳು ಬರುತ್ತವೆ. ಆದರೆ ಉದ್ದೇಶದಿಂದ ಮಾತನಾಡಿದ್ದಾರೆ I have to take very serious action. ಅವರು ಹಾಗೆ ಮಾತನಾಡಿದ್ದಾರೆ ಎಂದು ಏನು ಹೇಳಿ ನಾನು ಅದನ್ನು ನೀವು ಏನು ಹೇಳಿದ್ದಾರೆಂದು ಹೇಳಿ ಅಂದರೆ ಅದು ಸದುದ್ದೇಶವೆ?

ಶ್ರೀ ಜಗದೀಶ್ ಶೆಟ್ಟರ್: ಈಗ ನಾನು ಹೇಳಿದ್ದು ಎಲ್ಲಾ ಕೇಳಿಸಿಕೊಳ್ಳುತ್ತಿದೆಯೇ ಎಂದು ಹೇಳಿದ್ದರಿಂದ ಆ ರೀತಿ ಚಾಲೆಂಜ್ ಬಂತು.

ಶ್ರೀ ಕೆ.ಹೆಚ್. ರಂಗನಾಥ್: ಆಯಿತು, ಬಿಡಿ.

ಶ್ರೀ ಚಂದ್ರಕಾಂತ ಬೆಲ್ಲದ್: ಮಾನ್ಯ ಅಧ್ಯಕ್ಷರೇ, ನನ್ನ ಅನಿಸಿಕೆ ಏನೆಂದರೆ, ಈ ರಾಜ್ಯದ ಅಥವಾ ರಾಷ್ಟ್ರದ ಬಹುತೇಕ ಜನರು ಈ ಒಂದು ವ್ಯವಸಾಯದಲ್ಲಿ ತೊಡಗಿರುವುದರಿಂದ ಇದಕ್ಕೆ ಸಂಬಂಧಪಟ್ಟಂಥ ವಿಸ್ತರಣಾ ವಿಭಾಗ, ಮತ್ತು ಕಾರ್ಯ ಮಾಡಬೇಕಾದಂಥ ಕೃಷಿ ಇಲಾಖೆ, ಇದೆ ಅದು ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ. ಬಹುಶ: ಕರ್ನಾಟಕ ರಾಜ್ಯದಲ್ಲಿ ಸೇವಾ ಸಿಬ್ಬಂದಿ ಏನಿದೆ ಅದನ್ನು ಬಿಟ್ಟರೆ ಅತೀ ಹೆಚ್ಚು ಸೇವಾ ಸಿಬ್ಬಂದಿಯನ್ನು ಹೊಂದಿರುವ ಇಲಾಖೆ ಎಂದರೆ ಈ ಕೃಷಿ ಇಲಾಖೆಯಾಗಿದೆ. ಬಹುಶ: ವೈದ್ಯಕೀಯ ಸೇವಾ ಇಲಾಖೆಯು ಬರಬಹುದೆಂದು ನಾನು ಹೇಳಬೇಕಾಗುತ್ತದೆ. ಇವೊತ್ತು ಇಷ್ಟೊಂದು ಸೇವಾ ಸಿಬ್ಬಂದಿಗಳನ್ನು ಇಟ್ಟುಕೊಂಡು ಅದರ ವಿಸ್ತರಣಾ ಕಾರ್ಯದಲ್ಲಿ ತೊಡಗಬೇಕಾದಂಥ ಇಲಾಖೆ ಯಾವ ದೃಷ್ಟಿಯಿಂದ ರೈತರುಗಳಿಗೆ

ಸಹಾಯವನ್ನು ಮಾಡುತ್ತಾ ಇದೆ? ಯಾವ ರೀತಿಯಲ್ಲಿ ರೈತರ ಅಭಿವೃದ್ಧಿಯ ದಿಶೆಯಲ್ಲಿ ಪಾಲ್ಗೊಳ್ಳುತ್ತಿದೆ? ರೈತರು ಇವೊತ್ತು ಕೃಷಿಯು ಲಾಭಾದಾಯಕವಾಗಿಲ್ಲವೆಂದು ಹೇಳಿ. ಅವರಲ್ಲಿನ ಯುವಕರು ವ್ಯವಸಾಯವನ್ನು ಬಿಟ್ಟು ನಗರಪ್ರದೇಶಗಳಿಗೆ ವಲಸೆ ಬರುತ್ತಾ ಇರುವುದನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಕಾಣುತ್ತಿದ್ದೇವೆ. ಏಕೆ ಈ ಒಂದು ದುಸ್ಥಿತಿಯು ಬಂದಿದೆ ಅಂದರೆ ಆ ಒಂದು ಕೃಷಿ ವ್ಯವಸಾಯದಲ್ಲಿ ತೊಡಗಿರುವಂಥ ಕುಟುಂಬಗಳು ತಮ್ಮ ಕುಟುಂಬಗಳನ್ನು ಉತ್ತಮ ರೀತಿಯಲ್ಲಿ ಸಾಗಿಸಿಕೊಂಡು ಹೋಗಲು ಅವರು ವ್ಯವಸಾಯದಲ್ಲಿ ತೊಡಗಿಸಿಕೊಳ್ಳುವಂಥ ಹಣವಾಗಲೀ, ವ್ಯಯಿಸುವಂಥ ಅವರ ಶ್ರಮವಾಗಲೀ. ಅವರಿಗೆ ಫಲವಾಗಿ ಬರುತ್ತಾ ಇಲ್ಲ. ಆ ಕುಟುಂಬಗಳಲ್ಲಿ ವ್ಯವಸಾಯದ ಮೂಲಕ ಸಂರಕ್ಷಣೆಯಾಗುತ್ತಾ ಇಲ್ಲ. ಹೀಗಾಗಿ ಆ ಕುಟಂಬಗಳು ಅನಿವಾರ್ಯವಾಗಿ ವ್ಯವಸಾಯವನ್ನು ಬಿಟ್ಟು ನಗರಪ್ರದೇಶಗಳಿಗೆ ವಲಸೆ ಹೋಗುವುದನ್ನು ಕಾಣುತ್ತಿದ್ದೇವೆ. ಆದರೆ ಇಷ್ಟೊಂದು ಆರ್ಥಿಕ ಮತ್ತು ಮಾನವ ಸಂಪನ್ಮೂಲವನ್ನು ಹೊಂದಿರುವ ಜನಸಮೂಹ ಇವತ್ತು ಶಹರಗಳಿಗೆ ವಲಸೆ ಬರುವುದನ್ನು ತಡೆಗಟ್ಟಬೇಕಾದರೆ ಈ ನಿಟ್ಟಿನಲ್ಲಿ ನಮ್ಮ ಕೃಷಿ ಇಲಾಖೆಯವರು ಬಹಳ ಸಮರ್ಥವಾಗಿ ಕೆಲಸಕಾರ್ಯಗಳನ್ನು ಮಾಡಬೇಕಾದ ಅಗತ್ಯತೆ ಇದೆ. ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಬೇಕು, ಹೊಸ ಹೊಸ ಕೃಷಿವಿಜ್ಞಾನದ ಬೆಳವಣಿಗೆಯನ್ನು ರೈತರಿಗೆ ತಿಳಿಯಪಡಿಸಿ ಸೂಕ್ತ ತರಬೇತಿಯನ್ನು ಅವರಿಗೆ ಒದಗಿಸಿಕೊಡಬೇಕು. ಹಾಗೆಯೇ ಯಾವ ಬೆಳೆಗಳನ್ನು ಯಾವ ಪ್ರದೇಶಗಳಲ್ಲಿ ಮಾಡಿದರೆ ಅದರಿಂದ ಲಾಭಾದಾಯಕವಾಗುತ್ತದೆ ಎಂಬುದನ್ನು ತಿಳಿಸಿಹೇಳಬೇಕು ಮತ್ತು ಹಾರ್ವೆಸ್ಟ್ ಮಾಡುವ ವಿಧಾನದಲ್ಲಿಯೂ ಕೂಡ ಅವರಿಗೆ ತಿಳುವಳಿಕೆಯನ್ನು ಕೊಡಬೇಕು. ಪ್ಯಾಕೇಜ್ ಮಾಡುವ ವಿಧಾನದಲ್ಲಿಯೂ ಕೂಡ ಅವರಿಗೆ ತಿಳುವಳಿಕೆ ಕೊಡಬೇಕು. ಇಂಥ ಅನೇಕ ಹೊಸ ಹೊಸ ವಿಜ್ಞಾನದ ಕೊಡುಗೆ ಏನಿದೆ, ಸುಧಾರಿಸಿದ ಕೃಷಿ ಪದ್ಧತಿ ಏನಿಗೆ ಇವನ್ನೆಲ್ಲಾ ರೈತರಿಗೆ ತಲುಪಿಸುವ ಕೆಲಸವನ್ನು ಏನು ಕೃಷಿ ಇಲಾಖೆ ಮಾಡಬೇಕಾಗಿತ್ತು ಆ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ವೈಜ್ಞಾನಿಕವಾಗಿ ಸುಧಾರಿತವಾದ ನೂತನ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೈತರನ್ನು ತರಬೇತುಗೊಳಿಸಬೇಕಾಗುತ್ತದೆ. ಆ ಕೆಲಸವನ್ನು ಕೃಷಿ ಇಲಾಖೆಯವರು ಮಾಡಬೇಕಾಗಿತ್ತು. ಆದರೆ ಇಲಾಖೆಯು ನಿರೀಕ್ಷಿತ ಮಟ್ಟದಲ್ಲಿ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಮತ್ತು ಆ ಕುರಿತಾಗಿ ಇಲಾಖೆಯು ವಿಫಲವಾಗಿದೆ, ಪರಿಣಾಮವಾಗಿ ಗ್ರಾಮಗಳ ಜನರು, ರೈತರು, ವ್ಯವಸಾಯ ಕ್ಷೇತ್ರದಲ್ಲಿ ತೊಡಗಿದಂಥ ಮಾನವ ಸಂಪನ್ಮೂಲ ಬೇರೆ ಉದ್ಯೋಗಗಳನ್ನು ಅರಿಸಿಕೊಂಡು ನಗರಗಳಿಗೆ ಬರುವುದನ್ನು ನಾವು ಕಾಣುತ್ತಾ ಇದ್ದೇವೆ. ಇದಕ್ಕೆ ಇವೊತ್ತು ಕೃಷಿ ವಿಶ್ವವಿದ್ಯಾಲಯದಲ್ಲಿರತಕ್ಕಂಥ ವಿಸ್ತರಣಾ ವಿಭಾಗದ ಸಿಬ್ಬಂದಿಗೆ ಹೊಸ ಹೊಸ ತಿಳುವಳಿಕೆಯ ತರಬೇತಿಯನ್ನು ಆಗಾಗ್ಗೆ ಕೊಡುತ್ತಿರಬೇಕು. ಕೃಷಿ ವಿಜ್ಞಾನದ ಕೊಡುಗೆಯನ್ನು ರೈತರಿಗೆ ಮುಟ್ಟಿಸುವಂಥ ವಿಧಾನದಲ್ಲಿ ಸಂಪರ್ಕ ಕಲ್ಪಿಸುವ ವಿಸ್ತರಣಾ ವಿಭಾಗ ಇಲ್ಲಿ ಏನಿದೆ, ಅವರು ರೈತರು ಯಾರು ವ್ಯವಸಾಯ ಕ್ಷೇತ್ರದಲ್ಲಿದ್ದಾರೆ ಅವರಿಗೆ ಇರುವಂಥ ತೊಂದರೆಗಳನ್ನು ಕಂಡುಹಿಡಿದು ಅದನ್ನು ವಿಶ್ವವಿದ್ಯಾನಿಲಯಕ್ಕೆ ಮುಟ್ಟಿಸುವ ಮೂಲಕ ಬರುವ ಪ್ರತಿಫಲವನ್ನು ರೈತರಿಗೆ ಮುಟ್ಟಿಸುವಂಥ ವಿಸ್ತರಣಾ ವಿಭಾಗ ಏನಿದೆ, ಇದು ಬಹಳ ಉತ್ಸಾಹದಿಂದ ಉತ್ತಮವಾಗಿ ಕೆಲಸ ಮಾಡಬೇಕಾಗುತ್ತದೆ. ಈ ಒಂದು ಕಾರಣದಿಂದಾಗಿ ಕೃಷಿ ಇಲಾಖೆಯವರು ಈ ಬಗ್ಗೆ ಹೆಚ್ಚು ಗಮನಕೊಡಬೇಕು. ಮಳೆಯೂ ಕೂಡ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಭೂಸಾರವನ್ನು ಉಳಿಸಿಕೊಳ್ಳುವಂಥ

ಸಂಬಂಧಪಟ್ಟ ವಿಭಾಗಕ್ಕೆ ಸೇರಿದಂಥ ಸೇವಾ ವಿಭಾಗದವರು ರೈತರ ಹೊಲಗಳಿಗೆ ಹೋಗಿ ಭೂಸಾರವನ್ನು ಉಳಿಸಿಕೊಳ್ಳಬೇಕಾದರೆ ರೈತರು ಹೇಗೆ ಭೂಮಿಯನ್ನು ಫಲವತ್ತಾಗಿ ಇಟ್ಟುಕೊಳ್ಳಬೇಕಾದರೆ ಯಾವ ವಿಧಾನಗಳನ್ನು ಅನುಸರಿಸಬೇಕೆಂಬುದನ್ನು ತಿಳಿಸಿಕೊಡಬೇಕು. ಹಾಗೆಯೇ ಜಲಾನಯನ ಪ್ರದೇಶದಲ್ಲಿರುವಂಥ ಭೂಮಿಯಲ್ಲಿ ನೀರು ಭೂಮಿಯಲ್ಲಿ ಇಂಗಿ, ನೀರಿನ ಪಾತಳಿಯು ಹೆಚ್ಚಾಗುವುದಕ್ಕೆ ಏನು ಮಾಡಬೇಕಾಗಿದೆ ಆ ವಿಧಾನವನ್ನು ಕೂಡ ರೈತರಿಗೆ ತಿಳಿಸಿಕೊಡಬೇಕಾಗುತ್ತದೆ. ಇದು ಕೃಷಿ ಇಲಾಖೆಯವರ ಕರ್ತವ್ಯ ಆಗಿದೆ. ಭೂಮಿಯಲ್ಲಿ ಬೀಜ ಹಾಕುವುದರಿಂದ ಹಿಡಿದು ಹಾರ್ವೆಸ್ಟ್ ಮಾಡುವ ವರೆಗಿನ ಇವತ್ತಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವಂತಹ ಕಾರ್ಯದಲ್ಲಿ ನಮ್ಮ ವಿಸ್ತರಣಾ ವಿಭಾಗ, ಕೃಷಿ ಇಲಾಖೆ ಕೆಲಸ ಮಾಡಬೇಕಾಗಿದೆ. ಅದರ ನಂತರದಲ್ಲಿ ಇವತ್ತು ನಾವು ಪಶು ಸಂಗೋಪನೆ ಬಗ್ಗೆ ಹೇಳಬೇಕಾಗಿದೆ. ಪಶುಸಂಗೋಪನೆ ಬಹುಶ: ಇಲ್ಲಿರುವಂತಹ ಹವಾಮಾನ ಚೆನ್ನಾಗಿದೆ. ನಮ್ಮಲ್ಲಿ ಒಂದೇ ಒಂದು ಕಾಲೇಜು ಇದೆ. ಇವತ್ತು ಪಶುಸಂಗೋಪನಾ ಮಹಾ ವಿದ್ಯಾಲಯ ಬೀದರ್‌ನಲ್ಲಿದೆ. ಇಂತಹ ಪಶುಸಂಗೋಪನೆಯ ಬಗ್ಗೆ ಇವತ್ತು ವೈದ್ಯರ ಕೊರತೆಯೂ ಸಹ ಸಾಕಷ್ಟು ಇದೆ. ಇವತ್ತು ರೈತರ ಸರಿಯಾಗಿ ಪಶುಗಳನ್ನು ಜೋಪಾನ ಮಾಡಿ ಅದರಿಂದ ಅವನ ಆರ್ಥಿಕ ಬೆಳವಣಿಗೆ ಮಾಡುವಂತಹ, ಒಂದು ಸಹಾಯ ಮಾಡುವಂತಹ, ಪಶು ಸಂವರ್ಧನೆ ಮಾಡುವಂತಹ ಕೆಲಸ ಪಶು ವಿಶ್ವವಿದ್ಯಾಲಯದ ಸೇವೆಯಿಂದ ಅವಶ್ಯವಾಗಿ ಆಗಬೇಕಾಗಿದೆ. ಅಂತಹ ದೃಷ್ಟಿಯಲ್ಲಿ ಇವತ್ತು ಅನೇಕ ಕಡೆಗೆ ಪಶು ವೈದ್ಯಕೀಯ ದವಾಖಾನೆಗಳು ಇವೆ, ಅಲ್ಲಿ ಇವತ್ತು ಸರಿಯಾದಂತಹ ತಜ್ಞರಾದಂತಹ ಡಾಕ್ಟರುಗಳು ಇಲ್ಲ ಮತ್ತು ಪಶುಗಳನ್ನು ರೋಗ ರುಜಿನಗಳಿಂದ ಸಂರಕ್ಷಣೆ ಮಾಡಲಿಕ್ಕೆ ಸರಿಯಾದಂತಹ ಔಷಧಿಗಳೂ ಇವತ್ತು ದೊರಕುತ್ತಿಲ್ಲ. ಅದರ ಬಗ್ಗೆಯೂ ಸಹ ಬೇಕಾದಷ್ಟು ಹಗರಣಗಳು ಆಗಿವೆ. ಖೋಟ್ಟಿ ಔಷಧಿಗಳನ್ನು ಖರೀದಿ ಮಾಡಿ, ವಿತರಣೆ ಮಾಡದೇ ಇರುವಂತಹ ವಿಚಾರದ ಬಗ್ಗೆ ವಿಧಾನ ಸಭೆಯಲ್ಲಿ ಪ್ರಸ್ತಾಪ ಆದಂತಹ ಪ್ರಸಂಗಗಳೂ ಇವೆ. ಅದಕ್ಕೆ ಸರಿಯಾದಂತಹ ಬೆಳವಣಿಗೆ ವೈದ್ಯಕೀಯ ಪಶುಸಂಗೋಪನೆ ಬಗ್ಗೆ ಆಗಬೇಕು. ನಮ್ಮ ಕೆಎಂಎಫ್ ಡೈರಿ ಏನು ಇದೆ, ಇಲ್ಲಿ ಸಾಕಷ್ಟು ರೈತರು ಉತ್ಪಾದನೆ ಮಾಡುವಂತಹ ಅಥವಾ ಇವತ್ತು ಪಶುಸಂಗೋಪನೆಯಲ್ಲಿ, ಹೈನುಗಾರಿಕೆಯಲ್ಲಿ ತೊಡಗಿರುವಂತಹ ಅನೇಕ ಯುವಕರಿಗೆ ಸಹಾಯ ಮಾಡಲಿಕ್ಕೆ, ಕುಟುಂಬಗಳಿಗೆ ಸಹಾಯ ಮಾಡಲಿಕ್ಕೆ ಸಾಧ್ಯತೆ ಇದೆ. ಆದರೆ ಆ ದಿಸೆಯಲ್ಲೂ ಸಹಿತ ಈ ಏನು ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟು ಸಮರ್ಪಕವಾಗಿ ಕೆಲಸ ಮಾಡಬೇಕೋ ಅಷ್ಟು ಸಮರ್ಪಕವಾಗಿ ಮಾಡುತ್ತಿಲ್ಲ. ಇಲ್ಲಿ ಸಾಕಷ್ಟು ಹಾಲು ಉತ್ಪಾದನೆ ಮಾಡಿದರೆ ನಮಗೆ ಹೊರ ರಾಜ್ಯದಿಂದ ಹಾಲು ಬರುವಂತಹ ಅವಶ್ಯಕತೆ ಇಲ್ಲ. ಆದರೆ ಇವತ್ತು ಹಾಲಿಗೆ ಅವಕಾಶ ಇದೆ ಅದಕ್ಕೆ ಪ್ರೋತ್ಸಾಹ ಕೊಡಬೇಕು ಅಥವಾ ಆ ಕಾರ್ಯದಲ್ಲಿ ಸರ್ಕಾರ ತನ್ನ ಆದ್ಯತೆಯ ಮೂಲಕ ಬೆಳವಣಿಗೆಯನ್ನು ಏನು ಮಾಡಬೇಕೋ ಆ ಬೆಳವಣಿಗೆ ಮಾಡುತ್ತಿಲ್ಲ. ಇವತ್ತು ನಮ್ಮ ಧಾರವಾಡದಲ್ಲಿ ಇರುವಂತಹ ಕೆಎಂಎಫ್ ಪೂರ್ಣವಾಗಿ ಹಾನಿಯಲ್ಲಿದೆ. ಬೇಕಾದಷ್ಟು ಸುತ್ತ ಮುತ್ತಲೂ ಮಲಿನಾಡು ಪ್ರದೇಶವಿದೆ. ಬಹುಶ : 4-5 ತಾಲ್ಲೂಕಿನಲ್ಲಿ ಬೇಕಾದಷ್ಟು ಹಾಲನ್ನು ಉತ್ಪಾದನೆ ಮಾಡಿ ಕೆಎಂಎಫ್‌ಗೆ ಕೊಡಬಹುದು. ಆ ಹಾಲು ಉತ್ಪಾದನಾ ಸಹಕಾರ ಸಂಘಗಳ ಮೂಲಕ ಇವತ್ತು ಹಾಲನ್ನು ಪಡೆಯಬಹುದು. ಆದರೆ ಅದಕ್ಕೆ ಇವತ್ತು ಆದ್ಯತೆಯನ್ನು ಕೊಡುತ್ತಿಲ್ಲ. ಇಲ್ಲಿ ನಮಗೆ ಬೇಕಾದಂತಹ ಹಸುಗಳನ್ನು

ಇವತ್ತು ಉತ್ಪಾದನೆ ಮಾಡಲಿಕ್ಕೆ, ಈ ಒಂದು ಟ್ರಾನ್ಸಿಷನ್ ಬೆಲ್ಟ್ ಏನು ಇದೆ, ಬಹುಶ : ಮಲೆನಾಡು ಪ್ರದೇಶಕ್ಕೆ ಹೊಂದಿಕೊಂಡು ಬರುವಂತಹ, ಮಧ್ಯದಲ್ಲಿರುವಂತಹ ಅನೇಕ ಜಿಲ್ಲೆಗಳಲ್ಲಿ ನಾವು ಪಶುಸಂಗೋಪನೆಯನ್ನು ಚೆನ್ನಾಗಿ ಮಾಡಿ ಹಾಲಿನ ಉತ್ಪಾದನೆಯಲ್ಲಿ ತೊಡಗಿಸುವಂತಹ ಒಂದು ವ್ಯವಸಾಯ ಬೆಳೆದರೆ ಅದು ರೈತನ ಕೃಷಿಗೆ ಪೂರಕವಾದಂತಹ ಒಂದು ಉದ್ಯೋಗವಾಗಿ ಆಗುತ್ತದೆ. ಅದರಿಂದ ರೈತರ ಕುಟುಂಬದ ಸಂರಕ್ಷಣೆ ಆಗಲಿಕ್ಕೆ ಸಾಧ್ಯ ಇದೆ. ಆ ದಿಸೆಯಲ್ಲಿಯೂ ಸಹ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಅದರ ತಳಿಗಳ ಉತ್ಪಾದನೆ ವಿಚಾರ. ಬಹುಶ : ನಮ್ಮಲ್ಲಿ ಎಷ್ಟೋ ರಾಸುಗಳು ಇವತ್ತು ಹೆಚ್ಚು ಹಾಲನ್ನು ಕೊಡುವಂತಹ ತಳಿಗಳನ್ನು ನಮ್ಮ ಪಶುಸಂಗೋಪನೆ ವಿಶ್ವವಿದ್ಯಾಲಯ ಮಾಡಬೇಕಾಗುತ್ತದೆ, ಇವತ್ತು ಪಶುವೈದ್ಯಕೀಯ ಕಾಲೇಜುಗಳು ಅವನ್ನು ಮಾಡಬೇಕಾಗುತ್ತದೆ. ಹೈನಿನ ಉತ್ಪಾದನೆ ಸಹಿತ ಹೆಚ್ಚಾಗುವಲ್ಲಿ ಇವತ್ತೇನು ದೋಷಗಳು ಇವೆ? ಅಥವಾ ಅದಕ್ಕೆ ಬೇಕಾಗುವಂತಹ ಗುಜರಾತಿನಲ್ಲಿ ಇರುವಂತಹ ಎಮ್ಮೆ ತಳಿಗಳು ಆಗಲಿ ಅಥವಾ ಹೈಬ್ರಿಡ್ ಪಶು ತಳಿಗಳು ಆಗಲಿ ಅವು ಯಾವ್ಯಾವ ಪ್ರದೇಶದಲ್ಲಿ ಯಾವ್ಯಾವ ತಳಿಗಳಿಂದ ಲಾಭದಾಯಕವಾಗಿ ರೈತ ಹಾಲವನ್ನು ಉತ್ಪಾದನೆ ಮಾಡಬಹುದು, ಅದರಿಂದ ಅವರ ಕುಟುಂಬವನ್ನು ಸಂರಕ್ಷಣೆ ಮಾಡಬಹುದು, ಆ ದಿಸೆಯಲ್ಲಿ ಸಹಿತ ಇವತ್ತು ಪಶು ವೈದ್ಯಕೀಯ ಇಲಾಖೆ ಮತ್ತು ಪಶು ವೈದ್ಯಕೀಯ ವಿಶ್ವವಿದ್ಯಾಲಯ ಇಲ್ಲಿ ಸ್ಥಾಪನೆ ಆಗುವಂತಹ ಅಗತ್ಯ ಇದೆ. ಇವತ್ತು ಪಶು ವಿದ್ಯಾಲಯ ಇಲ್ಲಿ ಆದರೆ ಅನೇಕ ಜನ ಡಾಕ್ಟರ್‌ಗಳ ಕೊರತೆಯನ್ನು ನಾವು ತುಂಬಬಹುದು ಮತ್ತು ಅದಕ್ಕೆ ಬೇಡಿಕೆ ನಮ್ಮ ರಾಜ್ಯದ್ದೂ ಇದೆ. ಹೊರಗಿನ ರಾಜ್ಯದಲ್ಲಿಯೂ ಇದೆ. ಆ ದೃಷ್ಟಿಯಿಂದ ಈ ರಾಜ್ಯದಲ್ಲಿ ಪಶು ವಿಶ್ವವಿದ್ಯಾಲಯವನ್ನು ಈ ಸರ್ಕಾರ ಸ್ಥಾಪನೆ ಮಾಡುವಂತಹ ಅಗತ್ಯತೆ ಇದೆ. ಅದಕ್ಕೆ ಪೂರಕವಾಗಿ ಇವತ್ತು ಮಹಾ ವಿದ್ಯಾಲಯಗಳನ್ನು ಮಾಡಬೇಕಾಗುತ್ತದೆ. ಇವತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯ ಇದೆ. ಅಲ್ಲಿ ಇವತ್ತು ಒಂದು ಪಶು ವೈದ್ಯಕೀಯ ಮಹಾ ವಿದ್ಯಾಲಯವನ್ನು ಸ್ಥಾಪನೆ ಮಾಡಿದರೆ ಸುತ್ತಮುತ್ತಲಿನ ಜನಕ್ಕೆ ಇಡೀ ನಾಲ್ಕುರು ಜಿಲ್ಲೆಗಳಲ್ಲಿರುವಂತಹ ಆ ಪಶು ಬೆಳವಣಿಗೆಗೆ ಮತ್ತು ಪಶು ಸಂವರ್ಧನೆಗೆ ಹೆಚ್ಚು ಸಹಾಯ ಮಾಡಲು ಅನುಕೂಲ ಆಗುತ್ತದೆ. ಇವತ್ತು ತೋಟಗಾರಿಕೆ ವಿಚಾರ. ತೋಟಗಾರಿಕೆಗೆ ಎಷ್ಟು ಮಹತ್ವವನ್ನು ಕೊಡಬೇಕೋ ಅಷ್ಟು ಮಹತ್ವವನ್ನು ಇಲಾಖೆ ಕೊಡಲಿಲ್ಲ. ಬಹುಶ: ಕರ್ನಾಟಕ ತೋಟಗಾರಿಕೆಯಲ್ಲಿ ಅತೀ ಉತ್ತಮವಾದಂತಹ, ಒಂದು ಹವಾಗುಣವನ್ನು ಭೂಮಿಯ ಫಲವತ್ತತೆಯನ್ನು ಪಡೆದಿದೆ. ಬಹುಶ: ಇಡೀ ರಾಷ್ಟ್ರದ ಎಲ್ಲಾ ರಾಜ್ಯಗಳನ್ನೂ ತುಲನೆ ಮಾಡಿದರೆ ಇಲ್ಲಿ ಮಾವು ಹೆಚ್ಚು ಉತ್ತಮವಾಗಿ ಬೆಳೆಯಬಹುದು. ಇವತ್ತು ಮಹಾರಾಷ್ಟ್ರದಲ್ಲಿರುವಂತಹ ರತ್ನಾಗಿರಿ ಆಫೂರ್ ಎಂದು ಹೇಳಬಹುದು. ಆಫೂರ್ ಎಂದು ಹೇಳುತ್ತೇವೆ ಅಥವಾ ತೋತಾಪುರಿ ಎನ್ನುತ್ತೇವೆ ಅಥವಾ ಕಲಬು ಎನ್ನುತ್ತೇವೆ. ಇಂತಹ ಎಲ್ಲಾ ಮಾವು, ಅತಿ ಶ್ರೇಷ್ಠವಾದಂತಹ ಹಣ್ಣು. ಅಂತಹ ಹಣ್ಣನ್ನು ಈ ರಾಜ್ಯದಲ್ಲಿ ಬೆಳೆಯಲಿಕ್ಕೆ ಸಾಕಷ್ಟು ವಿಫುಲವಾದಂತಹ ಅವಕಾಶಗಳು ಇವೆ. ಅಂತಹ ಉತ್ತಮವಾದಂತಹ ಹವಾಗುಣ ಇದೆ. ಅದರ ಬೆಳವಣಿಗೆ ಮಾಡುವುದಕ್ಕೆ ತೋಟಗಾರಿಕೆ ಇಲಾಖೆ ಇದೆ. ಅವಕ್ಕೆ ಬೇಕಾಗುವಂತಹ ಸಸಿಗಳನ್ನು ಅಥವಾ ಅವಕ್ಕೆ ಬೇಕಾಗುವಂತಹ ಅವಕಾಶವನ್ನು ಅಥವಾ ವಿಸ್ತರಣಾ ವಿಭಾಗ ಏನು ಕೆಲಸ ಮಾಡಬೇಕೋ ಅದನ್ನು ಮಾಡಿದರೆ ಇಲ್ಲಿ ತೋಟಗಾರಿಕೆ ಹೆಚ್ಚು ಬೆಳೆಯುವುದಕ್ಕೆ ಅವಕಾಶ ಆಗುತ್ತದೆ. ಅದರಂತೆ ಬಾಳೆಯ ವಿಚಾರ. ಬಾಳೆಯಲ್ಲಿಯೂ ಸಹಿತ ಸಾಕಷ್ಟು ವ್ಯವಸಾಯ ಆಗುತ್ತಿದೆ. ಬಾಳೆಯ

ವಿಚಾರದಲ್ಲಿ ಸಹಿತ ಕರ್ನಾಟಕವೂ ಉತ್ತಮವಾದ ಬೆಳೆಯನ್ನು ಮಾಡುತ್ತಿದೆ. ಅದೇ ಪ್ರಕಾರ ಈಗ ಮಳೆ ಆಗದಂತಹ ಪ್ರದೇಶ ಯಾವುದು ಇದೆ, ಅಂದರೆ ಬಿಜಾಪುರದಂತಹ ಪ್ರದೇಶ ಏನು ಇದೆ, ಆ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯುತ್ತಿದ್ದಾರೆ, ಉತ್ತಮವಾದಂತಹ ದ್ರಾಕ್ಷಿ ಬೆಳೆಯುತ್ತಿದ್ದಾರೆ, ದಾಳಿಂಬೆ ಬೆಳೆಯುತ್ತಿದ್ದಾರೆ. ಇವತ್ತು ಚಿತ್ರದುರ್ಗದಲ್ಲಿ ಅಂಜೂರ ಬೆಳೆಯುತ್ತಿದ್ದಾರೆ. ಇಂತಹ ಎಲ್ಲಾ ತೋಟಗಾರಿಕೆ ಬೆಳೆ ಬೆಳೆಯಲಿಕ್ಕೆ ಕರ್ನಾಟಕ ರಾಜ್ಯ ಸಾಕಷ್ಟು ಅವಕಾಶವನ್ನು ಪಡೆದಿದೆ. ಇವಕ್ಕೆ ಸರಿಯಾದಂತಹ ಸಂಸ್ಕರಣಾ ಘಟಕಗಳು ಬೇಕಾಗಿವೆ. ಬೆಳೆದಂತಹ ಇಂತಹ ಪೆರಿಶಬಲ್ ಹಣ್ಣಿನ ಸಂಸ್ಕರಣೆ ಮಾಡಿ, ಅವಕ್ಕೆ ಸರಿಯಾದ ಪ್ಯಾಕೇಜ್ ಮಾಡಿ ಎಲ್ಲಾ ವಿದೇಶಿಗಳಿಗೆ ಸಹಿತ ಇವ್ವು ಮಾರುಕಟ್ಟೆ ಮಾಡಲಿಕ್ಕೆ ಇಂತಹ ತೋಟಗಾರಿಕೆ ಬೆಳೆಗಳಿಂದ ಸಾಧ್ಯ ಇದೆ. ಆದರೆ ತೋಟಗಾರಿಕೆ ಬೆಳೆಗಳಿಗೆ ಇವತ್ತು ತೋಟಗಾರಿಕೆ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇವತ್ತು ಅವರದ್ದೂ ಅನೇಕ ಫಾರ್ಮ್‌ಗಳು ಇವೆ. ಅವರು ಎಷ್ಟು ಸಸಿಗಳನ್ನು ಇವತ್ತು ರೈತರಿಗೆ ಒದಗಿಸುತ್ತಿದ್ದಾರೆ? ಯಾವ ಸಸಿಗಳನ್ನು ಇವತ್ತು ಪೂರ್ಣ ಪ್ರಮಾಣದಲ್ಲಿ ಒದಗಿಸದಿದ್ದರೂ 50 ಪರ್ಸೆಂಟ್ ಆದರೂ ರೈತರಿಗೆ ಬೇಕಾಗುವಂತಹ ತೋಟಗಾರಿಕೆ ಸಸಿಗಳನ್ನು ಒದಗಿಸಲಿಕ್ಕೆ ನಮ್ಮ ತೋಟಗಾರಿಕಾ ಇಲಾಖೆಯ ಫಾರ್ಮಗಳಿಂದ ಸಾಧ್ಯತೆ ಆಗಿದ್ದಾವೆಯೇ ಹೇಗೆ? ಅಲ್ಲಿ ಬೇಕಾದಷ್ಟು ದೊಡ್ಡ ದೊಡ್ಡ ಫಾರ್ಮ್‌ಗಳು ಇವೆ. ಆ ಫಾರ್ಮ್‌ನಲ್ಲಿ ಹೋದರೆ ನಮಗೆಲ್ಲಾ ದು:ಖವಾಗುತ್ತದೆ. ಏಕೆಂದರೆ, ಆ ಫಾರಂಗಳು ಅಂತಹ ದುಸ್ಥಿತಿಯಲ್ಲಿ ಇವೆ.

ಅಧ್ಯಕ್ಷರು: ತಾವು ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಚಂದ್ರಕಾಂತ್ ಬೆಲ್ಲದ್: ನನಗೆ ಇನ್ನೂ 10-15 ನಿಮಿಷ ಬೇಕು.

ಅಧ್ಯಕ್ಷರು: ಈಗಾಗಲೇ 45 ನಿಮಿಷ ಆಗಿದೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಈ ಎಲ್ಲಾ ಬೆಳೆಗಳನ್ನು ಬೆಳೆಯಲಿಕ್ಕೆ, ಇವತ್ತು ನಮ್ಮಲ್ಲಿ ದೊಡ್ಡ ಪ್ರಮಾಣದಲ್ಲಿ ಅಡಿಕೆ ಮಾಡಬಹುದು. ಇವತ್ತು ತೆಂಗಿನ ನುಸಿ ವಿಚಾರ. ರೈತರು ತೆಂಗನ್ನು ಇವತ್ತು ದೊಡ್ಡ ಪ್ರಮಾಣದಲ್ಲಿ ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದ್ದಾರೆ. ಈ ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಪಾಲುದಾರರಾಗಿ ತೆಂಗು ಬೆಳೆಯುವ ರೈತನಿಗೆ, ತೆಂಗು ಬೆಳೆಗೆ ನುಸಿ ರೋಗ ತಗುಲಿ ತೊಂದರೆ ಆಗಿದೆ. ಇವತ್ತು ಎಷ್ಟು ದೊಡ್ಡ ಹಾನಿಯನ್ನು ಕರ್ನಾಟಕದ ರೈತರು ಆ ತೋಟಗಾರಿಕಾ ಇಲಾಖೆಯಿಂದ ಅನುಭವಿಸಿದ್ದಾರೆ; ಅದಕ್ಕೆ ಸರ್ಕಾರ ಇವತ್ತೇನು ಸಹಾಯ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ ಮತ್ತು ಆ ನುಸಿ ರೋಗಕ್ಕೆ ಖರ್ಚು ಮಾಡಿದಂತಹ ಹಣ ಸಹಿತ ಇವತ್ತು ವ್ಯರ್ಥವಾಗಿ ಬೊಕ್ಕಸದಿಂದ ಹಣ ಖಾಲಿ ಆಗಿದೆಯೇ ಹೊರತಾಗಿ ಅದರ ಲಾಭ ಆಗಿಲ್ಲ, ಯಾವ ನುಸಿ ಪೀಡೆಯನ್ನೂ ಹೋಗಲಾಡಿಸಿಲ್ಲ. ಅದರ ಲಾಭ ನಮ್ಮ ರೈತರಿಗೆ ಸಿಗಲಿಲ್ಲ. ಎಷ್ಟೋ ತೋಟಗಳಲ್ಲಿ ಇವತ್ತು ತೆಂಗಿನ ಬೆಳೆ ನಾಶವಾಗಿ ಹೋಗಿದೆ. ಇಂತಹ ಒಂದು ದುಸ್ಥಿತಿಯನ್ನು ನಾವು ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಇದಕ್ಕೆ ಕೃಷಿ ವಿಶ್ವವಿದ್ಯಾಲಯ ಸಹಿತ ಸರಿಯಾದ ರೀತಿಯಲ್ಲಿ ಸ್ಪಂದಿಸಿ ಅದಕ್ಕೆ ಸರಿಯಾದಂತಹ ವೇಳೆಗೆ, ಸರಿಯಾದಂತಹ ಔಷಧಿಗಳನ್ನು ಅಥವಾ ಅದಕ್ಕೆ ಬೇಕಾಗುವಂತಹ ಅವಶ್ಯಕತೆಗಳನ್ನು ಪೂರೈಸಿದ್ದರೆ ರೈತ ಆ ಬೆಳೆಗಳನ್ನು ಸಂರಕ್ಷಣೆ ಮಾಡಬಹುದಿತ್ತು. ಆ ಕೆಲಸ ಸರ್ಕಾರ ಮಾಡಲಿಲ್ಲ,

ವಿಫಲ ಆಗಿದೆ. ಮತ್ತೆ ನುಸಿ ಪೀಡೆಯಿಂದ ಬಹಳಷ್ಟು ರೈತರು ಸಂಕಷ್ಟದಲ್ಲಿ ಇವತ್ತು ಇದ್ದಾರೆಂದು ಹೇಳಬೇಕಾಗುತ್ತದೆ. ಅದರ ಜೊತೆಗೆ ಇವತ್ತು ರೈತನಿಗೆ ಆಗಲೀ, ಕೃಷಿ ತೋಟಗಾರಿಕೆಗೆ ಆಗಲಿ ಕೇಂದ್ರ ಸರ್ಕಾರ ಈ ಒಂದು ದೊಡ್ಡ ಫಾರ್ಮರ್ಸ್‌ಗೆ ಕ್ರೆಡಿಟ್ ಕಾರ್ಡ್ ಒದಗಿಸಲಿಕ್ಕೆ, ಹಣಕಾಸಿನ ಸಹಾಯ ಒದಗಿಸಲಿಕ್ಕೆ ಯೋಜನೆ ತಂದಿದೆ. ಅನೇಕ ವರ್ಷಗಳ ಬೇಡಿಕೆ ಇದಾಗಿತ್ತು.

ಶ್ರೀ ಯು,ಆರ್. ಸಭಾಪತಿಯವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು ಬಹುಶಃರೈತನಿಗೆ ಸರಿಯಾದ ವೇಳೆಗೆ ಸಾಲ ದೊರಕದೇ ಅವನು ಬೇರೆ ಕಡೆಗೆ ದೊಡ್ಡ ಪ್ರಮಾಣದಲ್ಲಿ ಅಲೆದಾಡಿ ಸಾಲ ತಂದು ಹಾನಿಯನ್ನು ಅನುಭವಿಸುತ್ತಿದ್ದ. ಇವತ್ತು ಕೇಂದ್ರ ಸರ್ಕಾರ ಏನು ಇದೆ, ಹಣಕಾಸಿನ ಸಹಾಯ ಮಾಡಲಿಕ್ಕೆ ಕ್ರೆಡಿಟ್ ಕಾರ್ಡ್ ತಂದಿದೆ. ಆ ಕ್ರೆಡಿಟ್ ಕಾರ್ಡ್ ಮೂಲಕ ಇವತ್ತು ಅವನಿಗೆ ಬೆಳೆ ಸಾಲವಾಗಲೀ ಮಧ್ಯಮಾವಧಿ ಸಾಲವಾಗಲೀ, ದೀರ್ಘಾವಧಿ ಸಾಲವಾಗಲೀ ಅವನ ಹಿಡುವಳಿಗೆ ತಕ್ಕಂತೆ ಅಥವಾ ಅವನ ಪ್ರದೇಶದಲ್ಲಿ ಯಾವ ಬೆಳೆಗಳನ್ನು ಮಾಡುತ್ತಿದ್ದಾನೆ, ಆ ಬೆಳೆಗಳಿಗೆ ತಕ್ಕಂತೆ ನೀರಾವರಿಗೆ ಸಂಬಂಧಿಸಿದಂತೆ ಅವಕ್ಕೆ ಸಾಲವನ್ನು ಕೊಡುವಂತಹ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ತಂದಿದೆ. ಆದರೂ ಸಹಿತ ರೈತ ಸರಿಯಾದ ದಿಸೆಯಲ್ಲಿ ಪ್ರಯೋಜನವನ್ನು ಪಡೆಯುವಲ್ಲಿ ನಮ್ಮ ಕೃಷಿ ಇಲಾಖೆಯಾಗಲೀ ಅಥವಾ ಅದಕ್ಕೆ ಸಂಬಂಧಿಸಿದ ತೋಟಗಾರಿಕಾ ಇಲಾಖೆಯಾಗಲೀ ಅದರ ಪ್ರಯೋಜನವನ್ನು ಹೇಗೆ ಪಡೆಯಬೇಕು, ಅದರ ಸದುಪಯೋಗವಾಗಬೇಕು. ರೈತ ಅದರಿಂದ ಉದ್ಧಾರವಾದರೆ ರಾಜ್ಯದ ಉದ್ಧಾರವಾಗುತ್ತದೆ. ರಾಷ್ಟ್ರದ ಉದ್ಧಾರವಾಗುತ್ತದೆ. ರೈತನ ಸಂಕಷ್ಟಗಳನ್ನು ಅರಿತುಕೊಂಡು ಕೆಲಸ ಮಾಡಿದ್ದೇ ಆದರೆ ನಮ್ಮ ರೈತರು ಗ್ರಾಮಗಳಿಂದ ಶಹರ್‌ಗಳಿಗೆ ವಲಸೆ ಬರುವ ಅವಶ್ಯಕತೆ ಇಲ್ಲ. ಈ ದಿಸೆಯಲ್ಲಿ ಪಶು ಸಂಗೋಪನೆಯೇ ಇರಬಹುದು, ಕೃಷಿಯೇ ಇರಬಹದು, ತೋಟಗಾರಿಕೆಯೇ ಇರಬಹುದು, ಈ ಮೂರಕ್ಕೂ ಕೃಷಿ ಕ್ರೆಡಿಟ್ ಕಾರ್ಡ್ ಏನು ಇದೆ, ಅದನ್ನು ಕೇಂದ್ರ ಸರ್ಕಾರ ತಂದಿರುವುದು, ಅದಕ್ಕೆ ನಾವೆಲ್ಲರೂ ಅಭಿನಂದಿಸಬೇಕಾಗುತ್ತದೆ. ಅದರ ಪ್ರಯೋಜನವನ್ನು ಸರಿಯಾಗಿ ಪಡೆಯುವಲ್ಲಿ ನಾವೆಲ್ಲರೂ ರೈತರಿಗೆ ಸಹಾಯಕರಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ನಂತರದಲ್ಲಿ ನಿಸರ್ಗದ ವಿಕೋಪದಿಂದ ಬೆಳೆ ಹಾನಿಯಾಗುತ್ತಿದೆ ಅಥವಾ ಕ್ರಿಮಿ ಕೀಟಗಳಿಂದ ಬೆಳೆ ಹಾನಿಯಾಗುತ್ತಿದೆ. ಇವೆಲ್ಲವುಗಳಿಗೆ ಸಂಬಂಧಿಸಿದಂತೆ ರೈತರ ಸಲುವಾಗಿ ಈ ಬೆಳೆ ವಿಮೆಯನ್ನು ಕೇಂದ್ರ ಸರ್ಕಾರ ಇವತ್ತು ತಂದಿದೆ. ರಾಜ್ಯ ಸರ್ಕಾರ ಅದರಲ್ಲಿ ಪಾಲುಗಾರರಾಗಿ ಇವತ್ತು ರೈತರನ್ನು ಸಂರಕ್ಷಣೆ ಮಾಡುವುದಕ್ಕೆ ಬಂದಂಥ ಯಾವ ಕ್ರೆಡಿಟ್ ಕಾರ್ಡ್ ಆಗಲಿ ಹಣಕಾಸಿನ ಸಹಾಯ ಮತ್ತು ಬೆಳೆ ಹಾನಿಯಾದ ವೇಳೆಗೆ ಅವನಿಗೆ ಸಹಾಯವನ್ನು ಮಾಡುವಂಥ ಬೆಳೆ ವಿಮೆಯಾಗಲೀ ಇದು ಹೆಚ್ಚು ಫಲಕಾರಿಯಾಗಿ ರೈತನಿಗೆ ವೇಳೆಗೆ ಸರಿಯಾಗಿ ಮುಟ್ಟುವಂತೆ ಅಥವಾ ಅದರ ಪ್ರಯೋಜನವನ್ನು ರೈತ ಪಡೆಯುವಂತೆ ಅವನಿಗೆ ತರಬೇತಿಯನ್ನು ನೀಡಿ ಅಥವಾ ಅವರಿಗೆ ಹಣಕಾಸಿನ ಸಹಾಯವನ್ನು ಮಾಡಬೇಕಾಗುತ್ತದೆ. ಕಳೆದ ವರ್ಷ ಇಂಥ ಒಂದು ಬರಗಾಲದಲ್ಲಿ ಎಲ್ಲಾ ರಾಜ್ಯದಲ್ಲಿಯೂ ನಮ್ಮ ಕಡೆಗೆ ಮುಂಗಾರು ಬೆಳೆಯೂ ಹೋಗಿದೆ, ಹಿಂಗಾರು ಬೆಳೆಯೂ ಹೋಗಿದೆ. ಆದರೆ ಇವೆಲ್ಲಾ ಬೆಳೆಗಳಿಗೆ ವಿಮಾ ಇಳಿಸಿದಂಥ ರೈತನಿಗೆ ಸಕಾಲದಲ್ಲಿ ಸರ್ಕಾರ ಹಣವನ್ನು ಕೊಡಲಿಲ್ಲ. ಅದರ ಲಾಭಾ ರೈತನಿಗೆ ಸರಿಯಾದಂಥ ವೇಳೆಗೆ ಮುಟ್ಟಲಿಲ್ಲ. ಕೇಂದ್ರ ಸರ್ಕಾರ ಇವತ್ತು ತಂದಂಥ ಈ ಬೆಳೆ ವಿಮಾ ವಿಧಾನವನ್ನು ರೈತರಿಗೆ

ಮುಟ್ಟಿಸುವಲ್ಲಿ ನಮ್ಮ ರಾಜ್ಯ ಸರ್ಕಾರ ಇವತ್ತು ವಿಫಲವಾಯಿತು. ನಮ್ಮ ರೈತನಿಗೆ ಸಕಾಲದಲ್ಲಿ ಅವನಿಗೆ ಬೆಳೆ ಬಾರದೇ ಇದ್ದುದರಿಂದ ಮತ್ತು ಹಾನಿಯನ್ನು ಅನುಭವಿಸಿದ್ದರಿಂದ ಅವನು ಕೊಟ್ಟಂಥ ಹಣಕ್ಕೆ ಆ ಪ್ರೀಮಿಯಂಗೆ ತಕ್ಕಂತೆ ಅವನಿಗೆ ಆ ವಿಮಾ ಹಣ ಬಂದರೆ ಅವನು ಬದುಕುವುದಕ್ಕೆ ಅನುಕೂಲವಾಗುತ್ತಿತ್ತು ಅಥವಾ ಈ ಮುಂಗಾರಿನಲ್ಲಿ ಅವನಿಗೆ ಬೀಜ ಗೊಬ್ಬರವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು; ಆ ದಿಸೆಯಲ್ಲೂ ಸಹಿತ ಸರ್ಕಾರ ಸರಿಯಾದ ರೀತಿಯಲ್ಲಿ ವಿತರಣೆಯನ್ನು, ಸರಿಯಾದ ವೇಳೆಗೆ ಮಾಡಲಿಲ್ಲ ಮತ್ತು ಇದರಿಂದ ಏನಾಗುತ್ತಿದೆ ಎಂದರೆ ಇವತ್ತು ಕೇಂದ್ರ ಸರ್ಕಾರ ಇದನ್ನು ನೀಡಿದ್ದಾಗ್ಯೂ ಸಹ, ಇಂಥ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದಿದ್ದಾಗ್ಯೂ ಸಹ ರಾಜ್ಯ ಸರ್ಕಾರ ರೈತನ ಬೆಂಬಲಕ್ಕೆ, ರೈತನ ಸಹಾಯಕ್ಕೆ ಇವರು ಬರಲಿಲ್ಲವೆಂದರೆ ಈ ಇಲಾಖೆ ಎಷ್ಟೊಂದು ರೈತರ ಬಗ್ಗೆ ಆಸಕ್ತಿ ತಾಳಿದೆ ಅಥವಾ ಸರ್ಕಾರ ರೈತರ ಬಗ್ಗೆ ಎಷ್ಟೊಂದು ಕಾಳಜಿಯನ್ನು ವಹಿಸಿದೆ ಎನ್ನುವುದನ್ನು ಇವತ್ತು ನಾವು ಕಾಣುತ್ತಿದ್ದೇವೆ. ಅದರ ಜೊತೆಗೆ ಹಿಪ್ಪುನೇರಳೆಯಲ್ಲಿ ಇಡೀ ರಾಷ್ಟ್ರದಲ್ಲಿಯೇ ಉತ್ತಮವಾದ ಅವಕಾಶವನ್ನು ನಮ್ಮ ರಾಜ್ಯ ಇವತ್ತು ಪಡೆದಿದೆ. ಇದು ಕೇವಲ ಈ ಕೋಲಾರ ಭಾಗಗಳಲ್ಲಿ ಮಾತ್ರ ಇದೆ. ನಾನು ಹೇಳಿದ್ದೇನೆ, ಧಾರವಾಡವೂ ಸಹಿತ ಉತ್ತರ ಭಾಗದಲ್ಲಿ ಅಥವಾ ಉತ್ತರ ಕರ್ನಾಟಕದಲ್ಲಿ ಅನೇಕ ಭಾಗಗಳಲ್ಲಿ ಈ ಒಂದು ಹಿಪ್ಪುನೇರಳೆ ರೇಷ್ಮೆ ವ್ಯವಸಾಯವನ್ನು ಮಾಡಿದರೆ ಅಲ್ಲಿ ಚಿಕ್ಕಪುಟ್ಟ ರೈತರುಗಳು ಏನು ಇದ್ದಾರೆ, ಒಂದು ಎಕರೆ - ಎರಡು ಎಕರೆ ಇರುವ ರೈತರುಗಳು ಇವತ್ತು ಹಿಪ್ಪುನೇರಳೆ ಮೂಲಕ ವ್ಯವಸಾಯವನ್ನು ಮಾಡಿ ಅವರೂ ಸಹ ಲಾಭದಾಯಕ ಬೆಳೆಯನ್ನು ತೆಗೆಯಬಹುದು. ಅವರ ಆರ್ಥಿಕ ಪರಿಸ್ಥಿತಿಯೂ ಸುಧಾರಣೆಯಾಗಬಹುದು. ಅದರ ಮೇಲೆ ಅವನ ಕುಟುಂಬ ಸರಿಯಾದ ಜೀವನವನ್ನು ಮಾಡಬಹುದು. ಶಹರ್‌ಗಳಿಗೆ ವಲಸೆ ಬರುವ ಈ ಯುವಕರನ್ನು ನಾವು ತಡೆಗಟ್ಟಬಹುದು. ಅಥವ ಅಲ್ಲಿ ಇರುವ ಎಲ್ಲಾ ಕೂಲಿಕಾರರಿಗೆ ಈ ಒಂದು ಉದ್ಯೋಗ ಅವಕಾಶ ಸಿಗಬಹುದು ಎಂದು ಹೇಳಿ ನಾವು ಇದನ್ನು ವಿಸ್ತರಣೆ ಮಾಡುವುದಕ್ಕೆ ಕೇಳಿಕೊಂಡಾಗ್ಯೂ ಸಹಿತ ಇವತ್ತು ಉತ್ತರ ಕರ್ನಾಟಕದಲ್ಲಿ ಏನು ರೇಷ್ಮೆ ವ್ಯವಸಾಯ ಬೆಳವಣಿಗೆಯಾಗಬೇಕಾಗಿತ್ತು, ಅದು ಬೆಳವಣಿಗೆಯಾಗುತ್ತಿಲ್ಲ. ಚೈನಾದಿಂದ ಒಂದು ಹೊಸ ರೇಷ್ಮೆ ಏನು ಬರುತ್ತಿದೆ, ಅಂಥ ಸುಧಾರಿತ ತಳಿಗಳನ್ನು ಸಹಿತ ಅಲ್ಲಿ ಅಭಿವೃದ್ಧಿ ಮಾಡಿ ಅದನ್ನು ನಮ್ಮ ರೈತರಿಗೆ ನೀಡಬೇಕಾಗಿದೆ. ಅದರಲ್ಲಿಯೂ ಸಹಿತ ನಮ್ಮ ಈ ಸರ್ಕಾರ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ಇವೆಲ್ಲವುಗಳ ಬೆಳವಣಿಗೆಯಾಗಬೇಕಾದರೆ ಅವುಗಳಿಗೆ ಸರಿಯಾದ ವೇಳೆಗೆ ಹಣಕಾಸಿನ ಸಹಾಯ ಮತ್ತು ಅವರು ಬೆಳೆದಂಥ ಉತ್ಪನ್ನಗಳನ್ನು ಸರಿಯಾದ ಪ್ರಮಾಣದಲ್ಲಿ ಕೊಯಿಲು ಮಾಡುವಂಥದ್ದು ಅಥವಾ ಅದನ್ನು ಸರಿಯಾದ ರೀತಿಯಲ್ಲಿ ಪ್ಯಾಕೇಜಿಂಗ್ ಮಾಡುವಂಥದ್ದು ಮತ್ತು ಬಂದಂಥ ವಸ್ತುಗಳನ್ನು ಅವರಿಗೆ ಬೆಂಬಲ ಬೆಲೆ ಕೊಡಲಿಕ್ಕಾಗಲಿ ಅಥವಾ ಮಾರುಕಟ್ಟೆಯಲ್ಲಿ ಬೆಲೆ ಪೂರ್ಣ ಬಿದ್ದಾಗ ರೈತರಿಗೆ ಸಹಾಯ ನೀಡಬೇಕು. ನಮ್ಮಲ್ಲಿ ಆಲೂಗಡ್ಡೆ ಬೆಲೆ ; ಬಹುಶ : ಧಾರವಾಡದ ಸುತ್ತಮುತ್ತ ನಮ್ಮ ರೈತರು ಆಲೂಗಡ್ಡೆಯನ್ನು ಬೆಳೆಯುತಿದ್ದಾರೆ. ಆಲೂಗಡ್ಡೆಗೆ ಬೆಲೆ ಸರಿಯಾಗಿ ಸಿಗದೆ ಇದ್ದಾಗ ಇವತ್ತು ಮಧ್ಯ ಪ್ರವೇಶಿಸಿ ಸರ್ಕಾರ ಖರೀದಿ ಮಾಡಿದ ವಿಧಾನವನ್ನು ನೋಡಿದರೆ ಯಾವ ವೇಳೆಗೆ ಆಲೂಗಡ್ಡೆಯನ್ನು ಖರೀದಿ ಮಾಡಬೇಕಾಗಿತ್ತೋ ಆ ವೇಳೆಗೆ ರೈತನಿಂದ ಖರೀದಿ ಮಾಡುವುದಕ್ಕೆ ಮಧ್ಯೆ ಪ್ರವೇಶಿಸಿಲ್ಲ. ನಂತರ ಇವತ್ತು ಅದಕ್ಕೆ ಸಾಕಷ್ಟು ಒತ್ತಾಯವನ್ನು ತಂದಮೇಲೆ ಆ ಆಲೂಗಡ್ಡೆಯನ್ನು ಖರೀದಿ

ಮಾಡಿದರು. ಖರೀದಿ ಮಾಡಿದಂಥ ಆಲೂಗಡ್ಡೆಯನ್ನು ಇಡಲು, ಸರಿಯಾದ ಶೀತಾಗಾರಗಳಿಲ್ಲ. ಅದಕ್ಕೆ ಸರಿಯಾದಂಥ ಸಂಸ್ಕರಣ ಘಟಕಗಳಿಲ್ಲ. ಆ ರೀತಿ ಆಲೂಗಡ್ಡೆಯನ್ನು ತೆಗೆದುಕೊಂಡು ಬಂದಂಥ ಸರ್ಕಾರ ಅದನ್ನು ಸರಿಯಾಗಿ ಸಂರಕ್ಷಣೆ ಮಾಡದೆ, ಸಂಗ್ರಹ ಮಾಡದೆ ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾನಿಯನ್ನು ಅನುಭವಿಸಿತ್ತು. ಏಕೆ ಅನುಭವಿಸಿತು ಎಂದರೆ ಅದಕ್ಕೆ ಇವತ್ತು ಸರಿಯಾದ ಶೀತಾಗಾರಗಳಿಲ್ಲ. ಧಾರವಾಡದಿಂದ ನಾನು ಮೂರನೇ ಸಲ ಎಂಎಲ್ಎ ಆಗಿ ಬಂದಿದ್ದೇನೆ. ಆ ಪ್ರದೇಶದಲ್ಲಿ ಇಂಥ ಆಲೂಗಡ್ಡೆ ವಗ್ಯೆರೆ ಮುಂತಾದ ಬೆಳೆಗಳನ್ನು ಬೆಳೆಯುವಂಥ ಪ್ರದೇಶದಲ್ಲಿ ಒಂದು ಶೀತಾಗಾರದ ಅವಶ್ಯಕತೆ ಇದೆ ಎಂದು ಹೇಳಿ ಎಪಿಎಂಸಿ ಯಾರ್ಡ್‌ನಲ್ಲಿ ಒಂದು ಎಕರೆ ಜಮೀನನ್ನು ಕೊಡಿಸಿ ಅದರ ಬಗ್ಗೆ ತೋಟಗಾರಿಕೆ ಇಲಾಖೆಯವರು ಹಣವನ್ನು ತುಂಬಿದರೂ ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಿಲ್ಲ. ಇದರ ಬಗ್ಗೆ ನಾನು ಅನೇಕ ಸಲ ಪ್ರಶ್ನೆ ಹಾಕಿದರೂ ಸಹ ಶೀತಾಗಾರಗಳನ್ನು ಕಟ್ಟಿಸುತ್ತೇವೆ ಎಂದು ಹೇಳಿ ಇಲ್ಲಿಯವರೆಗೂ ಆ ಶೀತಾಗಾರಗಳನ್ನು ಕಟ್ಟಿಸಿಲ್ಲ. ಇವತ್ತು ಅಲ್ಲಿಯ ಜನರಿಗೆ ಬೇಕಾಗುವಂಥ ಇಂಥ ಪೆರಿಷಬಲ್ ಗೂಡ್ಸ್ ಏನು ಇವೆ ಅಥವಾ ಈ ತೋಟಗಾರಿಕೆ ಬೆಳೆಗಳು ಇವೆ, ಅವುಗಳನ್ನೆಲ್ಲಾ ಸಂರಕ್ಷಣೆ ಮಾಡುವುದಕ್ಕೆ ಶೀತಾಗಾರಗಳ ಅವಶ್ಯಕತೆ ಇದೆ ಮತ್ತು ಆಲೂಗಡ್ಡೆಯನ್ನು ಸರಿಯಾದ ಸ್ಥಳದಲ್ಲಿ ಇವತ್ತು ಸಂಗ್ರಹಿಸಿಟ್ಟಿದ್ದರೆ ಸರ್ಕಾರಕ್ಕೆ ಹಾನಿಯಾಗುವಂಥ ಸಂಭವ ಇರಲಿಲ್ಲ. ಸರಿಯಾದ ವೇಳೆಗೆ ಅವುಗಳನ್ನು ಸಂಗ್ರಹಿಸದೆ ಸರಿಯಾದ ಉಗ್ರಾಣಗಳಲ್ಲಿ ಅವುಗಳನ್ನು ಸಂಗ್ರಹಿಸಿಟ್ಟು ಅವುಗಳನ್ನು ನಾವು ಮಾರಾಟ ಮಾಡಿದ್ದರೆ ನಮ್ಮ ಸರ್ಕಾರಕ್ಕೂ ಕೂಡ ಅದರಿಂದ ಹಾನಿಯಾಗುತ್ತಿರಲಿಲ್ಲ. ರೈತನಿಗೆ ನಾವು ಸರಿಯಾದ ವೇಳೆಗೆ ಸಹಾಯ ಮಾಡುವುದರ ಜೊತೆಗೆ ನಾವು ತೊಡಗಿಸಿದ ಹಣ, ಸರ್ಕಾರದ ಹಣ ಮತ್ತೆ ಸರಿಯಾಗಿ ಸರ್ಕಾರಕ್ಕೆ ಯಾವ ರೀತಿಯಲ್ಲೂ ಹಾನಿಯಾಗದಂತೆ ಉಳಿಯ ಬೇಕಾದರೆ ಸರಿಯಾದ ಉಗ್ರಾಣಗಳನ್ನು, ಶೀತಾಗಾರಗಳನ್ನು ಮತ್ತು ಅಥವಾ ಅದಕ್ಕೆ ಸಂಸ್ಕರಣ ಮಾಡುವಂಥ ಅನೇಕ ಘಟಕಗಳನ್ನು ಮಾಡಬೇಕಾದ ಅಗತ್ಯತೆ ಇದೆ. ಅಂಥ ಕಾರ್ಯದಲ್ಲೂ ಸಹಿತ ಸರ್ಕಾರ ಇವತ್ತು ವಿಫಲವಾಗಿದೆ. ಕೇವಲ 20 ಕೋಟಿ ರೂಪಾಯಿಗಳನ್ನು ಅಥವಾ ಹೆಚ್ಚು ಹಣವನ್ನು ಅದಕ್ಕೆ ತೆಗೆಸಿ ಇಟ್ಟು ಬೆಂಬಲ ಬೆಲೆ ಕೊಡಬೇಕಾಯಿತು. ಅದೇ ಪ್ರಕಾರ ಇವತ್ತು ಗೋವಿನ ಜೋಳವನ್ನೂ ಸಹ ಸಂಗ್ರಹ ಮಾಡಿದರು. ರೈತನಿಗೆ ಸಹಾಯ ಮಾಡಬೇಕೆಂದು ಹೇಳಿ ಮಧ್ಯ ಪ್ರವೇಶಿಸಿ ಸಂಗ್ರಹ ಮಾಡಿದರು. ಎಷ್ಟು ಪ್ರಮಾಣದಲ್ಲಿ ಸಂಗ್ರಹ ಮಾಡಿದರು, ಎಷ್ಟು ಪ್ರಮಾಣದಲ್ಲಿ ಅದನ್ನು ಉಗ್ರಾಣಗಳಲ್ಲಿ ಶೇಖರಣೆ ಮಾಡಿದರು, ಅದರಿಂದ ರೈತನಿಗೆ ಒಂದು ದೃಷ್ಟಿಯಿಂದ ಸಹಾಯವನ್ನು ಮಾಡುವುದರ ಜೊತೆಗೆ ಈ ಸರ್ಕಾರ ತೊಡಗಿಸಿದಂಥ ಹಣ ಎಷ್ಟರಮಟ್ಟಿಗೆ ಅದು ಹಾನಿಯಾಗದಂತೆ ನಮಗೆ ದೊರಕಿತು. ಇವೆಲ್ಲಾ ವಿಚಾರ ಮಾಡಿದಾಗ ನಾವು ಪ್ರತಿ ಹುಟ್ಟುವಳಿಗೆ ತಕ್ಕಂತೆ ಪ್ರತಿ ಮಾರುಕಟ್ಟೆಗಳಲ್ಲಿ ಉಗ್ರಾಣಗಳನ್ನು ನಿರ್ಮಿಸಬೇಕಾಗಿದೆ. ಮಾರುಕಟ್ಟೆಯಲ್ಲಿ ಶೀತಾಗಾರಗಳನ್ನು ನಿರ್ಮಾಣ ಮಾಡಬೇಕಾಗಿದೆ ಮತ್ತು ಅವುಗಳಿಗೆ ಸಂಬಂಧಿಸಿದ ಪ್ಯಾಕೇಜಿಂಗ್ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಅನೇಕ ಉತ್ಪಾದನೆಗಳು ಹೊರ ಮಾರುಕಟ್ಟೆಗೆ ಇವತ್ತು ಅವಶ್ಯಕತೆ ಇದ್ದರೆ ಅವನ್ನು ಸರಿಯಾದ ರೀತಿಯಲ್ಲಿ ಹಾರ್ವೆಸ್ಟ್ ಮಾಡಿ ಅವುಗಳನ್ನು ಹೊರ ಮಾರುಕಟ್ಟೆಗೆ ಕಳುಹಿಸಬೇಕಾಗುತ್ತದೆ. ಇವತ್ತು ಪೂನಾದಲ್ಲಿರುವ ಅನೇಕ :ಸಂಘ ಸಂಸ್ಥೆಗಳನ್ನು ನೋಡಿದರೆ ನಮ್ಮಲ್ಲಿ ಅಂಥ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹವೇ ಇಲ್ಲ. ಅಂಥ ಒಂದು ವ್ಯವಸ್ಥೆಯೇ ಇಲ್ಲ. ನಮ್ಮ ಕರ್ನಾಟಕದಲ್ಲಿ

ಯಾವ ನಿಗಮಗಳು ಇವೆ, ಅವುಗಳೂ ಸಹಿತ ನಮ್ಮ ರೈತರಿಗೆ ಸಹಾಯ ಮಾಡುವ ಪರಿಸ್ಥಿತಿಯಲ್ಲಿ ಇವತ್ತು ಇಲ್ಲ. ಅನೇಕ ನಿಗಮಗಳು ಇವತ್ತು ಪೂರ್ಣ ಲುಕ್ಸಾನಿನಲ್ಲಿವೆ. ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಕೊಡತಕ್ಕ ಯಾವ ನಿಗಮ ಇತ್ತು, ಅದು ಇವತ್ತು ಪೂರ್ಣ ಹಾನಿಯಲ್ಲಿದೆ. ಇವೆಲ್ಲಾ ದೃಷ್ಟಿಯಿಂದ ನೋಡಿದರೆ ಹೊಸ ಹೊಸ ಯಂತ್ರೋಪಕರಣಗಳನ್ನು ಇವತ್ತು ರೈತರಿಗೆ ಕೊಡುವಲ್ಲಿ ಅಥವಾ ಅವನಿಗೆ ಪೂರೈಸುವಲ್ಲಿ ಅಥವಾ ಅವರಿಗೆ ಯಾಂತ್ರೋಪಕರಣಗಳಿಗೆ ಸಬ್ಸಿಡಿಯನ್ನು ನೀಡುವಲ್ಲಿ ಅಥವಾ ನೀರಿನ ಅಭಾವವನ್ನು ಇವತ್ತು ನಾವು ಕಾಣುತ್ತಿದ್ದೇವೆ, ಮಳೆ ಸರಿಯಾದ ವೇಳೆಗೆ ಆಗುತ್ತಿಲ್ಲ. ಇರುವಂಥ ನೀರನ್ನು ಸರಿಯಾದ ರೀತಿಯಲ್ಲಿ ನಮ್ಮ ಬೆಳೆಗಳಿಗೆ ಉಪಯೋಗಿಸಬೇಕಾಗಿದೆ. ಅದಕ್ಕೆ ಸ್ಪ್ರಿಂಕ್ಲರ್ ಆಗಲಿ, ಅಥವಾ ಡ್ರಿಪ್ ಇರಿಗೇಷನ್ ಆಗಲಿ ಡ್ರಿಪ್ ಇರಿಗೇಷನ್‌ಗೆ ಕೊಡುವ ಸಬ್ಸಿಡಿ ಏನು ಇತ್ತು, ಅದನ್ನು ಇವತ್ತು ಕಡಿಮೆ ಮಾಡಿದ್ದಾರೆ. ಇವತ್ತು ಅದರಿಂದ ನಮಗೆ ಬೆಳೆ ಸಂರಕ್ಷಣೆಯನ್ನು ಮಾಡುವುದಕ್ಕಾಗುತ್ತದೆ. ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆ ಡ್ರಿಪ್ ಇರಿಗೇಷನ್‌ಗೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿದೆ. ವಿದ್ಯುತ್ ಬಳಕೆಯನ್ನೂ ಸಹ ನಾವು ಅದರಿಂದ ಉಳಿತಾಯ ಮಾಡಬಹುದು. ವಿದ್ಯುಚ್ಛಕ್ತಿ ಕೊರತೆಯನ್ನು ನಾವು ನೋಡಿದರೆ ಇವತ್ತು ನಮ್ಮ ರೈತ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಲ್ಲಿದ್ದಾನೆ. ಇವತ್ತು ಯಾರು ಪಂಪ್‌ಸೆಟ್‌ನ್ನು ಹಾಕಿದ್ದಾರೆ, ಆ ರೈತನಿಗೆ ಮೊಟ್ಟ ಮೊದಲು ಈ ಬರಗಾಲದಿಂದ ಅಂದರೆ ಮಳೆ ಸರಿಯಾಗಿ ಆಗದೇ ಇರುವುದರಿಂದ ಭೂಮಿಯಲ್ಲಿ ಇರುವ ಜಲ ಪಾತಳಿ ಕೆಳಗೆ ಹೋಗಿಬಿಟ್ಟಿದೆ. ಎಷ್ಟೋ ಬೋರ್‌ವೆಲ್‌ಗಳು ಒಣಗಿಹೋಗಿದೆ. ಕೆರೆಕಟ್ಟೆಗಳೇ ಒಣಗಿ ಹೋದ ಮೇಲೆ ಬೋರ್‌ವೆಲ್‌ನಲ್ಲಿ ನೀರು ಎಲ್ಲಿ ಬರಬೇಕು? ಅನೇಕ ಕೆರೆಕಟ್ಟೆಗಳು ಒಣಗಿದ್ದರಿಂದ ಜಲ ಪಾತಳಿ ಪೂರ್ಣ ಕೆಳಗೆ ಹೋಗಿದೆ ಅಥವಾ ಇರುವ ಬೋರ್‌ವೆಲ್‌ಗಳಲ್ಲಿ ನೀರು ಸಿಕ್ಕಿದರೆ ವಿದ್ಯುತ್ ಕೊರತೆ. ವಿದ್ಯುತ್ ಕೊರತೆ ಎಂದರೆ ಇವತ್ತು ನಮ್ಮ ರಾಜ್ಯದಲ್ಲಿರುವಂಥ ರೈತ ಏನಾದರೂ ಪಂಪ್‌ಸೆಟ್ ಮೂಲಕ ಬೆಳೆಯನ್ನು ತೆಗೆದು ನಮ್ಮ ಕುಟುಂಬವನ್ನು ಸಂರಕ್ಷಣೆ ಮಾಡಬೇಕೆನ್ನುವ ಧೈರ್ಯ ಅವನಿಗೆ ಇಲ್ಲ. ಅಂತಹ ಪರಿಸ್ಥಿತಿ ಇವೊತ್ತು ಬಂದಿದೆ. ಹಾಕಿದಂಥ ಬೀಜ, ಬಂದಂಥ ಬೆಳೆ ಮತ್ತು ಸಕಾಲದಲ್ಲಿ ವಿದ್ಯುತ್ ಸೌಕರ್ಯ ಲಭ್ಯವಾಗದೇ ಇದ್ದುದ್ದರಿಂದ ಅನೇಕ ಫಸಲು ಹಾಳಾಗಿರುವ ದುಸ್ಥಿತಿಯನ್ನು ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿದ್ದೇವೆ. ರಾಜ್ಯ ಸರ್ಕಾರ ಯಾವ ದೃಷ್ಟಿಯಿಂದಲಾದರೂ ಗ್ರಾಮೀಣ ರೈತರ ಸಲುವಾಗಿ ಸಹಾಯ ಮಾಡುತ್ತಿದೆಯೇ? ಅವರನ್ನು ಬೆಂಬಲಿಸಲು ಯಾವ ರೀತಿಯಾದ ಸಹಾಯ ಸರ್ಕಾರ ಮಾಡುತ್ತಿದೆ? ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ, ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ, ಪಶುಸಂಗೋಪನೆ ಇಲಾಖೆ, ರೇಷ್ಮೆ ಇಲಾಖೆ, ತೋಟಗಾರಿಕೆ ಇಲಾಖೆ ಮೂಲಕ ವಿಸ್ತರಣಾ ವಿಭಾಗಗಳನ್ನು ಮತ್ತಷ್ಟು ಚುರುಕಾಗಿಸಿ ರೈತರಿಗೆ ಹೆಚ್ಚು ಸಹಾಯ ಮಾಡುವ ದಿಸೆಯಲ್ಲಿ ಈ ಎಲ್ಲಾ ಇಲಾಖೆಗಳನ್ನು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ತೊಡಗಿಸಬೇಕಾಗಿದೆ. ಇಲ್ಲದಿದ್ದರೆ, ರೈತನ ಬಗ್ಗೆ ಹೇಳುವುದೆಲ್ಲವೂ ಕೇವಲ ಮಾತಾಗುತ್ತದಷ್ಟೇ ಹೊರತು ನಿಜವಾಗಿಯೂ ರೈತರ ಬಗ್ಗೆ ಸರ್ಕಾರಕ್ಕೆ ಯಾವುದೇ ಕಳಕಳಿ ಇಲ್ಲವೆನ್ನುವಂಥ ಮಾತನ್ನು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಈಗ ಸದನವನ್ನು 3.00 ಗಂಟೆಯ ವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ:3.00 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನವು ಪುನ: ಮಧ್ಯಹ್ನ 3.30 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ಅವರು) ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

ವಿಷಯ: ವಿತ್ತೀಯ ಕಾರ್ಯಕಲಾಪಗಳು 2002-03ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದು).

ಅಧ್ಯಕ್ಷರು: ಮಾನ್ಯ ಸಭಾಪತಿಯವರೇ, ತಾವು ಈಗ ಬೇಡಿಕೆಗಳ ಮೇಲೆ ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸದನದಲ್ಲಿ ಇಲ್ಲ. ಹೀಗಿರುವಾಗ ಅವರ ಇಲಾಖೆಯ ಬೇಡಿಕೆಗಳ ಬಗ್ಗೆ ನಾವು ಮಾತನಾಡುವುದಾದರೂ ಹೇಗೆ?

ಶ್ರೀ ಯು.ಆರ್.ಸಭಾಪತಿ: ಮಾನ್ಯ ಕೋಳಿವಾಡ್‌ರವರು ಸದನದಲ್ಲಿ ಇದ್ದಾರಲ್ಲಾ? ಅವರು ಸಂಬಂಧಪಟ್ಟ ಮಂತ್ರಿಗಳಿಗೆ ನಡೆದ ಚರ್ಚೆ ಬಗ್ಗೆ ರಿಪೋರ್ಟ್ ಮಾಡುತ್ತಾರೆ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಕೋಳಿವಾಡ್‌ರವರು ಸದನದಲ್ಲಿದ್ದರೂ ಸಹಾ ಅವರು ಕೇವಲ ಗ್ರಾಮೀಣ ನೀರು ಸರಬರಾಜಿನ ರಾಜ್ಯ ಮಂತ್ರಿಗಳಾಗಿದ್ದಾರೆ. ಇಂದು ಮಂಡಿಸಿರುವ ಬೇಡಿಕೆಗಳು ಅವರ ಖಾತೆಯ ವ್ಯಾಪ್ತಿಗೆ ಬರುವುದಿಲ್ಲ. ಮಾನ್ಯ ಮಂತ್ರಿಗಳು ಸದನದಲ್ಲಿ ಹಾಜರಿರುವುದಿಲ್ಲ ಎಂದು ನಾವು ಎಷ್ಟು ಬಾರಿ ಹೇಳುವುದು? ಮಂತ್ರಿಗಳು ಇಲ್ಲದಿದ್ದ ಮೇಲೆ ನಾವು ಏಕೆ ಮಾತನಾಡಬೇಕು?

ಅಧ್ಯಕ್ಷರು: ಮಾನ್ಯ ಸದಸ್ಯರು ದಯವಿಟ್ಟು ನನ್ನ ಪೊಸಿಷನ್ ಅನ್ನೂ ಸಹ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಬಿ.ಕೋಳಿವಾಡ್: ಮಾನ್ಯ ಅಧ್ಯಕ್ಷರೇ, Rural Water Scheme is also a part of Rural Development and Panchayath Raj. I will take the responsibility. Whatever Hon'ble Member speaks, I will note down and report it to the concerned Minister.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಅದೆಲ್ಲಾ ನಡೆಯುವುದಿಲ್ಲ, ಗ್ರಾಮೀಣಾಭಿವೃದ್ಧಿ ಇಲಾಖೆಯ ಬೇಡಿಕೆಗಳ ಮೇಲೆ ನಾವು ಮಾತನಾಡುವಾಗ ಅದಕ್ಕೆ ಸಂಬಂಧಿಸಿದ ಸಚಿವರು ಸದನದಲ್ಲಿ ಇರಬೇಕಾಗುತ್ತದೆ. ಅವರ ಖಾತೆಗೆ ಸಂಬಂಧಪಟ್ಟಿದ್ದನ್ನು ತಾವು ನೋಟ್ ಮಾಡಿಕೊಳ್ಳಲು ಬರುವುದಿಲ್ಲ. ಮಂತ್ರಿಗಳೆಲ್ಲರಿಗೂ ಸಾಮೂಹಿಕ ಜವಾಬ್ದಾರಿ ಇದೆ ಎಂಬುದು ನಮಗೂ ಸಹಾ ಗೊತ್ತಿದೆ. ಮಾನ್ಯ ಅಧ್ಯಕ್ಷರು ಒಪ್ಪಿ ಬಿಟ್ಟರೆ, ನಾವೂ ಸಹಾ ಅದನ್ನು ಒಪ್ಪಿಕೊಳ್ಳುತ್ತೇವೆ. ಮಾನ್ಯ ಅಧ್ಯಕ್ಷರು ಯಾರೂ ಇಲ್ಲದಿದ್ದರೂ ಮಾತನಾಡಿ ಎಂದರೆ ನಾವು ಮಾತನಾಡಲು ಸಿದ್ಧವಾಗಿದ್ದೇವೆ. ಅಷ್ಟಕ್ಕೆ ಮಾತ್ರ ನೀವು ಸೀಮಿತವಾಗಿರಬೇಕು. ಗ್ರಾಮೀಣ

ನೀರು ಸರಬರಾಜು ಖಾತೆಯನ್ನು ಮಾನ್ಯ ಕೋಳಿವಾಡ್‌ರವರಿಗೆ ನೇರವಾಗಿ ಸ್ವತಂತ್ರ ನಿರ್ವಹಣೆ ಸಲುವಾಗಿ ಕೊಡಲಾಗಿದೆ. ಬಹಳ ದಿವಸಗಳಾದ ನಂತರ ಮಂತ್ರಿಗಳಾದ ನಿಮಗೆ ಕೊಟ್ಟಿರುವ ಖಾತೆ ಒಂದು ಖಾತೆಯೇ? ನಮ್ಮವರೊಬ್ಬರು ಮಂತ್ರಿಗಳಾದರು ಎಂದು ನಾವು ಬಹಳ ಸಂತೋಷಪಟ್ಟಿದ್ದೆವು. ಕ್ಯಾಬಿನೆಟ್ ದರ್ಜೆ ಮಂತ್ರಿ ಪದವಿ ಕೊಡುತ್ತಾರೆಂದು ಭಾವಿಸಿದ್ದೆವು. ಆದರೆ ಕೇವಲ ರಾಜ್ಯ ಸಚಿವರ ಸ್ಥಾನ ಕೊಟ್ಟಿದ್ದಾರೆ. ಆ ವಿಷಯ ಈಗ ಬೇಡ ಬಿಡಿ. ನಾನು ಮಾತನಾಡುವಾಗ ಅವೆಲ್ಲಾ ವಿಚಾರಗಳೂ ಸಹ ಇಲ್ಲಿ ಬರುತ್ತವೆ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮಾನ್ಯ ಮಂತ್ರಿಗಳನ್ನು ಕರೆಸಿ. ನಾವು ಅಧಿಕಾರದಲ್ಲಿದ್ದಾಗ ಒಂದು ದಿವಸ ಮಂತ್ರಿಗಳ ಇಲ್ಲದಿದ್ದರೆ ನೀವುಗಳು ಹೇಗೆ ಆಕ್ಷೇಪಿಸಿ ನಮ್ಮನ್ನೆಲ್ಲಾ ಎಷ್ಟು ಓಡಾಡಿಸುತ್ತಿದ್ದಿರಿ? ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಆಕ್ಷೇಪಿಸಿದ್ದ ಮಾನ್ಯ ತಿಮ್ಮಪ್ಪನವರು ಈಗ ಇಲ್ಲಿ ನಾವು ಆಕ್ಷೇಪಿಸಿದಾಗ ತಮ್ಮನ್ನು ಸಮರ್ಥಿಸಿಕೊಳ್ಳುವುದಕ್ಕೆ ಹೋಗಬಾರದು.

ಅಧ್ಯಕ್ಷರು: ಸದನದಲ್ಲಿ ಮಂಡಿಸಿರುವ ಬೇಡಿಕೆಗಳ ಪಟ್ಟಿಯ ಪ್ರಕಾರ ಈಗ ಸದನದಲ್ಲಿ ಒಟ್ಟು ಹತ್ತು ಮಂದಿ ಮಂತ್ರಿಗಳಾದರೂ ಹಾಜರಿರಬೇಕಾಗಿತ್ತು, ಮಾನ್ಯ ನಾಡಗೌಡರೇ, ಮಾನ್ಯ ಮಂತ್ರಿಗಳನ್ನು ಕರೆಸುವುದು ನಿಮ್ಮ ಜವಾಬ್ದಾರಿಯಾಗಿದೆ. Within half an hour, majority of the ministers should be here.

ಶ್ರೀ ಸಿ.ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಚರ್ಚೆಯನ್ನು ಪ್ರಾರಂಭಿಸಲಿ. ಇಷ್ಟರಲ್ಲೇ ಎಲ್ಲಾ ಮಂತ್ರಿಗಳೂ ಬರುತ್ತಾರೆ. ನಾನು ಕರೆಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬರುವವರೆಗೆ ಸದನವನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ.

ಅಧ್ಯಕ್ಷರು: ಅಡ್ಜರ್ನ್ ಮಾಡುವುದು ಬೇಡ. ಒಬ್ಬರಾದರೂ ಮಾನ್ಯ ಮಂತ್ರಿಗಳು ಇದ್ದಾರಲ್ಲಾ?

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಝುಳಕಿ ಪ್ರಕರಣವನ್ನು ಈಗ ಒಂದರ್ಧ ಅಥವಾ ಒಂದು ಗಂಟೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರಾದ ಮಾನ್ಯ ಕೋಳಿವಾಡ್‌ರವರು ಸದನದಲ್ಲಿದ್ದಾರೆ. ಮಾನ್ಯ ಸದಸ್ಯರು ಚರ್ಚೆಯನ್ನು ಪ್ರಾರಂಭ ಮಾಡಲಿ. ಸ್ವಲ್ಪ ಹೊತ್ತಿನಲ್ಲೇ ಮಂತ್ರಿಗಳನ್ನು ಅವರು ಕರೆಸುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲಿನ ಚರ್ಚೆಗೆ ಬದಲಾಗಿ ಈಗ ಝುಳಕಿ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಮಾತನಾಡೋಣವೆಂದರೆ ಮಾನ್ಯ ಮಂತ್ರಿಗಳು ಇಲ್ಲ. ಆದ್ದರಿಂದ ಬೆಳಿಗ್ಗೆ ತಾವು ಅನುಮತಿ ನೀಡಿದಂತೆ ಈಗ ಝುಳಕಿ ಪ್ರಕರಣದ ಬಗ್ಗೆ ಮಾತನಾಡೋಣ.

**ಅಧ್ಯಕ್ಷರು:** ದಯವಿಟ್ಟು ಅದು ಈಗ ಬೇಡಿ. ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರಾದ ಕೋಳಿವಾಡ್‌ರವರು ಸದನದಲ್ಲಿದ್ದಾರೆ. ಮೊದಲು ಮಾನ್ಯ ಸದಸ್ಯರು ಚರ್ಚೆಯನ್ನು ಪ್ರಾರಂಭ ಮಾಡಲಿ. ಅಷ್ಟರೊಳಗೆ ಮಂತ್ರಿಗಳನ್ನು ಚೀಫ್ ವಿಪ್‌ರವರು ಕರೆಸುತ್ತಾರೆ. ಮಾನ್ಯ ನಾಡಗೌಡರೇ, ದಯವಿಟ್ಟು ಹೋಗಿ ಮಂತ್ರಿಗಳನ್ನು ಕರೆಸಲಿಕ್ಕೆ ಫೋನ್ ಹಚ್ಚಿ.

**ಶ್ರೀ ಡಿ.ವಿ. ಸದಾನಂದಗೌಡ:** ಮಾನ್ಯ ಅಧ್ಯಕ್ಷರೇ, ಈಗ ಬೇಡಿಕೆಗಳ ಮೇಲೆ ಮಾತನಾಡಬೇಕೆಂದಿರುವ ಮಾನ್ಯ ಸಭಾಪತಿಯವರು ಹೇಗಿದ್ದರೂ ಸಹಾ ಬಜೆಟ್ ಅನ್ನು ಹೊಗಳುವವರೇ ಆಗಿದ್ದಾರೆ. ಆದಕಾರಣ ಇದಕ್ಕೆ ಮಂತ್ರಿಗಳ ಅಗತ್ಯ ಇರುವುದಿಲ್ಲ. ಆದ್ದರಿಂದ ಅವರು ಮಾತನಾಡಲಿ, ನಾವು ಕೇಳುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಮಾನ್ಯ ಅಧ್ಯಕ್ಷರೇ, ಝಳಕಿ ಪ್ರಕರಣದ ಬಗ್ಗೆ ಈಗಲೇ ಚರ್ಚೆಗೆ ತೆಗೆದುಕೊಂಡರೆ ಅನುಕೂಲವಾಗುತ್ತದೆ.

**ಅಧ್ಯಕ್ಷರು:** ಅದನ್ನೂ ಚರ್ಚೆಗೆ ತೆಗೆದುಕೊಳ್ಳೋಣ, ಅದನ್ನು ಚರ್ಚೆಗೆ ತೆಗೆದುಕೊಳ್ಳುವುದೇ ಇಲ್ಲ ಎಂದು ನಾನು ಹೇಳುತ್ತಿಲ್ಲ, ಆದರೆ ಈಗ ಬೇಡ. ಸರ್ಕಾರಿ ಕಲಾಪಗಳು ಏಳು ದಿವಸಗಳಿಂದ ಏನೂ ನಡೆದೇ ಇಲ್ಲ. ಅವುಗಳು ಈಗ ನಡೆಯಲಿ.

**ಶ್ರೀ ಶಿವಾನಂದ ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೇ, ಇದೂ ಕೂಡ ಸರ್ಕಾರದ ಕೆಲಸವೇ.

**ಅಧ್ಯಕ್ಷರು:** ಚರ್ಚೆ ಪ್ರಾರಂಭ ಮಾಡಲಿ, ಮಂತ್ರಿಗಳು ಬರುತ್ತಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಮಾನ್ಯ ಅಧ್ಯಕ್ಷರೇ, ಅಲ್ಲಿ ಸತ್ತ ಕುಟುಂಬದವರು ಬಹಳ ಕಷ್ಟದಲ್ಲಿದ್ದಾರೆ. ಆ ವಿಚಾರ ತೆಗೆದುಕೊಂಡರೆ ಒಳ್ಳೆಯದು.

**ಶ್ರೀ ಕಾಗೋಡು ತಿಮ್ಮಪ್ಪ:** ಮಾನ್ಯ ಪಾಟೀಲ್‌ರವರೇ, ತಾವು ಮಾತನಾಡುವ ಮೊದಲು ನಾವು ನಾಲ್ಕು ಜನ ಮಂತ್ರಿಗಳಿದ್ದೆವು. ತಾವು ಮಂತ್ರಿಗಳು ಬಂದಿಲ್ಲವೆಂದು ಮಾತನಾಡುತ್ತಿರುವಾಗಲೇ ನಾವು ಈಗ ಏಳು ಜನರಾಗಿದ್ದೇವೆ.

**ಅಧ್ಯಕ್ಷರು:** ಚೀಫ್ ವಿಪ್‌ರವರು ಮಾನ್ಯ ಮಂತ್ರಿಗಳನ್ನು ಕರೆಸುತ್ತಾರೆ. ಮಾನ್ಯ ಸಭಾಪತಿಯವರೇ, ತಾವು ಮಾತನಾಡಲು ಪ್ರಾರಂಭಿಸಿ.

**ಶ್ರೀ ಯು.ಆರ್.ಸಭಾಪತಿ (ಉಡುಪಿ):** ಮಾನ್ಯ ಅಧ್ಯಕ್ಷರೇ, 2002-03ರ ಮುಂಗಡ ಪತ್ರ ಹಾಗೂ ವಿಷಯ ಸಮಿತಿಗಳ ಮೇಲಿನ ವರದಿಗಳನ್ನು ಅಧ್ಯಯನ ಮಾಡುವಾಗ ಮುಂದಿನ ವರ್ಷಗಳಲ್ಲಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಈ ರಾಜ್ಯದ ಜನತೆಗೆ ಕೊಡಬಹುದು ಎನ್ನುವಂತಹ ಆತ್ಮವಿಮರ್ಶೆಯನ್ನು ನಾವು ಬಹಳಷ್ಟು ಜಾಗರೂಕತೆಯಾಗಿ ಮಾಡಬೇಕಾಗಿದೆ. ಆ ದೃಷ್ಟಿಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಬಹಳ ಮಹತ್ವಪೂರ್ಣವಾದಂತಹ ಒಂದು ಇಲಾಖೆಯಾಗಿರುವುದರಿಂದ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇರತಕ್ಕಂತಹ ಪಂಚಾಯತ್ ರಾಜ್ ವ್ಯವಸ್ಥೆಯನ್ನು ನಾವು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕಾದಂತಹ ಅನಿವಾರ್ಯತೆಯನ್ನು ಕಾಣಬಹುದು ಎನ್ನುವುದು ನನ್ನ ಅನಿಸಿಕೆ. ಈ ಸದನದ ಎಲ್ಲಾ ಸದಸ್ಯರುಗಳೂ

ಕೂಡ ಬಹಳ ಗಂಭೀರವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಳೆದ ಹದಿನೈದು ವರ್ಷಗಳಿಂದ ನಡೆದು ಬಂದಿರತಕ್ಕಂಥ ವ್ಯವಹಾರಗಳು, ಅವ್ಯವಹಾರಗಳು ಎಲ್ಲವನ್ನೂ ಪರಿಶೀಲಿಸಿದಾಗ, ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಬದಲಾವಣೆ ಮಾಡುವ ದಿನ ಇನ್ನು ಹೆಚ್ಚಿಗೆ ದೂರವಿಲ್ಲ ಎನ್ನುವುದು ನನ್ನ ಭಾವನೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ನಾವು ತ್ರೀ ಟಯರ್ ಸಿಸ್ಟಮ್ ಅನ್ನು ಅಳವಡಿಸಿದ್ದೇವೆ. ಸರ್ಕಾರದ ಸುಮಾರು 29 ಸೇವೆಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ಹಸ್ತಾಂತರಿಸಿದೆ, ಇಡೀ ದೇಶದಲ್ಲಿ ಎರಡನೇ ರಾಜ್ಯವಾಗಿ ಈ ಕರ್ನಾಟಕ ಸರ್ಕಾರ ಹೆಸರು ಪಡೆದಿದೆ. 1987ರಲ್ಲಿ ಪ್ರಥಮ ಪಂಚಾಯತ್ ರಾಜ್ ವ್ಯವಸ್ಥೆಯ ಜಿಲ್ಲಾ ಪರಿಷತ್ ಪದ್ಧತಿ ಏನಿತ್ತೋ, ಅದು ಬಂದಾಗ ಆ ಜಿಲ್ಲಾ ಪರಿಷತ್ ವ್ಯವಸ್ಥೆಯಲ್ಲಿ, ಜಿಲ್ಲಾ ಪರಿಷತ್ತಿನ ಸದಸ್ಯನಾಗಿ ಕೂಡ ನಾನು ಆಯ್ಕೆಯಾಗಿ, ಆ ಜಿಲ್ಲಾ ಪರಿಷತ್‌ನ ಯೋಜನಾ ಸಮಿತಿಯ ಅಧ್ಯಕ್ಷನಾಗಿದ್ದುಕೊಂಡು ಕಾರ್ಯನಿರ್ವಹಿಸಿದಂತಹ ಅನುಭವದ ಹಿನ್ನೆಲೆ ನನಗಿದೆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಎಂಬ ತ್ರೀ ಟಯರ್ ಸಿಸ್ಟಮ್ ಅನ್ನು ನಾವು ಅಳವಡಿಸಿಕೊಂಡು ಬಂದಮೇಲೆ ಆಗಿರತಕ್ಕಂಥ ಎಲ್ಲಾ ವಿವರಗಳನ್ನು ನಾವು ತಿಳಿದಾಗ, ಮುಂದಿನ ದಿನಗಳಲ್ಲಿ ನಾವು ಗ್ರಾಮ ಪಂಚಾಯಿತಿಗೆ ನೇರವಾಗಿ ಸಬಲೀಕರಣ ಮಾಡಬೇಕು ಎನ್ನುವುದು ನನ್ನ ಭಾವನೆ. ಬಹುಶ: ಸರ್ವ ಪಕ್ಷದ ಸದಸ್ಯರುಗಳೂ ಇದನ್ನು ಒಪ್ಪಬಹುದು. ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲಾ ಪಂಚಾಯತ್‌ಗಳಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ನಾವು ಗಂಭೀರವಾಗಿ ಪರಿಶೀಲಿಸಿದಾಗ ಈ ಬದಲಾವಣೆ ಅನಿವಾರ್ಯ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಕಳೆದ ಫೆಬ್ರವರಿಯಲ್ಲಿ ಈ ದೇಶದ ಸುಮಾರು 20 ರಾಜ್ಯಗಳ ಸುಮಾರು 52 ಶಾಸಕರುಗಳು ಹೈದರಾಬಾದ್‌ನಲ್ಲಿರುವ IRD ಯಲ್ಲಿ ಸೇರಿದ್ದೆವು. ಅಲ್ಲಿ "Participatory development through distributed de-centralised governance" ಎಂಬ ವಿಷಯದ ಮೇಲೆ ನಾವು ಸುಮಾರು ಒಂದು ವಾರ ಚರ್ಚೆ ನಡೆಸಿದೆವು. ಈ ಸದನದಿಂದ ನಾನು, ಮಾನ್ಯ ಯೋಗೀಶ್ ಭಟ್‌ರವರು, ಮಾನ್ಯ ಕೃಷ್ಣಮೂರ್ತಿಯವರು ಮತ್ತು ಮೇಲ್ಮನೆಯಿಂದ ಮಾನ್ಯ ರಾಮಯ್ಯನವರು, ಹೀಗೆ ಒಟ್ಟು 20 ರಾಜ್ಯಗಳಿಂದ ವಿಧಾನಸಭಾ ಸದಸ್ಯರುಗಳು ಇದರಲ್ಲಿ ಭಾಗವಹಿಸಿದ್ದರು. ಅವರೆಲ್ಲರೂ ಕೂಡ ಈ ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಟೂ ಟಯರ್ ಸಿಸ್ಟಮ್ ಅನ್ನೇ ಅಳವಡಿಸಬೇಕು ಎನ್ನುವಂತಹ ಒಂದು ಮಹತ್ವ ಪೂರ್ಣವಾದಂತಹ ನಿರ್ಣಯ ಅಲ್ಲಿನ ವಿಚಾರ ಸಂಕಿರಣದಲ್ಲಿ ಮೂಡಿ ಬಂದಿತು. ಇದಕ್ಕೆ ಮುಖ್ಯವಾದ ಕಾರಣ ಇವತ್ತು ಕ್ರಿಯಾ ಯೋಜನೆಗಳನ್ನು ನಾವು ತಯಾರಿಸುವಾಗ ಜಿಲ್ಲಾ ಪಂಚಾಯತ್‌ಗೆ ಒಂದು ಕ್ರಿಯಾ ಯೋಜನೆ, ತಾಲ್ಲೂಕು ಪಂಚಾಯತ್‌ಗೆ ಒಂದು ಕ್ರಿಯಾ ಯೋಜನೆ ಮತ್ತು ಗ್ರಾಮ ಪಂಚಾಯತ್‌ಗೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸುತ್ತಿದ್ದೇವೆ. ಆ ಮೂರು ಕ್ರಿಯಾ ಯೋಜನೆಯಲ್ಲಿ ಸುಮಾರು 250ಕ್ಕೂ ಮಿಕ್ಕಿದ ಶಿರೋನಾಮೆಗಳಿವೆ. ಈ ಶಿರೋನಾಮೆಗಳ ಕೆಳಗೆ ಗ್ರಾಮ ಸಭೆಗೆ ಮಹತ್ವವೇ ಇಲ್ಲ. ಗ್ರಾಮ ಸಭೆಗಳಲ್ಲಿ ಅಂಗೀಕರಿಸಿರತಕ್ಕಂಥ ನಿರ್ಣಯಗಳು ಏನಿವೆ, ಅವುಗಳನ್ನು ಗ್ರಾಮ ಪಂಚಾಯತ್‌ಯಲ್ಲಿ ಬದಲಾಯಿಸಿದ ಉದಾರಹಣೆಗಳಿವೆ. ಗ್ರಾಮ ಪಂಚಾಯತ್‌ಯಲ್ಲಿ ತೆಗೆದುಕೊಂಡ ನಿರ್ಣಯಗಳು ಏನಿವೆ, ಅವುಗಳನ್ನು ತಾಲ್ಲೂಕು ಪಂಚಾಯತ್‌ನಲ್ಲಿ ಬದಲಾವಣೆ ಮಾಡಿದಂತಹ ಉದಾಹರಣೆಗಳಿವೆ. ತಾಲ್ಲೂಕು ಪಂಚಾಯತ್‌ನಲ್ಲಿ ತೆಗೆದುಕೊಂಡ ನಿರ್ಣಯಗಳನ್ನು

ಅಂತಿಮವಾಗಿ ಜಿಲ್ಲಾ ಪಂಚಾಯತ್‌ಗಳು ಬದಲಾಯಿಸಿದಂತಹ ಅನೇಕ ಉದಾಹರಣೆಗಳನ್ನು, ನಾವು ಕಂಡಿದ್ದೇವೆ. ಮೂಲಕ: ಗ್ರಾಮ ಸಭೆಯಲ್ಲಿ ಬಂದಿರತಕ್ಕ ಏನು ನಿರ್ಣಯಗಳು ಇವೆ, ಅವುಗಳನ್ನು ಅಂತಿಮವಾಗಿ ಅಳವಡಿಸುವಾಗ ಸಂಪೂರ್ಣವಾಗಿ ಲೋಪ ದೋಷಗಳ ರೂಪದಲ್ಲಿ ಅಳವಡಿಸುವಂತಹ ವ್ಯವಸ್ಥೆ ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಡೆದುಕೊಂಡು ಬಂದಿದ್ದನ್ನು ನಾವು ನೋಡಿಕೊಂಡು ಬಂದಿದ್ದೇವೆ. ಈ " Participatory development through de-centralised goverance" ಎಂದರೆ ಸಹಭಾಗಿತ್ವದಲ್ಲಿ ಅಭಿವೃದ್ಧಿಯನ್ನು ಕಾಣುವುದಾಗಿದೆ. ಅದರಲ್ಲಿ ಗ್ರಾಮಸ್ಥರಿಗೆ ನಾವು ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಗ್ರಾಮ ಸಭೆಗಳನ್ನು ಮಹತ್ವಪೂರ್ಣ ಮಾಡುವಂತಹ ಕಾಯ್ದೆಯನ್ನು ನಾವು ತರಬೇಕಾಗಿದೆ. ಗ್ರಾಮ ಸಭೆಗಳಲ್ಲಿ ತೆಗೆದುಕೊಂಡಂತಹ ನಿರ್ಣಯ ಏನಿದೆಯೋ, ಅದು ಅಂತಿಮವಾಗಿಯೂ ಪುರಸ್ಕರವಾಗಬೇಕಾಗುತ್ತದೆ. ಗ್ರಾಮ ಸಭೆಗಳಲ್ಲಿ ತೆಗೆದುಕೊಂಡಂತಹ ನಿರ್ಣಯದಲ್ಲಿ ಸಮರ್ಥ ಗ್ರಾಮಸ್ಥರು ಮಾತ್ರವಲ್ಲ, ಇತರರೂ ಸೇರಿರುತ್ತಾರೆ. ಗ್ರಾಮ ಸಭೆಗಳಲ್ಲಿ ಅಧಿಕಾರಿಗಳು ಹಾಜರಿರುವುದಿಲ್ಲ ಎಂಬಂತಹ ಅನೇಕ ಪತ್ರಿಕಾ ವರದಿಗಳನ್ನು ನಾವು ನೋಡುತ್ತಿರುತ್ತೇವೆ. ಅಧಿಕಾರಿಗಳ ಜೊತೆಗೆ ಚುನಾಯಿತ ಪ್ರತಿನಿಧಿಗಳಾದ ನಾವೂ ಸಹ ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಿಲ್ಲ. ಜಿಲ್ಲಾ ಪಂಚಾಯತ್ ಸದಸ್ಯರುಗಳೂ ಸಹ ಗ್ರಾಮ ಸಭೆಗಳಲ್ಲಿ ಇರುವುದಿಲ್ಲ. ಶಾಸಕರೂ ಗ್ರಾಮ ಸಭೆಗಳಿಗೆ ಹೋಗುವುದಿಲ್ಲ. ತಾಲ್ಲೂಕು ಪಂಚಾಯತ್ ಸದಸ್ಯರೂ ಸಹ ಹೋಗುವುದಿಲ್ಲ. ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಕಾರ್ಯದರ್ಶಿ, 10 ಜನರನ್ನು ಸೇರಿಸಿ, ಯಾವುದೋ ಒಂದು ಉತ್ತರವನ್ನು ಕೊಡುತ್ತಾ ಹೋಗುತ್ತಾನೆ. ಅಲ್ಲಿ ಏನಾಗುತ್ತಿದೆ? ಸರ್ಕಾರದಿಂದ ಬಿಡುಗಡೆಯಾದಂತಹ ಅನುದಾನಗಳು ಎಷ್ಟು ಪರಿಣಾಮಕಾರಿಯಾಗಿ ಗ್ರಾಮಕ್ಕೆ ತಲುಪಿದೆ ಎನ್ನುವುದನ್ನು ವಿವರಿಸುವ ಜನ ಅಲ್ಲಿ ಇರುವುದಿಲ್ಲ. ಶಾಸಕರು ಜಿಲ್ಲಾಪಂಚಾಯತ್ ಸದಸ್ಯರು ತಾಲ್ಲೂಕು ಪಂಚಾಯತ್ ಸದಸ್ಯರು ಅಧಿಕಾರಿಗಳ ಮೇಲೆ ಗೂಬೆ ಕೂರಿಸಿ ಅಧಿಕಾರಿಗಳು ಬರಲಿಲ್ಲವೆಂದು ಹೇಳುವುದಕ್ಕಿಂತ ನಾವು ಕೂಡ ಅದರಲ್ಲಿ ಪಾರ್ಟಿಸಿಪೇಟ್ ಆದರೆ ಎಷ್ಟು ಮಹತ್ವಪೂರ್ಣ ಆಗಬಹುದೆನ್ನುವ ಮಾತನ್ನು ಹೇಳಯಸುತ್ತೇನೆ. ಇವತ್ತು ಗ್ರಾಮಸಭೆಯಲ್ಲಿ ಶಾಸಕರುಗಳಿಂದ ಸೇರಿ ಎಲ್ಲಾ ಚುನಾಯಿತ ಪ್ರತಿನಿಧಿಗಳು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾದಂತಹ ಅನಿವಾರ್ಯತೆ ಇದೆ. ಇತ್ತೀಚಿನ ದಿನಗಳಲ್ಲಿ ಶಾಸಕರುಗಳು ಗ್ರಾಮ ಸಭೆಗಳಲ್ಲಿ ಭಾಗವಹಿಸುವುದನ್ನು ಕಡಿಮೆ ಮಾಡಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತಾರೆ. ಏಕೆ? ಜಿಲ್ಲಾ ಪಂಚಾಯತ್‌ನಲ್ಲೆ ಮಾಡಿರತಕ್ಕಂಥ ಅವ್ಯವಹಾರಗಳು, ತಾಲ್ಲೂಕು ಪಂಚಾಯತ್‌ನಲ್ಲಿ ಆಗಿರತಕ್ಕಂಥ ಅವ್ಯವಹಾರಗಳು ಗ್ರಾಮಪಂಚಾಯಿತಿಯಲ್ಲಿ ಆದ ಅವ್ಯವಹಾರಗಳನ್ನು ಎಲ್ಲಾ ಶಾಸಕರುಗಳ ತಲೆ ಮೇಲೆ ಹಾಕಿ, ನಾವು ಗ್ರಾಮ ಸಭೆಗೆ ಹೋಗಿ ಅಟೆಂಡ್ ಆಗಿ, ಅವರಿಗೆ ಉತ್ತರ ಕೊಡಬೇಕಾದಂತಹ ಅನಿವಾರ್ಯತೆ ಕಂಡುಬಂದಿದೆ. ಇವತ್ತು ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಏನಾಗಿದೆ? ಜಿಲ್ಲಾಪಂಚಾಯತ್ ಅಧ್ಯಕ್ಷರಿಂದ ಹಿಡಿದು ಸದಸ್ಯರುಗಳಿಂದ ಹಿಡಿದು, ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಂದ ಸದಸ್ಯರವರೆಗೆ ಅವರೇ ಗುತ್ತಿಗೆದಾರರು. ಗ್ರಾಮಪಂಚಾಯತಿ ಅಧ್ಯಕ್ಷರೇ ಗುತ್ತಿಗೆದಾರರು ಆದಂತಹ ಉದಾರಹಣೆಗಳು ಇವೆ. ಮಾನ್ಯ ಕುಮಾರ್ ಬಂಗಾರಪ್ಪನವರು ನನಗೆ ಹೇಳಿದ್ದರು. ಇವತ್ತು, ಚುನಾಯಿತ ಪ್ರತಿನಿಧಿಗಳು ಗುತ್ತಿಗೆದಾರರಾಗಿ ಪರಿವರ್ತನೆಯಾಗುವಾಗ ಎಂಜಿನಿಯರುಗಳನ್ನು ಕರೆಸಿ ನಾವೇ ಅವರ ಹತ್ತಿರ ಬಿಲ್ ಮಾಡಿಸಿ ನಾವು ಒಂದು ರೀತಿಯಾಗಿ

ಅವರಿಂದ ಹಣವನ್ನು ಪಡೆಯುವುದಾದರೆ ಇಂತಹ ವ್ಯವಸ್ಥೆಯಲ್ಲಿ ಆಮೂಲಾಗ್ರವಾದಂತಹ ಬದಲಾವಣೆಯನ್ನು ತರಬೇಕಾದ್ದು ಅನಿವಾರ್ಯ. ಇವತ್ತು ಲೋಕಾಯುಕ್ತದವರು ಏನು ಹಿಡಿಯುತ್ತಾರೆ, ಇದು ಭ್ರಷ್ಟಾಚಾರ ಏಕಾಯಿತು? ಈ ಅವ್ಯವಹಾರಗಳು ಏಕಾಯಿತು ಎನ್ನುವಂತಹ ಆತ್ಮ ವಿಮರ್ಶೆಯನ್ನು ಮಾಡಲೇಬೇಕಾಗುತ್ತದೆ. ಈ ಒಂದು ಗ್ರಾಮಸಭೆಯಲ್ಲಿ ತೆಗೆದುಕೊಂಡ ನಿರ್ಣಯ, ಅಲ್ಲಿಗೆ ಬೇಕಾದಂತಹ ಕ್ರಿಯಾಯೋಜನೆಯನ್ನು ಈ ಗ್ರಾಮ ಸಭೆಯಲ್ಲಿ ಇರತಕ್ಕಂಥ ಜನರೇ ನಮಗೆ ಕ್ರಿಯಾ ಯೋಜನೆ ಕೊಡಬೇಕು. ಆ ಕ್ರಿಯಾಯೋಜನೆಗೇ ನಾವು ಮಹತ್ವ ಕೊಡಬೇಕಾಗುತ್ತದೆ. ಒಂದು ಗ್ರಾಮಸಭೆಗೆ ನಾವು ಅನ್‌ಟೈಡ್ ಫಂಡ್‌ನ್ನು ನೇರವಾಗಿ ಕೊಟ್ಟರೆ ಏನಾಗುತ್ತದೆ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಒಂದು ಪ್ರೊಸೀಡಿಂಗ್ಸ್ ಇದೆ. ದಯಮಾಡಿ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಕುಡಿಯುವ ನೀರಿನ ಕಾಮಗಾರಿ ಪ್ರಾರಂಭಿಸಿದಾಗ ಅದನ್ನು ಸಧ್ಯಕ್ಕೆ ನಿಲ್ಲಿಸಬೇಕೆಂದು ಸದಸ್ಯರು ಕೋರಿದರು. ಈ ಬಗ್ಗೆ ಕಾರ್ಯಪಾಲಕ ಎಂಜಿನಿಯರ್ ಉತ್ತರಿಸುತ್ತಾ, ತಾವು ಸಂಬಂಧಪಟ್ಟ ಜಿಲ್ಲಾಪಂಚಾಯತ್ ಸದಸ್ಯರು ಸೂಚಿಸಿದ ವ್ಯಕ್ತಿಗಳಿಗೇ ಕಾಮಗಾರಿಯನ್ನು ಕೊಟ್ಟು ಆ ಮುಖಾಂತರ ಮಾಡಿಸಲಾಗುತ್ತಿದೆ ಎಂದು ತಿಳಿಸಿದರು. ಇದು ಪರಿಸ್ಥಿತಿ.

ಶ್ರೀ ಯು.ಆರ್. ಸಭಾಪತಿ: ಅದಕ್ಕೆ ಅಲ್ಲಿ ಶಾಸಕರಿದ್ದವರು ಹೇಳಿದರು-ಇದು ಒಂದು ಜಿಲ್ಲಾ ಪಂಚಾಯತ್ ವ್ಯವಸ್ಥೆ ಅಲ್ಲ. ಇದು ಸಾಮೂಹಿಕವಾಗಿ ಎಲ್ಲಾ ಜಿಲ್ಲಾಪಂಚಾಯತ್‌ಗಳಲ್ಲಿ ಇಂತಹ ವ್ಯವಸ್ಥೆ ಈಗ ಬಂದಿದೆ. ಇದನ್ನು ನಾವು ನಿರ್ದಾಕ್ಷಿಣ್ಯವಾಗಿ ಹಿಡಿತದಲ್ಲಿ ಇಡದೇ ಹೋದರೆ ನಾಳೆ ಏನು ಪರಿಸ್ಥಿತಿ ಉದ್ಭವವಾಗಬಹುದು, ಅದಕ್ಕೆ ಯಾರು ಹೊಣೆಗಾರರಾಗಬಹುದು ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ನಾನು ಏಕೆ ಗ್ರಾಮಸಭೆಗೆ ಮಹತ್ವ ಕೊಡಬೇಕೆಂದು ಹೇಳಿದೆ ಎಂದರೆ ಪಾರ್ಟಿಸಿಪೇಟರಿ ಡೆವಲಪ್‌ಮೆಂಟ್, ಜನರ ಸಾಮೂಹಿಕ ಸಹಭಾಗಿತ್ವದೊಡನೆ ನಮ್ಮ ಅಭಿವೃದ್ಧಿ ಕಾರ್ಯ. ಗ್ರಾಮಸಭೆಗಳಿಗೆ ನಾವೆಲ್ಲರೂ ಹೋಗಿ ನಿಮ್ಮ ಗ್ರಾಮಕ್ಕೆ ಎಲ್ಲಿ ರಸ್ತೆಯಾಗಬೇಕು, ಮೋರಿಯಾಗಬೇಕು, ಸೇತುವೆಯಾಗಬೇಕು ಯಾವ್ಯಾವ ಕಾರ್ಯಕ್ರಮಗಳಾಗಬೇಕು ಎಂದು ಅವರ ಹತ್ತಿರ ಕೇಳಿ ಅಲ್ಲಿಯೇ ಕ್ರಿಯಾಯೋಜನೆಯನ್ನು ಮಾಡಿ, ಆ ಕ್ರಿಯಾಯೋಜನೆಗೆ ನಾವು ನೇರವಾಗಿ ಗ್ರಾಮಪಂಚಾಯಿತಿಯ ಹಣವನ್ನು ನೀಡಿದಲ್ಲಿ ಅಲ್ಲಿ ಪರಿಣಾಮಕಾರಿಯಾಗಿ ಅಭಿವೃದ್ಧಿ ತರುವುದಕ್ಕಾಗುತ್ತದೆ.

ಶ್ರೀ ಕೆ.ಷಡಕ್ಷರಿ: ಹಿಂದೆ ಗ್ರಾಮ ಪಂಚಾಯತಿಗಳಿಗೆ ಅನುದಾನ ಕಡಿಮೆ ಕೊಡುತ್ತಿದ್ದರು. ಈಗ ಹತ್ತಿಪ್ಪತ್ತು ಸಾವಿರ ರೂಪಾಯಿಗಳನ್ನು ಒಬ್ಬೊಬ್ಬರು ಸದಸ್ಯರು ಭಾಗ ಮಾಡಿಕೊಂಡು ಅಲ್ಲಿ ಇಲ್ಲಿ ಕೆಲಸ ಮಾಡಿಸುತ್ತೇವೆ ಎಂದು ಹೇಳುತ್ತಿದ್ದರು. ಇತ್ತೀಚೆಗೆ ನಾಲ್ಕು ಲಕ್ಷ ಜನಸಂಖ್ಯೆ ಆಧಾರದ ಮೇಲೆ ಕೊಡುತ್ತಿದ್ದಾರೆ. ಈಗ ಬಹಳ ಚೆನ್ನಾಗಿ ಎಲ್ಲಾ ಭಾಗ ಮಾಡಿಕೊಂಡು ಯಾವ ಅಭಿವೃದ್ಧಿಕಾರ್ಯವೂ ಸರಿಯಾಗಿ ಆಗುತ್ತಿಲ್ಲ. ಭಾಗ ಮಾತ್ರ ಕ್ಲೀನಾಗಿ ಆಗುತ್ತಿದೆ.

ಅಧ್ಯಕ್ಷರು: ಒಬ್ಬೊಬ್ಬರಿಗೂ ನೀವು ಯೀಲ್ಡ್ ಆಗುವುದರಿಂದ ಸಂಜೆಯವರೆಗೂ ನಿಮ್ಮದೇ ಭಾಷಣವಾಗುತ್ತದೆ. ಯಾರಿಗೂ ಈಲ್ಡ್ ಆಗಬೇಡಿ.

**ಶ್ರೀ ಅಮರೇಗೌಡ ಬಯ್ಯಾಪುರ್ ಲಿಂಗನಗೌಡ:** ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಷಯವಾದ್ದರಿಂದ ಒಬ್ಬರ ವಿಚಾರ ಒಬ್ಬರಿಗೆ ವಿನಿಮಯವಾಗುವುದರಿಂದ ನಮ್ಮ ಆಡಳಿತದ ವ್ಯವಸ್ಥೆ ಮತ್ತು ಅಧಿಕಾರದ ವಿಕೇಂದ್ರೀಕರಣ ಯಾವ ರೀತಿ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ದಯವಿಟ್ಟು ಅವಕಾಶ ಕೊಡಿ.

**ಅಧ್ಯಕ್ಷರು:** ನೀವುಗಳು ಮಾತನಾಡುವಂತಹ ಸಂದರ್ಭದಲ್ಲಿ ಸಲಹೆ ಕೊಡಿ. ಆದರೆ ಅವರು, ಮಾತನಾಡುವಾಗ ಮಧ್ಯದಲ್ಲಿ ಇಂಟರ್‌ಪ್ರಿಟೇಷನ್, ಕಾನ್‌ವರ್ಸೇಷನ್ ಡಯಲಾಗ್ ಬೇಕಾಗಿಲ್ಲ.

**ಶ್ರೀ ಯು.ಆರ್. ಸಭಾಪತಿ:** ಜನರ ಸಾಮೂಹಿಕ ಸಹಭಾಗಿತ್ವದಲ್ಲಿ ನಡೆಸಿದಂತಹ ಕ್ರಿಯಾಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಕೂಡ ಅಲ್ಲಿನ ಗ್ರಾಮದ ಜನರು ಬಯಸಿದಲ್ಲಿ ಕಾಮಗಾರಿಯನ್ನು ತಾವೇ ನಿಂತು ಮಾಡುತ್ತೇವೆಂದು ಒಪ್ಪಿಕೊಂಡು ಮಾಡುವುದಾದರೆ ನಾವು ಆ ಗ್ರಾಮಸ್ಥರಿಗೆ ಕಾಮಗಾರಿಗಳನ್ನು ಮಾಡುವುದಕ್ಕೆ ಬಿಟ್ಟುಕೊಡುವುದು ಒಳ್ಳೆಯದು. ಇಲ್ಲವೆಂದರೆ ಈಗ ಆಗಿರತಕ್ಕಂಥ ಅವ್ಯವಹಾರಗಳಿಗೆ ಅವ್ಯವಸ್ಥೆಗಳಿಗೆ ಬೇರೆ ಬೇರೆ ಚುನಾಯಿತ ಪ್ರತಿನಿಧಿಗಳು ಬಲಿಯಾಗಬೇಕಾದಂತಹ ಅನಿವಾರ್ಯತೆ ಇದೆ. ಇದರಿಂದ ಆಡಳಿತದಲ್ಲಿ ಪಾರದರ್ಶಕತೆಯನ್ನು ತಂದ ಹಾಗೆ ಆಯಿತು. ಗ್ರಾಮಸ್ಥರಿಗೆ ಸಹಭಾಗಿತ್ವದಲ್ಲಿ ಅಭಿವೃದ್ಧಿ ಕಾರ್ಯವನ್ನು ಸಾಧಿಸಿದ ಹಾಗೆ ಆಯಿತು. ಅನುದಾನ ನೇರವಾಗಿ ಗ್ರಾಮಕ್ಕೆ ತಲುಪಿದ ಹಾಗೆ ಆಯಿತು. ಕಾಮಗಾರಿಗಳಲ್ಲಿ ಆಗತಕ್ಕಂಥ ಅವ್ಯವಹಾರಗಳನ್ನು ನಿಗ್ರಹಿಸಿದ ಹಾಗೆ ಆಯಿತು. ಅದರಿಂದಾಗಿ ಮೂರು ಮೂರು ಕ್ರಿಯಾ ಯೋಜನೆ ಬೇಡ. ಗ್ರಾಮಸಭೆಯಲ್ಲಿ ಮಾಡಿರತಕ್ಕಂಥ ಕ್ರಿಯಾ ಯೋಜನೆ ಒಂದೆ ಅಂತಿಮವಾಗಿ ಮುಂದೆ ಬರಲಿ. ಈಗ ಇರತಕ್ಕಂಥ ಐದು ಲಕ್ಷ ರೂಪಾಯಿಗೆ ನಾವೇನು ಗುತ್ತಿಗೆ ಕೊಡುತ್ತಿದ್ದೇವೆ, ಅದರ ಮೇಲೆ ಇದ್ದರೆ ಟೆಂಡರ್ ಕರೆಯಬೇಕೆಂದು ಮಾಡಿದ್ದೇವೆ. ಅದರ ಒಂದು ಪ್ರಯೋಗವನ್ನು ನಾವು ಮಾಡಿ ನೋಡಿಯಾಯಿತು. ಅದರಿಂದ ಆದ ಲಾಭ ಏನೂ ಇಲ್ಲ. ಎಲ್ಲಾ ಇಲಾಖೆವಾರು ಮಾಡಿ ಯಾರ್‍ಯಾರೋ ಹಣವನ್ನು ತಿಂದು ಹೋಗಿದ್ದೇ ವಿನ: ಅದರಲ್ಲಿ ಏನೂ ಸಾಧನೆ ಮಾಡುವುದಾಗಿಲ್ಲ. ಆದುದರಿಂದ ಯಾವುದೇ ಗ್ರಾಮ ಪಂಚಾಯತ್ ಕಾಮಗಾರಿಗಳಿರಲಿ ಆ ಕಾಮಗಾರಿಗಳನ್ನು ಕನಿಷ್ಠ 50 ಸಾವಿರಕ್ಕಿಂತ ಮೇಲ್ಪಟ್ಟಂತಹವುಗಳನ್ನು ಟೆಂಡರ್ ಮೂಲಕ ಮಾಡಿಸಬೇಕೆಂಬುದು ನನ್ನ ವಾದ. ಇದರಿಂದಾಗಿ ಸ್ವಲ್ಪಮಟ್ಟಿಗಾದರೂ ಪಾರದರ್ಶಕತೆ ತರುವುದಕ್ಕೆ ತರುವುದಕ್ಕೆ ಸಾಧ್ಯವಾದೀತು. ಐದು ಲಕ್ಷ ರೂಪಾಯಿವರೆಗೆ ಯಾವುದೇ ಇಲಾಖೆ ಗುತ್ತಿಗೆ ಕೊಡದೆ, ಕೊಟ್ಟರೆ ಏನಾಗುತ್ತದೆ ಎಂದು ನಾವು ಒಂದು ಪ್ರಯೋಗವನ್ನು ಮಾಡಿ ನೋಡಿದ್ದೇವೆ. ಒಂದು ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಎಲ್ಲಕ್ಕಿಂತಲೂ 250 ಮಿಕ್ಕಿದ ಶಿರೋನಾಮೆಗಳು.

**ಶ್ರೀ ಕಾಗೋಡು ತಿಮ್ಮಪ್ಪ:** ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು ಹೇಳಿದವರಿಗೆ ಗುತ್ತಿಗೆ ಕೊಡಬೇಕೆಂದು ನಿರ್ಣಯ ಆಗಿಲ್ಲ.

**ಶ್ರೀ ಎಸ್. ಕುಮಾರ್ ಬಂಗಾರಪ್ಪ:** ರೆಸಲ್ಯೂಷನ್ ಅಲ್ಲ, ಒಂದು ಲೆಟರ್ ಆಗಿತ್ತು ಎಂದು ಹೇಳಿದೆ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ: ಇದು ರೆಕಾರ್ಡ್‌ನಲ್ಲಿ ಹೋಗಬಾರದು ಎನ್ನುವ ಕಾರಣಕ್ಕೆ ನಾನು ಹೇಳಿದ್ದು.

ಶ್ರೀ ಅಪ್ಪಾಜಿ.ಎಸ್. ನಾಡಗೌಡ: ರೆಸಲ್ಯೂಷನ್ ಆ ತರಹ ಮಾಡುವುದಕ್ಕೆ ಬರುವುದಿಲ್ಲ. ಅದು, ತಪ್ಪು.

ಅಧ್ಯಕ್ಷರು: ಅದನ್ನು ರೆಕಾರ್ಡ್‌ನಿಂದ ತೆಗೆದು ಹಾಕಿ. ಅವರು ಹೇಳಿಲ್ಲವೆಂದು ಹೇಳಿದ್ದಾರೆ. ರೆಕಾರ್ಡ್‌ನಿಂದ ತೆಗೆದುಬಿಡಿ.

ಶ್ರೀ ಯು.ಆರ್. ಸಭಾಪತಿ: ಆದರಿಂದಾಗಿ 250ಕ್ಕೂ ಹೆಚ್ಚು ಶಿರೋನಾಮೆಗಳು, ಈ ವ್ಯವಸ್ಥೆ ಏಕಾಗಿ? ಒಂದು ಪರಿಸರ ಎನ್ನುವಂತಹ ಹೆಡ್‌ಲೈನ್‌ನಲ್ಲಿ ಮುಂಗಡ ಪತ್ರದಲ್ಲಿ ಹತ್ತು ಸಾವಿರ ರೂ ಅದಕ್ಕೆ ಕಾದಿರಿಸಿದ್ದಾರೆ. ಆ ಹತ್ತು ಸಾವಿರ ರೂ ಖರ್ಚು ಮಾಡುವುದಕ್ಕೆ 20 ಸಾವಿರ ಪುನಃ ಖರ್ಚು. 250 ಶಿರೋನಾಮೆಗಳು ಎಂದು ಮಾಡಿಬಿಟ್ಟು ಜಿಲ್ಲಾಪಂಚಾಯತ್ ಮುಖ್ಯ ನಿರ್ವಹಣಾಧಿಕಾರಿ ಅದನ್ನು ಇನ್ಸ್‌ಪೆಕ್ಷನ್ ಮಾಡಿ ಹೋಗುವಾಗ ಒಂದು ರಸ್ತೆ ಎಂದು ತೋರಿಸಿದ. ತಾಲ್ಲೂಕು ಪಂಚಾಯತ್ ಮುಖ್ಯ ನಿರ್ವಹಣಾಧಿಕಾರಿ ಇನ್ನೊಂದು ಹೆಡ್‌ನಲ್ಲಿ ಮಾಡಿದ ಕಾಮಗಾರಿಯನ್ನು ತೋರಿಸಿದ. ಮತ್ತೊಂದರಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಮಾಡಿದಂತಹ ಕಾಮಗಾರಿಯನ್ನು ತೋರಿಸಿದ. ಆಗ ಎಲ್ಲಾ ರೀತಿಯಲ್ಲೂ ಕನ್‌ಫ್ಯೂಷನ್. ಇದು ಯಾವ ಹೆಡ್‌ನಲ್ಲಿ, ಯಾವುದಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ನಮಗೆ ಕನ್‌ಫ್ಯೂಷನ್ ಆಯಿತು. ಈ 250 ಶಿರೋನಾಮೆಗಳ ಅವಶ್ಯಕತೆ ಇದೆಯೆ? ಇದು ಏಕೆ ಮಾಡಲಾಯಿತು? ಈ 250 ಶಿರೋನಾಮೆಗಳನ್ನು ರದ್ದುಪಡಿಸಿ. ಆದುದರಿಂದ 10-15 ಶಿರೋನಾಮೆಗಳು ಮಾಡಿಬಿಟ್ಟು ನೇರವಾಗಿ ಅನುದಾನವನ್ನು ಗ್ರಾಮಪಂಚಾಯಿತಿಗೆ ಬಿಡುಗಡೆ ಮಾಡಿದರೆ ಅದು ಪರಿಣಾಮಕಾರಿಯಾಗಿ ಮುಂದಕ್ಕೆ ಹೋಗುವುದಕ್ಕೆ ಅನುಕೂಲವಾಗುತ್ತದೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಸರ್ಕಾರದ ಕೆಲವು ನಿಯಮಾವಳಿಗಳ ವಿರುದ್ಧ ಕೆಲವು ಜಿಲ್ಲಾ ಪಂಚಾಯತ್‌ಗಳು ನಿರ್ಣಯ ಮಾಡಿದಂತಹ ಉದಾಹರಣೆಗಳು ಇವೆ. ನಮ್ಮ ಸರ್ಕಾರದಿಂದ ಈ ಬಗ್ಗೆ ಸ್ಪಷ್ಟವಾದಂತಹ ಒಂದು ನಿರ್ದೇಶನ ಮುಖ್ಯ ನಿರ್ವಹಣಾಧಿಕಾರಿಗಳಿಗೆ ಪ್ರತಿಯೊಬ್ಬರಿಗೂ ನಾವು ಹೇಳಬೇಕಾಗಿದೆ; ಕಳುಹಿಸಿಕೊಡಬೇಕಾಗುತ್ತದೆ. ಸರ್ಕಾರದ ನಿರ್ಧಾರವಾಗಿದೆ, ಇದರ ವಿರುದ್ಧ ಇವರು ನಿರ್ಣಯ ಮಾಡಿ ನಮಗೆ ಕಳುಹಿಸಿಕೊಡುವುದು ಇದು ಎಲ್ಲರೂ ಒಪ್ಪುವಂತಹ ಮಾತು. ಎಷ್ಟೋ ನಿರ್ಣಯಗಳು ಇಲ್ಲಿ ಬಂದಿರಬಹುದು. ಆದರೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಅಲ್ಲಿ ಕಾರ್ಯ ನಿರ್ವಹಿಸುವುದು ಏನು ಮಾಡುತ್ತಾರೆ? ಇದು ನಿರ್ಣಯ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುವಂತಹ ಒಂದು ಗೈಡನ್ಸ್ ಕೊಡುವಲ್ಲಿ ಅವರು ವಿಫಲರಾಗಿದ್ದರಿಂದ ಇಂತಹ ನಿರ್ಣಯಗಳಿಗೆ ಅವಕಾಶವಾಗಿದೆ. ಈ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಯಾರು ಇರುತ್ತಾರೆ, ಅವರಿಗೆ ಒಂದು ಸ್ಪಷ್ಟವಾದಂತಹ ಕಲ್ಪನೆ ಕಾಯಿದೆಯಲ್ಲಿ ಯಾವುದನ್ನು ಜಿಲ್ಲಾ ಪಂಚಾಯತ್ ನಿರ್ಣಯಿಸಬಹುದು, ಯಾವುದನ್ನು ಮಾಡಬಾರದು, ಎನ್ನುವಂತಹ ಕಲ್ಪನೆ ಇದೆ, ಇದು ಇದ್ದೂ ಕೂಡ ಚುನಾಯಿತ ಪ್ರತಿನಿಧಿಗಳು ಮಿಸ್‌ಗೈಡ್ ಮಾಡಿದರೆಂದು ಇವರು ನಿರ್ಣಯ ಮಾಡುವುದಕ್ಕೆ ಒಪ್ಪಿದರೆ, ಇದರಿಂದ ಏನನ್ನು ಸಾಧಿಸಿದ ಹಾಗೆ ಆಗುತ್ತದೆ? ಆದುದರಿಂದ ಜಿಲ್ಲಾ ಪಂಚಾಯತ್,

ಗ್ರಾಮ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್, ವ್ಯವಸ್ಥೆ ಏನಿದೆ, ಇದರಲ್ಲಿ ಆಮೂಲಾಗ್ರ ಬದಲಾವಣೆಯನ್ನು ಮಾಡದಿದ್ದರೆ ಮುಂದಿನ ದಿವಸಗಳಲ್ಲಿ ಬಹಳಷ್ಟು ಕಷ್ಟವಾಗುತ್ತದೆ. ಹಿಂದೆ ಜಿಲ್ಲಾ ಪರಿಷತ್ ವ್ಯವಸ್ಥೆ ಇತ್ತು, ಆಗ ಟೂ ಟಯರ್ ಸಿಸ್ಟಂನಲ್ಲಿ ಇದ್ದೆವು, ಆಗ ಗ್ರಾಮ ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ಸದಸ್ಯರುಗಳು, ಮತ್ತೆ ಶಾಸಕರುಗಳನ್ನು ಒಳಗೊಂಡಂತಹ ಒಂದು ತಾಲ್ಲೂಕು ಪಂಚಾಯತ್ ಇತ್ತು, ಇದು ಮೇಲ್ವಿಚಾರಣೆಗೆ ಮಾತ್ರ ಇರಲಿ; ನಾವು ಗ್ರಾಮ ಪಂಚಾಯತ್‌ಗೆ ಸಾಕಷ್ಟು ಅಧಿಕಾರಗಳನ್ನು ಹಸ್ತಾಂತರ ಮಾಡಿದ ಮೇಲೆ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಇನ್ನೊಂದು ಕ್ರಿಯಾ ಯೋಜನೆ ಮಾಡಿ..

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾಪತಿಯವರು ಸ್ಪಷ್ಟವಾದಂತಹ ಅಭಿಪ್ರಾಯವನ್ನು ಕೊಡಬೇಕು, ಇಲ್ಲಿ ಟೂ ಟಯರ್ ಸಿಸ್ಟಂ ಬೇಕೆ, ಥ್ರೀ ಟಯರ್ ಸಿಸ್ಟಂ ಬೇಕೆ? ಎಂಬುದನ್ನು ಹೇಳಬೇಕು. ನಾವು ಥ್ರೀ ಟಯರ್ ಸಿಸ್ಟಂ ಅನ್ನು ಅಕ್ಸೆಪ್ಟ್ ಮಾಡಿದ್ದೆವು, ಮಾನ್ಯ ಕಾಗೋಡು ತಿಮ್ಮಪ್ಪನವರೇ, ಮಾನ್ಯ ಸಭಾಪತಿಯವರು ನಮ್ಮ ವಿರೋಧ ಪಕ್ಷದಲ್ಲಿ ಇರುವ ಹಾಗೆ ಆಡಳಿತ ಪಕ್ಷದಲ್ಲಿದ್ದುಕೊಂಡು ಮಾತನಾಡುತ್ತಿದ್ದಾರೆ, ಅವರು ಚೆನ್ನಾಗಿ ಮಾತನಾಡಲಿ, ನಮ್ಮದು ಏನೂ ಅಡ್ಡಿ ಇಲ್ಲ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಬಚ್ಚೇಗೌಡರೇ, ತಾವು ದಿಕ್ಕು ತಪ್ಪಿಸಬೇಡಿ, ನಾನು ಸರಿಯಾಗಿ ಇದ್ದೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಸ್ಪಷ್ಟವಾಗಿ ನನ್ನ ಅನಿಸಿಕೆಗಳನ್ನು ಹೇಳುತ್ತಿದ್ದೇನೆ, ಇಲ್ಲಿ ನಾನು ವಿರೋಧ ಪಕ್ಷದ ಸದಸ್ಯನಾಗಿ ಹೇಳುವುದಿಲ್ಲ. ಇವತ್ತಿನ ಜಿಲ್ಲಾ ಪಂಚಾಯತ್‌ನ ವ್ಯವಸ್ಥೆಯಲ್ಲಿ ಆಮೂಲಾಗ್ರವಾದಂತಹ ಬದಲಾವಣೆಯನ್ನು ಮಾಡಬೇಕೆಂದು ನಾನು ಸಲಹೆಗಳನ್ನು ಕೊಡುತ್ತಿದ್ದೇನೆ. ನಮಗೆ ಟೂ ಟಯರ್ ಸಿಸ್ಟಂ ಬೇಕು, ಥ್ರೀ ಟಯರ್ ಸಿಸ್ಟಂ ಬೇಡವೆಂದು ಮೊದಲೇ ಹೇಳಿದ್ದೇನೆ. ನೀವು ಅದನ್ನು ಕೇಳಿಸಿ ಕೊಂಡಿಲ್ಲ, ನೀವು ಇಲ್ಲಿ ರಾಜಕೀಯವನ್ನು ಮಾತನಾಡುತ್ತಾ ಇರುತ್ತೀರಿ. ಈ ಎಲ್ಲಾ ಕಾರಣಗಳಿಂದ ಆಡಳಿತದಲ್ಲಿ ಪಾರದರ್ಶಕತೆಯನ್ನು ನಾವು ತರುವಾಗಲೇ ಇನ್ನು ಒಂದು ಮುಖ್ಯವಾದಂತಹ ಕೆಲಸ ಮಾಡಬೇಕಾಗಿದೆ. ನಮ್ಮ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯದರ್ಶಿಗಳು ಕೆಲವು ಕಡೆಗಳಲ್ಲಿ ಇಲ್ಲ, ಒಬ್ಬೊಬ್ಬ ಕಾರ್ಯದರ್ಶಿಗಳೇ 3-4 ಕಡೆಗಳಲ್ಲಿ ಪಂಚಾಯತ್‌ನ ಕಾರ್ಯದರ್ಶಿಗಳಾಗಿ ಕೆಲಸ ಮಾಡುವುದಾದರೆ, ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಅದನ್ನೂ ಕೂಡ ಪ್ರಬಲೀಕರಣ ಮಾಡಬೇಕಾಗುತ್ತದೆ. ಇವತ್ತು ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಗಳಿಗೆ, ಇದರ ಬಗ್ಗೆ ನಾನು ಒಂದು ಪ್ರಶ್ನೆಯನ್ನು ರಾಜ್ಯದ ಗ್ರಾಮ ಪಂಚಾಯತ್‌ನಲ್ಲಿ, ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇರುವಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಅದಕ್ಕೆ ಜಿಲ್ಲಾವಾರು ವಿವರಗಳ ಪತ್ರವನ್ನು ನನಗೆ ಕಳುಹಿಸಿದ್ದಾರೆ. ಅದರಲ್ಲಿ ಪ್ರಸ್ತುತ ಖಾಲಿ ಹುದ್ದೆಗಳು ಗ್ರೇಡ್-2 ನಾವು 126 ಇವೆಯೆಂದು ತಿಳಿಸಿದ್ದಾರೆ. ಈಗ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆಗೆ ಬೇಕಾಗಿರುವಂಥಾದ್ದು ದಿನಗೂಲಿ ನೌಕರರಿಂದ ಭರ್ತಿ ಮಾಡುವಂಥಾದ್ದಕ್ಕೆ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನದ ಮಾಡಲಾಗಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಸರ್ಕಾರಕ್ಕೆ ನನ್ನದೊಂದು ಸಲಹೆ ಏನೆಂದರೆ, ಈಗಾಗಲೇ ಸುಮಾರು 15-20 ವರ್ಷಗಳಿಂದಲೂ ಆಯಾ ಗ್ರಾಮ ಪಂಚಾಯತ್‌ನಲ್ಲಿ ನೌಕರರು ದಿನಗೂಲಿಯಲ್ಲಿ ಕೆಲಸ

ಮಾಡುತ್ತಿದ್ದಾರೆ. ಅವರು 1,200 ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಾರೆ, ಇದನ್ನು ದಿನಗೂಲಿಯಾಗಿ ಮ್ಯಾಗ್ಜಿಮಮ್ ಕೊಡುವಂಥಾದ್ದು ಇದೆ, ಇದರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಆಗಿ 10 ವರ್ಷಗಳ ಅನುಭವವಿರುವರನ್ನೇ, ಅಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡುವಂಥಾದ್ದಕ್ಕೆ ಅವಕಾಶವಿದೆ. ಈ ರೀತಿ ಇರುವಂತಹ ಉದ್ದೇಶಗಳ ವಿಫಲತೆಗಾಗಿ, ಇದರಲ್ಲಿ ಏನಾದರೂ ಭ್ರಷ್ಟಾಚಾರ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಬೇರೆ ಬೇರೆ ಇಲಾಖೆಗಳಿಂದ ಕಾರ್ಯದರ್ಶಿಗಳ ಹುದ್ದೆಗೆ ಡೆಪ್ಯೂಟೇಶನ್ ರೂಪದಲ್ಲಿ ಕೆಲವರು ಬಂದಿದ್ದಾರೆ. ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರಾಗಿ ಇರುವವರು ಗ್ರಾಮ ಪಂಚಾಯತ್‌ಗೆ ಕಾರ್ಯದರ್ಶಿಯಾಗಿ ಬರುತ್ತಾರೆಂದರೆ, ಇಲ್ಲಿ ಅವರ ಉದ್ದೇಶವೇನು? ಇದನ್ನು ನಾವು ಕಟ್ಟುನಿಟ್ಟಾಗಿ ಮಾಡಬೇಕಾಗುತ್ತದೆ, ಇದಕ್ಕಾಗಿ ನಾನು ತಮ್ಮ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಒತ್ತಾಯ ಮಾಡುವುದೇನೆಂದರೆ, ಈಗ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳನ್ನು ನೇಮಕ ಮಾಡುವುದರ ಬಗ್ಗೆ, ಒಂದು ಗ್ರಾಮ ಪಂಚಾಯತ್‌ಗೆ ಒಬ್ಬ ಕಾರ್ಯದರ್ಶಿ ಇರಲೇಬೇಕೆಂಬುದನ್ನು ಕಡ್ಡಾಯ ಮಾಡಿ, ಇದರಿಂದ ಆಡಳಿತ ಕೂಡ ಸುಲಲಿತವಾಗುತ್ತದೆಂದು ಹೇಳುತ್ತೇನೆ, ಮತ್ತೆ ಇದರಿಂದ ಭ್ರಷ್ಟಾಚಾರವನ್ನು ನಿಗ್ರಹ ಮಾಡಲು ಸಾಧ್ಯವಾಗುತ್ತದೆ. ಹಿಂದೆ ಈ ವ್ಯವಸ್ಥೆ ಬರುವಂತಹ ಸಂದರ್ಭದಲ್ಲಿ ಕೆಲವರು ಇದು ಅಧಿಕಾರದ ವಿಕೇಂದ್ರೀಕರಣವಲ್ಲ, ಭ್ರಷ್ಟಾಚಾರದ ವಿಕೇಂದ್ರೀಕರಣವೆಂದು, ಅವರ ಅನಿಸಿಕೆಗಳನ್ನು ಹೇಳಿದ್ದರು. ನಾವು ಇದನ್ನು ವಿರೋಧ ಮಾಡುವುದಕ್ಕಾಗಿ ಇವರು ವಿರೋಧ ಮಾಡುತ್ತಿದ್ದಾರೆಂದು ಅಂದುಕೊಂಡಿದ್ದೆವು. ಆದರೆ ಇವತ್ತು ಇದು ಸ್ಪಷ್ಟವಾಗಿ ಕಾಣುತ್ತಿದೆ, ಇಲ್ಲಿ ಅಧಿಕಾರದ ವಿಕೇಂದ್ರೀಕರಣವಾಗುವ ಬದಲು, ಭ್ರಷ್ಟಾಚಾರದ ವಿಕೇಂದ್ರೀಕರಣವಾಗುತ್ತಾ ಹೋಗಿದೆ, ಆದುದರಿಂದ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಗಳನ್ನು ಸರಿಯಾಗಿ ನೇಮಕ ಮಾಡದೇ ಹೋದರೆ, ಇಲ್ಲಿ ಮೂಲ ಉದ್ದೇಶವೇನು ಆಗುತ್ತದೆ? ಅವರಿಗೆ ನಾವು ಉತ್ತಮವಾದಂತಹ ತರಬೇತಿಯನ್ನು ಕೊಡಬೇಕಾಗುತ್ತದೆ. ಗ್ರಾಮ ಪಂಚಾಯತ್‌ನ ಸದಸ್ಯರಿಗೆ ಒಂದು ನಿರ್ದಿಷ್ಟವಾದಂತಹ ತರಬೇತಿಯನ್ನು ಕೊಟ್ಟು, ಕ್ರಿಯಾ ಯೋಜನೆಗಳನ್ನು ತರುವಂಥಾದ್ದು ಮತ್ತು ಕಾಮಗಾರಿಗಳನ್ನು ಮಾಡುವಲ್ಲಿ ಯಾವ ರೀತಿಯಾಗಿ ಪಾರದರ್ಶಕತೆಯನ್ನು ತರಬಹುದು, ಮತ್ತೆ ಜನರ ಸಹಭಾಗಿತ್ವದಿಂದ ಯಾವ ರೀತಿಯಾಗಿ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಬಹುದು, ಇವೆಲ್ಲವನ್ನೂ ತಿಳಿಸಿದರೆ, ನಾವು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇನ್ನು ಮೀಸಲಾತಿಯ ಬಗ್ಗೆ ನನ್ನ ಅನಿಸಿಕೆಯನ್ನು ಹೇಳುತ್ತೇನೆ, ಇದನ್ನು ಬೇರೆಯವರು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ನಾವು ಈ ಮೀಸಲಾತಿಗಳನ್ನು ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ವರ್ಗದವರಿಗೆ, ಪರಿಶಿಷ್ಟ ಪಂಗಡಗಳಿಗೆ, ಮಹಿಳೆಯರಿಗೆ, ಎಂದು ಯಾವ ಉದ್ದೇಶಕ್ಕಾಗಿ ಮಾಡಿದೆವು? ಪ್ರತಿಯೊಂದು ಸಮಾಜದ ವರ್ಗದವರಿಗೂ ನಾಯಕತ್ವವನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ಈ ಮೀಸಲಾತಿಯನ್ನು ಮಾಡಿದ್ದೇವೆ. ಆದರೆ ಇದು ಇವತ್ತು ಏನಾಗಿದೆ? ಒಂದು ಮೀಸಲಾತಿಗೆ ಸಂಬಂಧಪಟ್ಟಂತೆ ಒಂದು ಕಡೆ ಒಬ್ಬ ಪ್ರತಿನಿಧಿ ಚುನಾಯಿತನಾಗಿ ಬರುತ್ತಾನೆ, ಇದು ಗ್ರಾಮ ಪಂಚಾಯತ್‌ನಲ್ಲಿ ಬರಬಹುದು, ತಾಲ್ಲೂಕು ಪಂಚಾಯತ್‌ನಲ್ಲಿ ಜಿಲ್ಲಾ ಪಂಚಾಯತ್‌ನಲ್ಲಿ ಬರಬಹುದು, ಇವರು ಐದು ವರ್ಷಗಳ ತರಬೇತಿಯಾಗಿ ಮತ್ತೆ ಚುನಾವಣೆ ಬರುವಾಗ ಇದ್ದ ಮೀಸಲಾತಿಯನ್ನು ರದ್ದು ಮಾಡಿ, ಹೊಸ ಮೀಸಲಾತಿಯನ್ನು ತರುವಾಗ,

ಆ ನಾಯಕತ್ವವನ್ನು ಮೂಲೆ ಗುಂಪು ಮಾಡಿ ಹೊಸ ನಾಯಕತ್ವವನ್ನು ಕಲ್ಪಿಸುವುದಕ್ಕೆ ಹೋಗುತ್ತೇವೆ. ಈ ರೀತಿಯಾದಾಗ ನಮ್ಮ ಮೀಸಲಾತಿಯ ಮೂಲ ಉದ್ದೇಶವೇ ವಿಫಲವಾದ ಹಾಗೆ ಆಗುವುದಿಲ್ಲವೇ? ಅದಕ್ಕಾಗಿ ನನ್ನ ಒಂದು ಸಲಹೆ ಏನೆಂದರೆ, ಇಲ್ಲಿ ನಾವು ಐದು ವರ್ಷಗಳ ಏನು ಮೀಸಲಾತಿಯನ್ನು ಇಟ್ಟಿದ್ದೇವೆ, ಈ ಒಂದು ಸಂಪ್ರದಾಯವನ್ನು ಬದಲಾವಣೆ ಮಾಡಿ, ಒಂದು ವರ್ಗದವರಿಗೆ ಇಟ್ಟಿರುವಂತಹ ಮೀಸಲಾತಿ ಏನಿದೆ, ಇದನ್ನು ಮುಂದಿನ ಮೂರು ಟರ್ಮ್‌ನವರೆಗೆ ಅಂದರೆ 15 ವರ್ಷಗಳು ಇರುವವರೇ ಕಂಟಿನ್ಯೂ ಆಗಲಿ, ಇಲ್ಲಿ ಅವರು ಒಳ್ಳೆಯ ಕೆಲಸಗಳನ್ನು ಮಾಡಿದರೆ, ಜನರು ಮತ್ತೆ ಅವರನ್ನೇ ಮರು ಆಯ್ಕೆ ಮಾಡುತ್ತಾರೆ, ಇಲ್ಲದಿದ್ದರೆ ಬೇರೆಯವರನ್ನು ಆಯ್ಕೆ ಮಾಡುತ್ತಾರೆ. ಆಗ ಪ್ರತಿಯೊಂದು ವರ್ಗದಲ್ಲೂ ಕೂಡ ನಾಯಕತ್ವವನ್ನು ನಿರ್ಮಾಣ ಮಾಡಿದಂತಹ ಕೀರ್ತಿ ನಮಗೆ ಬರುತ್ತದೆ. ಇಲ್ಲಿ ಈಗ ಏನಾಗುತ್ತದೆಂದರೆ ಪ್ರತಿ 5 ವರ್ಷಗಳಿಗೆ ಮೀಸಲಾತಿ ಬದಲಾವಣೆಯಾದ ಹಾಗೆ, ಅಲ್ಲಿ ನಾಯಕತ್ವ ಬರುವುದಿಲ್ಲ. ಅಲ್ಲಿ ಹೊಸ ಹೊಸ ಜನರಿಗೆ ಕೊಟ್ಟು, ಆಡಳಿತ ವ್ಯವಸ್ಥೆಯಲ್ಲಿ ಲೋಪದೋಷಗಳನ್ನು ಕಾಣುವ ಹಾಗೆ ನಾವಾಗೇ ಕಂಡುಕೊಳ್ಳುವಂತಹ ಅನಿವಾರ್ಯ ಪರಿಸ್ಥಿತಿ ಬರುತ್ತದೆ. ಇದರ ಜೊತೆಗೆ ಸಾಧ್ಯವಾದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಬರುವಂತಹ ಮತ್ತು ಗ್ರಾಮ ಪಂಚಾಯತ್‌ನಲ್ಲಿ ಬರುವಂತಹ ಹುದ್ದೆಗಳಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾರ್ಹತೆ ಇರುವಂತಹ ಮಾನದಂಡವನ್ನು ಇಟ್ಟುಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ. ಇಲ್ಲಿ ಏನೂ ವಿದ್ಯಾರ್ಹತೆ ಇಲ್ಲದಂತಹ ವ್ಯಕ್ತಿಗಳು ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳಿಗೆ ಬಂದಾಗ, ಅಲ್ಲಿ ಆಡಳಿತ ನಡೆಸುವವರು ಬೇರೆಯವರಾಗುತ್ತಾರೆ. ಇದಕ್ಕೆ ಯಾವ ರೀತಿಯಾಗಿ ಬದಲಾವಣೆ ಮಾಡಬೇಕೆಂಬ ಬಗ್ಗೆ ಸರ್ವ ಪಕ್ಷದವರು ಸೇರಿಕೊಂಡು ಇಲ್ಲಿ ಮುಂದಿನ ಜನರಿಗೆ ಕೊಡುವಂತಹ ಕೊಡುಗೆಯಾಗಿ ಇದನ್ನು ಪರಿವರ್ತನೆ ಮಾಡಬೇಕಾಗಿದೆ. ಇವತ್ತು ಮೀಸಲಾತಿ ಎನ್ನುವಂಥಾದ್ದು ಸಮಸ್ತ ಸಮಾಜದ ಎಲ್ಲಾ ವರ್ಗಗಳಿಗೂ ಮುಂದಿನ ಜನಾಂಗಕ್ಕೆ ಕೊಡುವಂತಹ ಕೊಡುಗೆಯನ್ನಾಗಿ ಇದನ್ನು ನಾವು ಪರಿವರ್ತಿಸಬೇಕು. ಇವತ್ತು ಸಮಾಜದ ಸಮಸ್ತ ವರ್ಗಗಳಿಗೂ ಅನುಕೂಲಗಳನ್ನು ಕಲ್ಪಿಸಿಕೊಡುವಾಗ ಆಡಳಿತ ಲೋಪದೋಷಗಳಿಗೆ ಇದು ಹೊಣೆಯಾಗಬಾರದು, ಇಲ್ಲಿ ನಾವು ಮಹಿಳೆಯರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ, ಇಲ್ಲಿ ವಿದ್ಯಾಭ್ಯಾಸವಿಲ್ಲದೇ ಇರುವಂಥವರು ಅಧ್ಯಕ್ಷರಾಗಿ ಬಂದಾಗ, ಇವರ ಗಂಡಂದಿರು, ಮಕ್ಕಳು, ದರ್ಬಾರು ಮಾಡುವಂತಹ ಉದಾಹರಣೆಗಳು ನಿಮ್ಮಲ್ಲೂ ಇರಬಹುದು, ನಮ್ಮಲ್ಲೂ ಇರಬಹುದು. ಈಗ ಈ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಗಳು ಬರುತ್ತವೆ, ಇಲ್ಲಿ ರಿಜರ್ವೇಷನ್ ಬದಲಾವಣೆಯಾಗುವಾಗ ಇದನ್ನು ಲಾಟರಿ ಎತ್ತುವ ಮೂಲಕ ಈ ಚುನಾವಣಾ ಕಮೀಷನರ್‌ರವರು ನಮ್ಮ ಸಮಾಜಗಳ, ವರ್ಗಗಳ ಮೀಸಲಾತಿಗಳನ್ನು ಆಯ್ಕೆ ಮಾಡುವುದೆಂದು ಆದರೆ, ಇದಕ್ಕಿಂತ ದೊಡ್ಡ ಅನಾಹುತ ಬರೆ ಏನಿದೆ? ಆದುದರಿಂದ ದಯವಿಟ್ಟು ಸರ್ಕಾರ ಚುನಾವಣಾ ಕಮಿಷನರ್‌ರವರಿಗೆ ಯಾವುದೇ ಸಂದರ್ಭದಲ್ಲಿ ಲಾಟರಿಯ ಮುಖಾಂತರ ಎಲ್ಲಾ ಪಂಗಡಗಳ ಮೀಸಲಾತಿಯನ್ನು ಗುರ್ತಿಸುವುದು ಬೇಡವೆಂದು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಮೀಸಲಾತಿ ಆಯ್ಕೆ ಸಂದರ್ಭದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡುವ ಸಂಪ್ರದಾಯವನ್ನು ಕೈಬಿಡುವಂತೆ ಅವರಿಗೆ ಸೂಕ್ತವಾದಂತಹ ನಿರ್ದೇಶನವನ್ನು ನೀಡಬೇಕೆಂದು ನನ್ನ ಅನಿಸಿಕೆಯಾಗಿದೆ. ಇನ್ನು ಗಣಕೀಕರಣದ ಬಗ್ಗೆ, ನಾವು ಇ-ಗವರ್ನೆನ್ಸ್ ಅನ್ನು ಪ್ರತಿಪಾದಿಸುತ್ತಾ ಬಂದಿದ್ದೇವೆ,

ಮಾನ್ಯ ಮುಖ್ಯಮಂತ್ರಿಗಳಾದಂತಹ ಎಸ್.ಎಂ.ಕೃಷ್ಣರವರು, ಮುಖ್ಯಮಂತ್ರಿಯಾದಾಗಿನಿಂದ ಇಂದಿನವರೆಗೆ ಆಡಳಿತದಲ್ಲಿ ಗಣಕ ಯಂತ್ರವನ್ನು ಬಳಸುತ್ತೇವೆನ್ನುವಂತಹ ಸದುದ್ದೇಶವನ್ನು ತಂದು, ಇ-ಗವರ್ನೆನ್ಸ್ ಅನ್ನು ತರುತ್ತೇವೆನ್ನುವಂತಹ ಮಾತನ್ನು ನಮ್ಮ ಮೊದಲನೆಯ ರಾಜ್ಯಪಾಲರ ಭಾಷಣದಲ್ಲೆ ಬಂದಿದೆ. ಆದರೆ ಇವತ್ತಿನವರೆಗೂ ಇ-ಗವರ್ನೆನ್ಸ್ ಅನ್ನು ತರುವುದಕ್ಕೆ ಯಾರಿಂದ ಅಡ್ಡಿಗಳು ಬರುತ್ತಿವೆ, ಎನ್ನುವುದನ್ನು ನಾನು ಮೊದಲೇ ಹೇಳಿದ್ದೆ. ಇದಕ್ಕೆ ಒಂದು ರಾಜಕೀಯ ಇಚ್ಛಾಶಕ್ತಿ ಬೇಕು. ನಮ್ಮ ಅಧಿಕಾರಿಗಳಲ್ಲಿ ಇವತ್ತಿನವರೆಗೂ ಕೂಡ ಇ-ಗವರ್ನೆನ್ಸ್ ಬಗ್ಗೆ ಇಚ್ಛಾಶಕ್ತಿ ಬರಲಿಲ್ಲವೆಂದು ನಾನು ಬಹಿರಂಗವಾಗಿ ಹೇಳಬಲ್ಲೆ, ಇವತ್ತು ಜಿಲ್ಲಾ ಪಂಚಾಯತ್ ವ್ಯವಸ್ಥೆಗೆ ಗಣಕೀಕರಣ ಮಾಡಲಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿದೆ, ಅದಕ್ಕೆ ಎಲ್ಲಾ ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಗಣಕೀಕರಣ ಮಾಡಲಾಗಿದೆ, ಎಂಬ ಉತ್ತರ ಬಂದಿದೆ.

**4.00 ಪಿಎಂ**

ಎಲ್ಲಾ ಕಡೆ ಗಣಕೀಕರಣವಾಗಿದೆ, ಗಣಕೀಕರಣವೆಂದರೇನು? ಕೇವಲ ಕಂಪ್ಯೂಟರ್ ಅನ್ನು ಕೊಟ್ಟಿದ್ದಾರೆ ಅಷ್ಟೆ; ಕಂಪ್ಯೂಟರ್‌ನಲ್ಲಿ ಟೈಪಿಂಗ್ ಕೆಲಸ ಮಾಡುತ್ತಿದ್ದಾರೆ, ಅದರ ಪ್ರಿಂಟ್ ಔಟ್ ತೆಗೆದು, ಅದರಲ್ಲಿ ಇ-ಮೇಲ್ ಮಾಡಿದರು ಅಷ್ಟೆ, ಮತ್ತೇನೂ ಮಾಡಲಿಲ್ಲ. ಆಯಾ ಜಿಲ್ಲಾ ಪಂಚಾಯತ್‌ಗಳಿಗೆ ಬೇಕಾದ ಸಾಫ್ಟ್‌ವೇರ್‌ಗಳನ್ನು ನಿರ್ಮಾಣ ಮಾಡಿ, ಆಯಾ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳನ್ನು ನೀವು ಗಣಕೀಕರಣ ಮಾಡಿ. ಆ ಇಲಾಖೆಗಳನ್ನು ಜಿಲ್ಲಾ ಪಂಚಾಯತ್‌ಗೆ ಇಂಟರ್‌ನೆಟ್ ಮೂಲಕ ಕನೆಕ್ಟಿವಿಟಿ ಕೊಟ್ಟು, ಅದನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಕನೆಕ್ಟಿವಿಟಿ ಕೊಟ್ಟರೆ ಮಾತ್ರ ಗಣಕೀಕರಣದ ಸಾರ್ಥಕತೆಯಾಗುತ್ತದೆಯೇ ವಿನಹ, ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಕಂಪ್ಯೂಟರ್ ಕೊಟ್ಟ ತಕ್ಷಣ ಗಣಕೀಕರಣವಾಗುವುದಿಲ್ಲ. ಈ ನಿಟ್ಟಿನಲ್ಲಿ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ನಾವು ಪ್ರಕಟಪಡಿಸಿದರೂ ನಮ್ಮ ಅಧಿಕಾರಿ ವರ್ಗ ಈ ಗಣಕೀಕರಣ ವ್ಯವಸ್ಥೆಗೆ ಮುಂದೆ ಬಾರದಿರುವುದು ಬಹಳ ವಿಷಾದನೀಯವೆಂದು ನಾನು ಹೇಳಬಯಸುತ್ತೇನೆ. ನುಮ್ಮ ಎಂಎಸ್‌ಬಿಲ್ಡಿಂಗ್‌ನಲ್ಲಿರುವ ಸೆಕ್ರೆಟರಿಯೇಟ್‌ನಲ್ಲೂ ಕೂಡ ಗಣಕೀಕರಣವಾಗಿದೆ ಎಂದು ಹೇಳುತ್ತಾರೆ, ಅಲ್ಲಿ ಮಾಡುವುದು ಟೈಪಿಂಗ್ ಕೆಲಸ, ಒಂದೆರಡು ಇಲಾಖೆಗಳ ಕಾರ್ಯದರ್ಶಿಗಳನ್ನು ಬಿಟ್ಟರೆ, ಮಿಕ್ಕ ಯಾವ ಕಾರ್ಯದರ್ಶಿಗಳು ನಮ್ಮ ಇ-ಗೌರ್ನನ್ಸ್ ಬಗ್ಗೆ ಯಾವುದೇ ಮಾತನ್ನು ಕಾರ್ಯರೂಪಕ್ಕೆ ತರಲು ಮನಸಾ ಇಚ್ಛೆಯಾಗಿ ಪ್ರಯತ್ನ ಮಾಡಲಿಲ್ಲ; ಇದಕ್ಕೆ ಒಂದು ಉದಾಹರಣೆ ಎಂದರೆ ಗ್ರಾಮೀಣಾಭಿವೃದ್ಧಿ ಇಲಾಖೆ. ಈ ಇಲಾಖೆಯ ತಮ್ಮ ವರದಿಯಲ್ಲಿ ಗಣಕೀಕರಣ ವಿಭಾಗದಲ್ಲಿ ಹಣವೆಷ್ಟು ಇದೆ ಎಂದರೆ, 2002-03ರ ಮುಂಗಡ ಪತ್ರದಲ್ಲಿ ಗಣಕಯಂತ್ರದ ಸ್ಥಾಪನೆಗೆ ಹಣವನ್ನೇ ಒದಗಿಸಲಿಲ್ಲ. ಗ್ರಾಮ ಪಂಚಾಯಿತಿಗಳಿಗೆ ನೀವು ಗಣಕೀಕರಣ ಮಾಡುತ್ತೀರಾ ಎಂದು ನಾನು ಪ್ರಶ್ನೆ ಕೇಳಿದ್ದೆ, ಅದಕ್ಕೆ ಒಂದು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಗಣಕೀಕರಣ ಮಾಡಲು ನಾವು ಅನುವು ಮಾಡಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ಬೇಕಾದ ಬಂಡವಾಳ ಎಲ್ಲಿದೆ, ಅದಕ್ಕೆ ಬೇಕಾದಂಥ ಸಾಫ್ಟ್‌ವೇರ್ ಎಲ್ಲಿ ಅಭಿವೃದ್ಧಿಪಡಿಸಿದ್ದೇವೆ. ನಾವು ಐದು ವರ್ಷಗಳ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಬೆಳಂದೂರು ಗ್ರಾಮ ಪಂಚಾಯತಿಯಲ್ಲಿ ಗಣಕೀಕರಣ ಮಾಡಲಾಗಿದೆ. ಮೂರು ವರ್ಷಗಳ ಹಿಂದೆ ನಾನು ಅಲ್ಲಿಗೆ ಹೋಗಿ ಅಧ್ಯಯನ ಮಾಡಿ ನನ್ನ ತಾಲ್ಲೂಕಿನ ಗ್ರಾಮ ಪಂಚಾಯತಿಗೆ

ಒಂದು ಗಣಕೀಕರಣ ಸಾಫ್ಟ್‌ವೇರ್ ಅನ್ನು ಡೆವೆಲಪ್ ಮಾಡಿಸಿದೆ. ಇವತ್ತು ಒಂದು ಸಾವಿರ ಗ್ರಾಮ ಪಂಚಾಯತಿಗಳನ್ನು ಗಣಕೀಕರಣ ಮಾಡುವುದೆಂದರೆ ಬರೀ ಕಂಪ್ಯೂಟರ್‌ಗಳನ್ನು ಒದಗಿಸುವುದಿಲ್ಲ. ಏನು ನಾವು ಬೆಳಂದರೂ ಗ್ರಾಮ ಪಂಚಾಯತಿಯಲ್ಲಿ ಗಣಕೀಕರಣವಾಗಿದೆ ಅಲ್ಲಿ ಏನು ಸಾಫ್ಟ್‌ವೇರ್ ಡೆವಲಪ್ ಮಾಡಲಾಗಿದೆ, ಆ ವ್ಯವಸ್ಥೆಯಿಂದ ಗ್ರಾಮೀಣ ಜನರಿಗೆ ಸೇವೆಯನ್ನು ಒದಗಿಸಲಾಗಿದೆ, ಆ ಒಂದು ವ್ಯವಸ್ಥೆಯನ್ನು ಕೇವಲ ಒಂದು ಸಾವಿರ ಗ್ರಾಮ ಪಂಚಾಯತಿಗಳಿಗೆ ಮಾತ್ರವಲ್ಲ, ಎಲ್ಲಾ ಕಡೆ ತರುವ ವ್ಯವಸ್ಥೆಯಾಗಬೇಕು. ಯಾವಾಗ ನಾವು ಗ್ರಾಮ ಪಂಚಾಯಿತಿಗಳನ್ನು ಹೆಚ್ಚೆಚ್ಚು ಮಹತ್ವ ಪೂರ್ಣವಾಗಿ ಮಾಡುತ್ತೇವೆ, ಗಣಕೀಕರಣದ ವ್ಯವಸ್ಥೆಯನ್ನು ಜಾರಿಗೆ ತರುತ್ತೇವೆ. ಆಗ ನಾವು ಪಾರದರ್ಶಕತೆಯನ್ನು ತರುವುದಕ್ಕೆ ಸಾಧ್ಯತೆ ಇದೆ. ನಾನು ಮಾತನಾಡುವಾಗ ಮಾನ್ಯ ಮಂತ್ರಿಗಳಾದ ಶ್ರೀ ಘೋರ್ಪಡೆಯವರು ಇರಲಿಲ್ಲ, ಗಣಕೀಕರಣ ವ್ಯವಸ್ಥೆಯನ್ನು ಜಿಲ್ಲಾ ಪಂಚಾಯತಿಯಲ್ಲಿ ಮಾಡಲಾಗಿದೆಯೇ ಎಂದು ನಾನೊಂದು ಪ್ರಶ್ನೆಯನ್ನು ಕೇಳಿದ್ದೆ, ಎಲ್ಲಾ ಜಿಲ್ಲಾ ಪಂಚಾಯತಿಗಳಿಗೂ ಗಣಕೀಕರಣ ಮಾಡಲಾಗಿದೆ ಎಂದು ತಮ್ಮಿಂದ ಉತ್ತರ ಬಂದಿದೆ. ಅಲ್ಲಿ ಗಣಕೀಕರಣವಾಗಿಲ್ಲ, ಕೇವಲ ಕಂಪ್ಯೂಟರ್‌ಗಳನ್ನು ಒದಗಿಸಿದ್ದೀರಿ, ಆದರೆ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳನ್ನು ಗಣಕೀಕರಣ ಮಾಡುವ ವ್ಯವಸ್ಥೆಯಾಗಲಿಲ್ಲ, ಆ ಜಿಲ್ಲಾ ಪಂಚಾಯತಿಗೆ ಪ್ರತ್ಯೇಕವಾದ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸುವ ಕೆಲಸ ಕೂಡ ಆಗಲಿಲ್ಲ. ಇ-ಗೌರ್ವನೆನ್ಸ್ ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ತರುವಾಗ, ನಮ್ಮ ಮಾಹಿತಿ ತಂತ್ರಜ್ಞಾನ ಇಲಾಖೆಯನ್ನು ಕೂಡ ಬಲಪಡಿಸುವಂತಹ ಅಗತ್ಯವಿದೆ. ಇದ್ದಕಾಗಿಯೇ ನಾವು ಹಣವನ್ನು ಏತಕ್ಕೆ ಇಡಲಿಲ್ಲ, ನಮ್ಮ ಹಣಕಾಸು ಇಲಾಖೆಯವರು ಗಣಕೀಕರಣವೆಂದ ಕೂಡಲೇ ಹಣವನ್ನೇ ಬಿಡುಗಡೆ ಮಾಡುವುದಿಲ್ಲ, ಏತಕ್ಕೆ ಬಿಡುಗಡೆ ಮಾಡುವುದಿಲ್ಲ? ಹಾಗಾದರೆ ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಎನ್ನುವ ನಮ್ಮ ಸರ್ಕಾರದ ಘೋಷಣೆಯ ಫಲಶೃತಿ ಏನು? ಅದಕ್ಕಾಗಿ ನಾನು ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ, ಈ ಗ್ರಾಮ ಪಂಚಾಯತಿಗಳ ಗಣಕೀಕರಣ ವ್ಯವಸ್ಥೆ ಎಷ್ಟು ಬೇಗಾ ಆಗುತ್ತದೆಯೋ ಅಷ್ಟು ಒಳ್ಳೆಯದು. ಗ್ರಾಮ ಪಂಚಾಯತಿಗಳನ್ನು ನೇರವಾಗಿ ಅನ್‌ಟೈಡ್ ಫಂಡ್‌ಗಳ ಮೂಲಕ ಅವರಿಗೆ ಕೊಟ್ಟು ಅವರನ್ನು ಬಲಿಷ್ಠರನ್ನಾಗಿ ಮಾಡಿ, ಈ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳು ಕೇವಲ ಮೇಲ್ವಿಚಾರಣೆಗೆ ಮಾತ್ರ ವಿದ್ದು, ಈ ಗಣಕೀಕರಣ ವ್ಯವಸ್ಥೆಯನ್ನು ಗ್ರಾಮ ಪಂಚಾಯತಿಯಲ್ಲಿ ಮಾಡಿದರೆ, ಈಗ ಇರುವ ಶೇಕಡ 75ರಷ್ಟು ಭ್ರಷ್ಟಾಚಾರವನ್ನು ನಿಲ್ಲಿಸಬಹುದೆಂದು ಘಂಟಾ ಘೋಷವಾಗಿ ನಾನು ಹೇಳಬಲ್ಲೆ. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಸಾಕಷ್ಟು ಸಾಧನೆಯನ್ನು ಮಾಡುವಂತಹ ಒಂದು ಇಲಾಖೆಯಾಗಿದೆ. ಈ ಗ್ರಾಮೀಣಾಭಿವೃದ್ಧಿ ಇಲಾಖೆಯಡಿಯಲ್ಲಿ ಗ್ರಾಮೀಣ ಜನರಿಗೆ ಸಾಮೂಹಿಕವಾಗಿ ಸಹಭಾಗಿತ್ವದಲ್ಲಿ ಪಾರ್ಟಿ ಸಿಪೇಟರಿ ಡೆವಲಪ್‌ಮೆಂಟ್ ಎನ್ನುವ ಯಾವ ಒಂದು ಘೋಷಣೆ ಇದೆಯೋ ಅದು ನಮ್ಮ ಸರ್ಕಾರದ ಮುಂದಿನ ವರ್ಷದ ಘೋಷಣೆಯಾಗಬೇಕೆಂದು ನಾನು ಹೇಳಬಯಸುತ್ತೇನೆ. ಸಹಭಾಗಿತ್ವದಲ್ಲಿ ಅಭಿವೃದ್ಧಿ ಕಾರ್ಯಕ್ರಮ; ಇದು ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯಕ್ರಮ. ಇದರಲ್ಲಿ ಗ್ರಾಮ ಪಂಚಾಯತಿಯೇ ಪ್ರಥಮ, ಮಿಕ್ಕಿದ್ದೆಲ್ಲಾ ನಂತರ. ಸರ್ಕಾರದಿಂದ ನೇರವಾಗಿ ಅನುದಾನ ಬಿಡುಗಡೆಯಾಗುವುದು, ಗ್ರಾಮ ಪಂಚಾಯತಿಗೆ ಮಹತ್ವವಾದ ಅಧಿಕಾರವನ್ನು ಕೊಟ್ಟು, ಅದರ ಮೂಲಕ ಗ್ರಾಮಸ್ಥರು ಯಾವ

ಕಾಮಗಾರಿಯನ್ನು ಮಾಡುವುದಕ್ಕೆ ಬಯಸುತ್ತಾರೆ, ಅವರೇ ಕ್ರಿಯಾ ಯೋಜನೆಯನ್ನು ತಯಾರಿಸಲಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಕ್ರಿಯಾ ಯೋಜನೆ ಬೇಡ ಸ್ವಾಮಿ, ಅಲ್ಲಿ ಜಿಲ್ಲಾ ಪಂಚಾಯತಿಯ ಸದಸ್ಯರು ಬಂದು ಅನುದಾನವನ್ನು ಪಾಲು ಮಾಡುತ್ತಾರೆ ಎಷ್ಟು ಸದಸ್ಯರಿರುತ್ತಾರೆ. ಅವರಿಗೆ ಪಾಲು ಮಾಡುವುದು. ಅಲ್ಲಿ ಶಾಸಕರನ್ನು ಬಿಟ್ಟುಬಿಟ್ಟರು, ಶಾಸಕರು ಸದಸ್ಯರೆಂದೇ ಅವರಿಗೆ ಗೊತ್ತಿಲ್ಲ, ವರ್ಗಾವಣೆ ಬಂದಾಗ ಮಾತ್ರ ಶಾಸಕರ ನೆನಪು ಬಂದು ಇಂತಹವರ ವರ್ಗಾವಣೆ ಮಾಡಿ ಎಂದು ಶಾಸಕರ ಹತ್ತಿರ ಬರುತ್ತಾರೆ. ನಮಗೆ ಆ ವರ್ಗಾವಣೆಯ ಮಹತ್ವ ಬೇಡ, ಕಾಮಗಾರಿಯಲ್ಲಾಗತಕ್ಕಂಥ ಭ್ರಷ್ಟಾಚಾರಗಳು ಆಗಬಾರದು, ಅದರ ಮೇಲೆ ಒಂದು ನಿಯಂತ್ರಣ ಇಟ್ಟಂತಾಗುತ್ತದೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಅಧ್ಯಕ್ಷರು ಬೇನಾಮಿಯಾಗಿ ಗುತ್ತಿಗೆ ವಹಿಸಿಕೊಳ್ಳುವುದನ್ನು ನಿರ್ದಾಕ್ಷಿಣ್ಯವಾಗಿ ನಿಲ್ಲಿಸಬೇಕಾಗುತ್ತದೆ, ಇದರಲ್ಲಿ ಗ್ರಾಮಸ್ಥರು ಪಾಲ್ಗೊಳ್ಳಲಿ. ನನ್ನ ಕ್ಷೇತ್ರದ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿಯೆ ಗ್ರಾಮೀಣ ಅಭಿವೃದ್ಧಿ ಸಮಿತಿ ಒಂದನ್ನು ನೋಡಿಕೊಂಡು ಬಂದೆ, ಅಲ್ಲಿಯ ಗ್ರಾಮಸ್ಥರಿಗೆ ಏನು ಹೇಳಿದೆ ಎಂದರೆ, ನಿಮಗೆ 15 ದಿವಸಗಳ ಕಾಲಾವಕಾಶ ಕೊಡುತ್ತೇನೆ ನಿಮಗೆ ಬೇಕಾಗಿರುವ ಒಂದು ವರ್ಷದ ಕ್ರಿಯಾ ಯೋಜನೆಯನ್ನು ಮಾಡಿ, ನಿಮಗೆ ಐದು ಲಕ್ಷ ರೂಪಾಯಿ ಅನುದಾನವನ್ನು ನನ್ನ ಗ್ರಾಂಟ್‌ನಲ್ಲಿ ಬಿಡುಗಡೆ ಮಾಡಿಕೊಡುತ್ತೇನೆ, ಆ ಕಾಮಗಾರಿಗಳನ್ನು ನೀವೇ ಮಾಡುವುದಕ್ಕೆ ಮುಂದೆ ಬರುವುದಾದರೆ ನಿಮಗೆ ಕೊಡೋಣ; ನಾವು ಕೊಡುವ ಐದು ಲಕ್ಷ ರೂ.ಗಳ ಜೊತೆಗೆ ನೀವು ಒಂದು ಲಕ್ಷ ರೂ.ಗಳನ್ನು ಸೇರ್ಪಡೆಗೊಳಿಸಿ ಅಭಿವೃದ್ಧಿ ಮಾಡುತ್ತಾರೆಂದು ಆದರೆ ನಿಮಗೆ ಆ ಮಹತ್ವ ಪೂರ್ಣವಾದ ಕ್ರಿಯಾ ಯೋಜನೆಯನ್ನು ಅನುಷ್ಠಾನಕ್ಕೆ ತರುವಾಗ ಆ ಕಾಮಗಾರಿಯನ್ನು ಗ್ರಾಮಸ್ಥರಿಗೆ ಬಿಟ್ಟುಕೊಡುವುದು ಒಳ್ಳೆಯದಲ್ಲವೆ? ಆಗ ಈ ಇಂಜಿನಿಯರ್‌ಗಳ ಅವ್ಯವಹಾರಗಳು, ಚುನಾಯಿತ ಪ್ರತಿನಿಧಿಗಳ ಅವ್ಯವಹಾರಗಳನ್ನು ನಮ್ಮ ತಲೆಯ ಮೇಲೆ ಹಾಕುವುದು ಬರುವುದಿಲ್ಲ. ಇನ್ನು ಎರಡೂವರೆ ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಮಹತ್ವಪೂರ್ಣವಾದ ಬದಲಾವಣೆಯನ್ನು ಈ ಸರ್ಕಾರ ತಂದರೆ ಖಂಡಿತವಾಗಿಯೂ ಗ್ರಾಮ ರಾಜ್ಯ ರಾಮರಾಜ್ಯವಾಗುವ ಕನಸೇನಿದೆ, ಅದು ನನಸಾಗುವುದೆನ್ನುವ ಮಾತನ್ನು ನಾನು ಹೇಳುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ್ ಹೆಚ್.ತಹಶೀಲ್ದಾರ್) ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.

ಇನ್ನು ನಾನು ಮೀನುಗಾರಿಕೆ ಇಲಾಖೆಯ ಬಗ್ಗೆ ಮಾತನಾಡಬೇಕಾಗಿದೆ, ಇವತ್ತು ರಾಜ್ಯದಲ್ಲಿ ಎಲ್ಲಾ ಇಲಾಖೆಗಳ ಬಗ್ಗೆ ಚರ್ಚೆಯಾಗುತ್ತಿದೆ, ಆದರೆ ನಮ್ಮ ಮೀನುಗಾರರ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾರೂ ಮುಂದೆ ಬಂದವರಿಲ್ಲ. ನಾನೊಬ್ಬ ಮೀನುಗಾರರ ಸಮಾಜದಿಂದ ಬಂದಿದ್ದರಿಂದಾಗಿ ಮೀನುಗಾರಿಕೆಯ ಬಗ್ಗೆ ನಾನು ಮಾತನಾಡಲೇಬೇಕಾಗುತ್ತದೆ. ಈ ಸದನದ ಹೆಚ್ಚಿನ ಸಮಯ ಅವಕಾಶಗಳು ರೈತರ ಬಗ್ಗೆ, ರೇಷ್ಮೆ ಬೆಳೆಗಾರರ ಬಗ್ಗೆ ಚರ್ಚೆ ಮಾಡಲು ಉಪಯೋಗಿಸಲಾಗಿದೆ, ಆದರೆ ಮೀನುಗಾರರ ಬಗ್ಗೆ ಹೆಚ್ಚಿನ ಚರ್ಚೆಗಳು ಇಲ್ಲ ಆಗಲಿಲ್ಲ; ಇದು ನಮ್ಮ ದುರ್ದೈವವೇನೋ, ಆದರೆ ಮೀನನ್ನು ತಿನ್ನುವುದಕ್ಕೆ ಎಷ್ಟು ದುಬಾರಿಯಾದರೂ ಪರವಾಗಿಲ್ಲ ಎಲ್ಲರೂ ಕ್ಯೂ ನಿಂತುಕೊಳ್ಳುತ್ತಾರೆ. ನಮಗೆ ಒಂದು ಮೀನಿನ ಫ್ರೈ ಬೇಕೇ ಬೇಕು, ಅದು ಯಾವ ಟೈಪ್‌ದು, ಅದು ಪ್ರಾನ್ ಬಂಗಡೆಯಾ, ಭೂತಾಯಿಯಾ ಲಾಫ್ತರಾ? ಲಾಫ್ತರ್‌ನಿಂದ ಕಟ್ಲೆಟ್ಟು ಮಾಡುತ್ತೀರಿ, ಹೀಗೆ ಮೀನನ್ನು ತಿನ್ನುವುದಕ್ಕೆ ಬಯಸುತ್ತಾರೆ. ಇವತ್ತು ಇಂತಹ ಮೀನುಗಾರಿಕೆ ಉದ್ದಿಮೆ ಯಾವ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ನಾವು ನೋಡಬೇಕು.

ಶ್ರೀ ಆರಗ ಜ್ಞಾನೇಂದ್ರ: ಇಷ್ಟೆಲ್ಲಾ ಹೆಸರು ಹೇಳಿದರು ಒಂದು ದಿನ ವಾದರೂ ಸದನದ ಸದಸ್ಯರನ್ನೆಲ್ಲಾ ಕರೆದು ಒಂದು ಒಳ್ಳೆಯ ಊಟ ಹಾಕಿಸಿದ್ದಾರಾ? ಅದರ ರುಚಿಯನ್ನು ತೋರಿಸಿದ್ದಾರಾ? ಸುಮ್ಮನೆ ಹೆಸರನ್ನು ಹೇಳಿ ಬಾಯಿಯಲ್ಲಿ ನೀರನ್ನು ಭರಿಸುತ್ತಾರೆ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಶ್ರೀ ಆರಗ ಜ್ಞಾನೇಂದ್ರರವರು ಮೀನನ್ನು ತಿನ್ನುತ್ತಾರೆನ್ನುವುದಾದರೆ ಇವತ್ತೇ ತರಿಸಿಕೊಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ನನ್ನ ಬಗ್ಗೆ ಅವರಿಗೆ ಏತಕ್ಕೆ ಈ ಅನುಮಾನ ಬಂದಿದೆ ಎನ್ನುವುದು ನನಗೆ ಗೊತ್ತಾಗಲಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಜ್ಞಾನೇಂದ್ರರವರೇ, ನಿಮ್ಮ ಬಗ್ಗೆ ಅವರಿಗೆ ಸರಿಯಾದ ಮಾಹಿತಿ ಇಲ್ಲ. ದಯಮಾಡಿ ಸಂಜೆ ಅವರನ್ನು ಭೇಟಿ ಮಾಡಿ ನಿಮ್ಮ ಪೂರ್ಣ ವಿವಿರಗಳನ್ನು ಅವರಿಗೆ ಕೊಡಿ.

ಶ್ರೀ ಆರಗ ಜ್ಞಾನೇಂದ್ರ: ನನ್ನ ಆಪ್ತ ಸ್ನೇಹಿತರು ಅವರು. ಆದರೂ ಇದುವರೆಗೂ ನನ್ನ ಬಗ್ಗೆ ಏನೂ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದು ಹೇಗೆ?

ಶ್ರೀ ಯು.ಆರ್. ಸಭಾಪತಿ: ಇವತ್ತು ನಾವು ಕೃಷಿಗೆ ಸಂಬಂಧಿಸಿದಂತೆ ರೇಷ್ಮೆ ಬೆಳೆಗಾರರ ಬಗ್ಗೆ, ಕಬ್ಬು ಬೆಳೆಗಾರರ ಬಗ್ಗೆ ಅಥವಾ ಇತರ ಯಾವುದೇ ಬೆಳೆಗಾರರ ಬಗ್ಗೆ ಹೇಗೆ ಆದ್ಯತೆಯನ್ನು ಕೊಡುತ್ತೇವೆಯೋ ಅದೇ ರೀತಿ ಸಮುದ್ರದಲ್ಲಿ ಸಾಹಸ ಮಾಡತಕ್ಕಂಥ ಮೀನುಗಾರರ ಬಗ್ಗೆ ಕೂಡ ಬಹಳ ಮಹತ್ವಪೂರ್ಣವಾದ ಆದ್ಯತೆಯನ್ನು ಕೊಡಬೇಕಾಗಿದೆ. ಮೀನುಗಾರಿಕೆ ಮಾಡುವುದು ಎಂದರೆ ತಮಾಷೆಯಲ್ಲ. ಸಮುದ್ರದ ಮೇಲೆ ಮೀನುಗಾರಿಕೆ ಮಾಡುವುದು ಎಂದರೆ ಅದು ಅಷ್ಟು ಸುಲಭದಲ್ಲಿ ಆಗುವುದಿಲ್ಲ. ಸಮುದ್ರಕ್ಕೆ ಹೋದವರು ಹಿಂದಿರುಗಿ ಬರುತ್ತಾರೆ ಎನ್ನುವ ಕಲ್ಪನೆ ಕೂಡ ನಮಗೆ ಇರುವುದಿಲ್ಲ. ಮೀನುಗಾರರು ಸಮುದ್ರದಲ್ಲಿ 10-15 ಕಿ.ಮೀ. ದೂರ ಹೋಗಿ ತೆರೆಗಳ ಅಬ್ಬರದಲ್ಲಿ ಕೆಲಸ ಮಾಡಬೇಕು. ಇಷ್ಟಾದರೂ ಅವರಿಗೆ ಮೀನು ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ. ಇದು ಒಂದು ರೀತಿಯಲ್ಲಿ ಲಾಟರಿ ಇದ್ದ ಹಾಗೆ. ಮಳೆಯಾದರೆ ಕೃಷಿಯನ್ನಾದರೂ ಮಾಡಬಹುದು. ಮಳೆಯಾದರೆ ಒಳ್ಳೆಯ ಬೆಳೆ ಬರುತ್ತದೆ. ಆದರೆ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇವತ್ತು ಏನಾಗಿದೆ ಎಂದರೆ ಕರಾವಳಿಯಲ್ಲಿ ಸುಮಾರು ಮೂರೂವರೆ ಲಕ್ಷದಷ್ಟು ಜನ ಮೀನುಗಾರರು ಉದ್ಯೋಗದಲ್ಲಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಮೀನುಗಾರಿಕಾ ಉದ್ದಿಮೆ ಒಂದಲ್ಲ ಒಂದು ರೀತಿಯಲ್ಲಿ ಕುಂಠಿತವಾಗುತ್ತಾ ಹೋಗುತ್ತಿದೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಒಂದು ಕಾರಣವೆಂದರೆ, ಕರಾವಳಿಯ ದಂಡೆಯಲ್ಲಿ ಬಂದಿರತಕ್ಕಂಥ ಎಂ.ಸಿ.ಎಫ್, ಎಂ.ಆರ್.ಪಿ.ಎಲ್ ಗಳಂಥ ಬೇರ ಬೇರೆ ಮೇಜರ್ ಇಂಡಸ್ಟ್ರೀಗಳ ಪೊಲ್ಯೂಷನ್, ಇವುಗಳಿಂದ ಆಗುತ್ತಿರುವ ಸಾಗರ ಮಾಲಿನ್ಯ, ಜಲಮಾಲಿನ್ಯದಿಂದ ಮೀನುಗಾರಿಕಾ ಉದ್ದಿಮೆ ಬಹಳಷ್ಟು ಕುಂಠಿತವಾಗುವಂಥ ಪರಿಸ್ಥಿತಿ ಬಂದಿದೆ. ಇನ್ನೊಂದು ಕಡೆ ವಿದೇಶೀ ಮೀನುಗಾರಿಕಾ ಬೃಹತ್ ಉದ್ದಿಮೆಗಳು ....

ಶ್ರೀ ಡಿ.ವಿ. ಸದಾನಂದಗೌಡ: ಈ ರೀತಿಯಾಗಲು ಮುಖ್ಯ ಕಾರಣವೆಂದರೆ, ಸಾಧಾರಣವಾಗಿ ದಕ್ಷಿಣ ಜಿಲ್ಲೆಯವರೇ ಹೆಚ್ಚಾಗಿ ಮೀನುಗಾರಿಕಾ ಇಲಾಖಾ ಮಂತ್ರಿಗಳಾಗುವಂಥಾದ್ದೂ ಕಾರಣವಿರಬಹುದೇ?

ಶ್ರೀ ಯು.ಆರ್. ಸಭಾಪತಿ: ಮೀನುಗಾರಿಕಾ ಸಚಿವರು ದಕ್ಷಿಣ ಕನ್ನಡ ಜಿಲ್ಲೆಯುವರಾದರೂ ಕೂಡ, ಫೈನಾನ್ಸ್ ಸೆಕ್ರೆಟರಿ ಮತ್ತು ಮುಖ್ಯಮಂತ್ರಿಗಳು ದಕ್ಷಿಣ ಕನ್ನಡದವರಾಗಬೇಕಾಗುತ್ತದೆ. ಫೈನಾನ್ಸ್ ಸೆಕ್ರೆಟರಿಯವರು ಮೀನುಗಾರಿಕೆಗೆ 23 ಕೋಟಿ ರೂಪಾಯಿಗಳನ್ನು ಪರ್ಮನೆಂಟ್ ಮಾಡಿದ್ದಾರೆ. ಅದನ್ನು ಮುಂದಕ್ಕೇ ತೆಗೆದುಕೊಂಡು ಹೋಗಲಿಲ್ಲ. ಅದನ್ನು ಮತ್ತೆ ಕಡಿಮೆ ಮಾಡಿದರೇ ವಿನ: ಹೆಚ್ಚು ಮಾಡಲಿಲ್ಲ. ಇದನ್ನು ವಿಷಯ ಸಮಿತಿಯಲ್ಲಿ ನಾವು ಅಧ್ಯಯನ ಮಾಡಿ ಇದಕ್ಕೆ ಒಂದು ನೂರು ಕೋಟಿ ರೂಪಾಯಿಗಳ ಬಜೆಟ್ ಅನ್ನು ಇಡಬೇಕು, ಇದರಿಂದ ಎಂಪ್ಲಾಯ್‌ಮೆಂಟ್ ಆಪರ್ಚುನಿಟೀಸ್ ಹೆಚ್ಚಾಗುತ್ತದೆ, ವಿದೇಶೀ ವಿನಿಮಯವನ್ನು ತರಲು ಆಗುತ್ತದೆ ಇದೆಲ್ಲದರಿಂದ ಮೀನುಗಾರಿಕಾ ಉದ್ದಿಮೆಯನ್ನು ಬಲಪಡಿಸಲು ಅನುಕೂಲ ವಾಗುತ್ತದೆ ಎಂದು 1994-95ರ ಕೃಷಿ, ಪಶುಸಂಗೋಪನಾ ಇಲಾಖಾ ಸಮಿತಿಯ ಅಧ್ಯಕ್ಷನಾಗಿದ್ದಾಗ ನಾನು ಸೂಚನೆ ಕೊಟ್ಟಿದ್ದೆ. ನಂತರದ ಎಲ್ಲಾ ವರದಿಗಳಲ್ಲಿ ಮೀನುಗಾರಿಕೆಯನ್ನು ಉತ್ತಮಪಡಿಸಬೇಕು ಎಂದು ಹೇಳಿಕೊಂಡು ಬಂದೆವೇ ವಿನ : ಅದಕ್ಕಾಗಿ ಹೆಚ್ಚಿನ ಹಣವನ್ನು ಮುಂಗಡ ಪತ್ರದಲ್ಲಿ ತೊಡಗಿಸಲು ಆಗಲೇ ಇಲ್ಲ. ನಾವು ಎಷ್ಟು ಹೆಚ್ಚೆಚ್ಚು ಹಣವನ್ನು ಮೀನುಗಾರಿಕಾ ಉದ್ದಿಮೆಯಲ್ಲಿ ತೊಡಗಿಸುತ್ತೇವೆಯೋ, ಅಷ್ಟೂ ಹೆಚ್ಚೆಚ್ಚು ಅವಿದ್ಯಾವಂತ ಮೀನುಗಾರರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ. ಮೀನುಗಾರಿಕೆಗೆ ಎಷ್ಟು ಪ್ರೋತ್ಸಾಹ ಕೊಟ್ಟಿದ್ದೇವೆಯೋ ಅಷ್ಟು ವಿದೇಶೀ ವಿನಿಮಯವನ್ನು ಉತ್ಪತ್ತಿ ಮಾಡಲು ಸಾಧ್ಯವಾಗಿದೆ. ಮೀನುಗಾರಿಕೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟಷ್ಟೂ, ಅದಕ್ಕೆ ಸಂಬಂಧಪಟ್ಟ ಐಸ್ ಪ್ಲಾಂಟ್‌ಗಳು, ಕೋಲ್ಡ್ ಸ್ಟೋರೇಜ್‌ಗಳಂಥ ಸಬಾರ್ಡಿನೇಟ್ ಇಂಡಸ್ಟ್ರೀಗಳನ್ನು ಡೆವೆಲಪ್ ಮಾಡಲು ಸಾಧ್ಯವಾಗುತ್ತದೆ. ಮಹಿಳೆಯರಿಗೆ ಬೇಕಾದಷ್ಟು ಉದ್ಯೋಗಾವಕಾಶಗಳು ಮೀನುಗಾರಿಕೆಯಲ್ಲಿ ಸಿಕ್ಕಿವೆ. ಇಂಥ ಮೀನುಗಾರಿಕಾ ಉದ್ದಿಮೆಯನ್ನು ಬಲಪಡಿಸುವುದರ ಜೊತೆಗೆ, ಏಕೆ ಮೀನುಗಾರಿಕಾ ಉತ್ಪನ್ನ ಕುಂಠಿತವಾಗುತ್ತಾ ಬಂದಿದೆ ಎನ್ನುವುದನ್ನೂ ಯೋಚನೆ ಮಾಡಬೇಕು. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಒಂದು ನೂತನವಾದಂಥ ಮೀನುಗಾರಿಕಾ ನೀತಿಯನ್ನು ಅಳವಡಿಸಬೇಕಾಗುತ್ತದೆ. ಮಾನ್ಯ ಸದಾನಂದಗೌಡರೇ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ಕೇಂದ್ರ ಸರ್ಕಾರಕ್ಕೆ ನಾವು ಸುಮಾರು 5-6 ವರ್ಷಗಳಿಂದ ಮನವಿ ಕೊಡುತ್ತಾ ಬಂದಿದ್ದೇವೆ. ಕೃಷಿ ಸಚಿವರ ಅಧೀನದಲ್ಲೇ ಮೀನುಗಾರಿಕಾ ಇಲಾಖೆ ಬರುತ್ತದೆ. ಕೇಂದ್ರದಲ್ಲಿ ಕೃಷಿ ಮಂತ್ರಿಯಾಗಿದ್ದವರು ರೈತ ಮುಖಂಡರು, ಅವರು ಮೀನುಗಾರಿಕೆಗೆ ಗಮನವನ್ನೇ ಕೊಡಲಿಲ್ಲ. ಕೇಂದ್ರದಲ್ಲಿ ಮೀನುಗಾರಿಕೆ ಉದ್ದಿಮೆಗೆ ಬೇಕಾದಷ್ಟು ಹಣ ಇದೆ. ಆದರೆ ಮೀನುಗಾರಿಕೆಗೆ ಒಂದು ಪ್ರತ್ಯೇಕವಾದಂಥ ಇಲಾಖೆ ...

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಸಭಾಪತಿಯವರ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕರಾವಳಿಯವರೇ ಆದು, ಅವರು ಏನು ಮಾಡುತ್ತಿದ್ದಾರೆ ಸ್ವಾಮಿ? ಲೋಕಸಭೆಯಲ್ಲಿ ಮೀನುಗಾರರ ಬಗ್ಗೆ ಮಾತನಾಡಲು ಅವರ ಬಾಯಿಗೆ ಬೀಗ ಹಾಕಲಾಗಿದೆಯೇ? ನೀವು ಕೇಂದ್ರ ಸರ್ಕಾರದ ಮಾತನಾಡುತ್ತೀರಲ್ಲಾ, ಎಂ.ಪಿ.ಯಾಗಿ ಅವರು ಕೇಂದ್ರಕ್ಕೆ ಹೋಗಿರುವುದು ಇಲ್ಲಿ ಬಂದು ರಾಜಕೀಯ ಮಾಡಲಿಕ್ಕಲ್ಲ. ಮೀನುಗಾರರ ಸಮಸ್ಯೆಗಳ ಬಗ್ಗೆ ಒಂದು ಶಬ್ದವನ್ನೂ ಲೋಕಸಭೆಯಲ್ಲಿ ಏಕೆ ಪ್ರಸ್ತಾಪ ಮಾಡುವುದಿಲ್ಲ? ಬಾಯಿ ತುಂಬಾ ಮೀನನ್ನು ತುಂಬಿಕೊಂಡಿದ್ದಾರೆಯೇ ಹೊರತು ಲೋಕಸಭೆಯಲ್ಲಿ ಒಂದೇ ಒಂದು ಶಬ್ದವನ್ನು ಮೀನುಗಾರರ ಬಗ್ಗೆ ಮಾತನಾಡಿಲ್ಲ.

ಶ್ರೀ ಕೆ. ಗೋಪಾಲ ಪೂಜಾರಿ: ಅವರು ಏನು ಮಾಡಿದ್ದಾರೆ?

ಶ್ರೀ ಯು.ಆರ್. ಸಭಾಪತಿ: ಮಾನ್ಯ ಉಪಾಧ್ಯಕ್ಷರೇ, ನಾನು ಯೀಲ್ಡ್ ಆಗಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಲೋಕಸಭೆಯಲ್ಲಿ ಈ ಬಗ್ಗೆ ಯಾರು ಮಾತನಾಡಬೇಕು?

ಉಪಾಧ್ಯಕ್ಷರು: ಲೋಕಸಭಾ ಸದಸ್ಯರ ವಿಚಾರವನ್ನು ಇಲ್ಲಿ ಏಕೆ ಮಾತನಾಡುವುದು?

ಶ್ರೀ ಡಿ.ವಿ. ಸದಾನಂದಗೌಡ: ನಾನು ಯಾವ ಉದ್ದೇಶದಿಂದ ಹೇಳಿದೆ ಎಂದರೆ, ಕೇಂದ್ರ್ರದ ಮುಂದೆ ಮೀನುಗಾರರ ಬವಣೆಯನ್ನು ತೆರೆದಿಟ್ಟು, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಕೆಲಸ ಮಾಡಬೇಕಾದುದು ಲೋಕಸಭಾ ಸದಸ್ಯನ ಜವಾಬ್ದಾರಿ. ಕಳೆದ ಎರಡೂವರೆ ವರ್ಷಗಳಲ್ಲಿ, ಅವರು ಲೋಕಸಭೆಯಲ್ಲಿ ಮೀನುಗಾರರ ಬಗ್ಗೆ ಮಾತನಾಡಿ ಒಂದೇ ಒಂದು ಶಬ್ದವನ್ನೂ ನಾವು ಪೇಪರ್‌ಗಳಲ್ಲಿ ಓದಲಿಲ್ಲ.

ಶ್ರೀ ಕೆ. ಗೋಪಾಲ ಪೂಜಾರಿ: ನಿಮ್ಮ ಪಕ್ಷದವರೇ ಆದ ಆ ಭಾಗದವರು ಕೇಂದ್ರ್ರದಲ್ಲಿ ಮಂತ್ರಿಯಾಗಿದ್ದರು ಅವರು ಏನು ಮಾಡಿದರು?

ಶ್ರೀ ಕಾಗೋಡು ತಿಮ್ಮಪ್ಪ: ಮಂತ್ರಿಯಾಗಿ ಮಾಡಬೇಕಾದುದ್ದನ್ನೇ ಅವರು ಮಾಡಲಿಲ್ಲ. ಈಗ ಅವರಿಗೆ ನೀವು ಹೇಳುತ್ತೀರಾ?

ಶ್ರೀ ಬಿ. ರಮಾನಾಥ್ ರೈ: ಆ ಭಾಗದ ಲೋಕಸಭಾ ಸದಸ್ಯರು ಎಂದರೆ.

ಶ್ರೀ ಡಿ.ವಿ. ಸದಾನಂದಗೌಡ: ನಾನು ಎಲ್ಲರ ಬಗ್ಗೆಯಾ ಮಾತನಾಡುತ್ತಿದ್ದೇನೆ. ಒಬ್ಬರ ಬಗ್ಗೆ ಮಾತನಾಡುತ್ತಿಲ್ಲ. ಕರಾವಳಿ ಭಾಗದಿಂದ ಬಂದಿರುವ ಲೋಕಸಭೆ ಸದಸ್ಯರ ಬಗ್ಗೆಯೇ ಮಾತನಾಡುತ್ತಿದ್ದೇನೆ. ಅವರು ಇವರು ಎನ್ನುವ ತಾರತಮ್ಯ ನಮಗಿಲ್ಲ.

ಶ್ರೀ ಬಿ.ರಮಾನಾಥ್ ರೈ: ನಿಮ್ಮ ಪಕ್ಷದವರು ಎಂದು ನೀವು ಒಬ್ಬರ ಬಗ್ಗೆ ಮಾತ್ರ ಹೇಳಿದಿರಿ.

ಶ್ರೀ ಯು.ಆರ್. ಸಭಾಪತಿ: ಉಪಾಧ್ಯಕ್ಷರೇ, ನಾನು ಯೀಲ್ಡ್ ಆಗಿಲ್ಲ. ದಯವಿಟ್ಟು ಅವರಿಗೆ ಕುಳಿತುಕೊಳ್ಳಲು ಹೇಳಿ. ತಾವು ಸಮ್ಮನಿದ್ದೀರಿ.

ಶ್ರೀ ಡಿ.ವಿ. ಸದಾನಂದಗೌಡ: ಆದರೆ ವಿಶೇಷವಾಗಿ ನಿಮ್ಮ ಪಕ್ಷದ ಸದಸ್ಯರು ಪ್ರಸ್ತಾಪ ಮಾಡಿದ ಕಾರಣ ಅವರು ಮಾತನಾಡಬೇಕು ಎಂದು ಹೇಳಿದೆ. ಅದರಲ್ಲಿ ಅವರು ವಿಫಲರಾಗಿದ್ದಾರೆ.

ಉಪಾಧ್ಯಕ್ಷರು: ಈ ಸದನದಲ್ಲಿ ಇಲ್ಲದವರ ಪ್ರಸ್ತಾಪ ಮಾಡಬಾರದು. ಹೆಸರನ್ನು ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಯು.ಆರ್. ಸಭಾಪತಿ: ಹಾಗಿರುವಾಗಿ ಏಕೆ ಮಾತನಾಡಿದರು ಅವರು?

ಶ್ರೀ ಡಿ.ವಿ. ಸದಾನಂದಗೌಡ: ನಾನು ಹೆಸರು ಹೇಳಲಿಲ್ಲ, ಎಂದು ಮಾತ್ರ ಹೇಳಿದ್ದೇನೆ. ಸದನದಲ್ಲಿ ಹೆಸರು ಹೇಳಿದ್ದು ನೀವು, ನಾನಲ್ಲ.

ಶ್ರೀ ರಮಾನಾಥ್ ರೈ: ಸದಸ್ಯರಾರು?

ಶ್ರೀ ಡಿ.ವಿ. ಸದಾನಂದಗೌಡ: ಕಳೆದ ಎರಡೂವರೆ ವರ್ಷಗಳ ಕಾಲ ಮೀನುಗಾರಿಕಾ ಸಚಿವರಾಗಿದ್ದರು. ಮೀನುಗಾರಿಕಾ ಸಚಿವರಾಗಿ, ಮೀನುಗಾರರ ಸಮಸ್ಯೆಗಳ ಬಗ್ಗೆ ಏನೂ ಮಾಡದಂಥವರು ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಬಿ. ರಮಾನಾಥ್ ರೈ: ಕೇಂದ್ರ ಸರ್ಕಾರ ಏನು ಮಾಡಿದೆ?

ಶ್ರೀ ಡಿ.ವಿ. ಸದಾನಂದಗೌಡ: ಇವರ ಕಾಲದಲ್ಲಿ ಸಮುದ್ರದಲ್ಲಿ ಮೀನುಗಳೇ ಸತ್ತು ಹೋದವು. ಆ ಪರಿಸ್ಥಿತಿ ಬಂದಿತ್ತು. ಎರಡು ವರ್ಷಗಳ ಕಾಲದಲ್ಲಿ ತಡೆಗೋಡೆಯ ಕಲ್ಲುಗಳನ್ನೇ ನುಂಗಿಬಿಟ್ಟಿದ್ದಾರೆ.

ಶ್ರೀ ಬಿ.ರಮಾನಾಥ್ ರೈ: ಉಪಾಧ್ಯಾಕ್ಷರೇ, ಮಾನ್ಯ ಸದಸ್ಯರು ಜವಾಬ್ದಾರಿಯುತವಾಗಿ ಮಾತನಾಡಬೇಕು. ಯಾವ ಹೆಸರನ್ನೂ ಹೇಳಲಿಲ್ಲ ಎಂದು ಹೇಳಿದರು, ಸದಸ್ಯರು ಯಾರು? ಇವರು ತಮಾಷೆ ಮಾಡುತ್ತಾರೇನು? ಜವಾಬ್ದಾರಿಯುತವಾಗಿ ಮಾತನಾಡಲಿ.

ಶ್ರೀ ಡಿ.ವಿ. ಸದಾನಂದಗೌಡ: ಸದಸ್ಯರು ಎಂದು ಹೇಳಿದೆ. ಅದು ಯಾರೆಂದು ಅವರು ತಿಳಿದುಕೊಳ್ಳಲಿ. ನಾನು ಅವರ ಹೆಸರನ್ನು ಹೇಳಲಿಲ್ಲ. ಲೋಕಸಭಾ ಸದಸ್ಯರುಗಳು ಹೆಸರನ್ನು ಹೇಳಿದ್ದು ರಮಾನಾಥ್ ರೈಗಳು.

ಶ್ರೀ ಬಿ. ರಮಾನಾಥ್ ರೈ: ವ್ಯಕ್ತಿಯ ಹೆಸರುಗಳನ್ನು ಹೇಳಿದಿರಿ. ಡಿಫೆಂಡ್ ಮಾಡಿಕೊಳ್ಳಲು ಅವರು ಇಲ್ಲಿದ್ದಾರೆಯೇ?

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ: ಮಂತ್ರಿಯಾಗಿದ್ದರಲ್ಲಾ ನಿಮ್ಮವರು ಅವರು ಏನು ಮಾಡಿದ್ದಾರೆಂದು ಹೇಳಿ, ಏನು ಕೆಲಸ ಮಾಡಿದ್ದಾರೆ ಎನ್ನುವುದನ್ನು ಹೇಳಲಿ.

(ಗೊಂದಲ)

ಉಪಾಧ್ಯಕ್ಷರು: ಇಲ್ಲಿ ಯಾವ ಲೋಕಸಭಾ ಸದಸ್ಯರು ಹೆಸರನ್ನೂ ಪ್ರಸ್ತಾಪ ಮಾಡಬಾರದು. ಅದರ ಅವಶ್ಯಕತೆ ಇಲ್ಲ.

ಶ್ರೀ ಕೆ. ಗೋಪಾಲ ಪೂಜಾರಿ: ಕೃಷಿ ಸಚಿವರಿಗೆ ಕೇಳಿಕೊಂಡಿದ್ದೇವೆ, ಮೀನುಗಾರರ ನಾಡದೋಣಿಗಳಿಗೆ ಹಾಕತಕ್ಕಂಥ ಸೀಮೆಎಣ್ಣೆಯನ್ನು ಜಾಸ್ತಿ ಮಾಡಿ ಎಂದು ಕೇಳಿದರೆ, ನಿಮ್ಮ ಕೇಂದ್ರ ಸರ್ಕಾರ ಅದನ್ನು ಕೊಡಲಿಲ್ಲ. ಕೇರಳದಲ್ಲಿ 340 ಲೀಟರ್ ಸೀಮೆ ಎಣ್ಣೆಯನ್ನು ಕೊಡುತ್ತಿದ್ದಾರೆ. ನಾವು ಪ್ರಸ್ತಾವನೆಯನ್ನು ಕೊಟ್ಟರೂ, ನಿಮ್ಮ ಕೇಂದ್ರ ಸರ್ಕಾರದವರು ಮೀನುಗಾರರ ನಾಡದೋಣಿಗಳಿಗೆ ಸೀಮೆಎಣ್ಣೆಯನ್ನು ಕೊಡಲಿಲ್ಲ. ಮತ್ತೆ ಈಗ ಇಲ್ಲಿ ಮಾತನಾಡುತ್ತೀರಿ.

ಉಪಾಧ್ಯಕ್ಷರು: ಗೋಪಾಲ ಪೂಜಾರಿಯವರೇ, ನೀವು ಕುಳಿತುಕೊಳ್ಳಿ. ಸಭಾಪತಿಯವರೇ ನೀವು ಮುಂದುವರೆಸಿ.

ಶ್ರೀ ಯು.ಆರ್. ಸಭಾಪತಿ: ಯಾವುದೇ ಒಂದು ರಾಜಕೀಯ ಅಭಿಪ್ರಾಯವನ್ನು ಮಂಡನೆ ಮಾಡಲು ನಾನು ಇಲ್ಲಿ ನಿಂತಿಲ್ಲ. ಕೇಂದ್ರ ಸರ್ಕಾರದ ಸಹಕಾರವನ್ನು ಮಾನ್ಯ ಸದಾನಂದಗೌಡರಲ್ಲಿ ಕೇಳುತ್ತಿದ್ದೇನೆ. ನಮ್ಮ ಬೇಡಿಕೆಗಳ ಬಗ್ಗೆ ಉಡುಪಿಯ ಎಂ.ಪಿ.ಯವರು ಮತ್ತು ಉಡುಪಿಯ ರಾಜ್ಯಸಭಾ ಸದಸ್ಯರ ನೇತೃತ್ವದಲ್ಲಿ ಮಾನ್ಯ ರಮಾನಾಥ್ ರೈರವರು ಕಳೆದ ಎರಡೂವರೆ ವರ್ಷಗಳಿಂದ, ರಾಷ್ಟ್ರೀಯ ಮೀನುಗಾರರ ಸಂಘದ ವತಿಯಿಂದ ಕೇಂದ್ರ ಸರ್ಕಾರವನ್ನು ಆಗ್ರಹಿಸಿಕೊಂಡು ಬಂದಿದ್ದೇವೆ. ಅದನ್ನು ಇನ್ನೂ ಈಡೇರಿಸಿಲ್ಲ. ಅದನ್ನು ಈಡೇರಿಸುವ ಬಗ್ಗೆ ನಮ್ಮ ಜಿಲ್ಲೆಯವರೇ ಸಚಿವರಾಗಿದ್ದರು ನಮ್ಮ ಸಹ ಸಹಾಯಕ್ಕೆ ಬರಲಿಲ್ಲ ಎನ್ನುವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೇ ವಿನ: ಯಾವುದೇ ರಾಜಕೀಯ ಬಣ್ಣ ಲೇಪಿಸಲು ನಾನು ಬರಲಿಲ್ಲ.

ಶ್ರೀ ಡಿ.ವಿ. ಸಂದಾನಂದಗೌಡ: ಈಗ ನಿಮಗೆ ಕೇಳಿಸುವುದಿಲ್ಲವೇ? ಸಭಾಪತಿಯವರು ಹೇಳಿದ್ದು ಕೆಲವು ಸಲ ರಮಾನಾಥ್ ರೈ ಅವರಿಗೆ ಕೇಳಿಸುವುದಿಲ್ಲ ಅಲ್ಲವೇ?

ಶ್ರೀ ಕೆ. ಗೋಪಾಲ ಪೂಜಾರಿ: ನಿಮ್ಮ ಬಂದು ಏನು ಮಾಡಿದ್ದಾರೆ? ಮೊನುಗಾರರ ಆ ಚಳುವಳಿ ಭಾಗದಲ್ಲಿ ಇದ್ದಾರೆ. ಅವರು ಸಚಿವರಾಗಿ ಎಷ್ಟು ಕೆಲಸ ಮಾಡಿದ್ದಾರೆ? ಅದಕ್ಕೆ ಉತ್ತರ ಕೊಡಿ. ಎಷ್ಟು ಕೆಲಸ ಮಾಡಿದ್ದಾರೆಂದು ಹೇಳಿ. ಕೇರಳದಲ್ಲಿ 340 ಲೀಟರ್ ಸೀಮೆಣ್ಣೆ ಕೊಡುತ್ತಿದ್ದಾರೆ. ನಮ್ಮ ನಾಡದೋಣಿಗೆ ಸೀಮೆಎಣ್ಣೆ ಕೊಡಿ ಎಂದು ಕೇಂದ್ರ ಸರ್ಕಾರದವರನ್ನು ಕೇಳಿದರೆ ಕೊಡಲಿಲ್ಲ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಉಪಧ್ಯಾಕ್ಷರೆ, ಎಲ್ಲಾ ಅಭಿವೃದ್ಧಿಗೂ, ವಿಫಲತೆಗೂ ಕೇಂದ್ರ ಕಾರಣವಾಗುವುದಾರೆ, ನಿಮ್ಮ ಸರ್ಕಾರ ಏಕೆ ಇಲ್ಲಿ?

ಶ್ರೀ ಯು.ಆರ್. ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಯಾರಿಗೂ ನಾನು ಯೀಲ್ಡ್ ಆಗಲಿಲ್ಲ. ನೀವಾದರೂ ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ಅವರು ಮಧ್ಯೆ ಎದ್ದು ಮಾತನಾಡುವಾಗ ತಾವು ಹೇಳಬೇಕಲ್ಲವೇ? ನಾನು ಏನು ಮಾಡಲಿಕ್ಕೆ ಆಗುತ್ತದೆ?

ಉಪಾಧ್ಯಕ್ಷರು: ಆಯಿತು, ತಾವು ಈಗ ಮುಂದುವರೆಸಿ.

ಶ್ರೀ ಯು.ಆರ್. ಸಭಾಪತಿ: ನಾನು ರಾಜಕೀಯ ಪ್ರಸ್ತಾಪ ಮಾಡಲಿಲ್ಲ. ನಾನು ಕೇಂದ್ರ ಸರ್ಕಾರದ ಸಹಕಾರ ಯಾಚನೆ ಮಾಡುತ್ತಿದ್ದೇನೆ. ಇವತ್ತು ಮೊನುಗಾರಿಕೆ ಎನ್ನುವುದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ.

(ಗೊಂದಲ)

ಶ್ರೀ ಅಪ್ಪಚ್ಚುರಂಜನ್: ಮಾನ್ಯ ಉಪಾಧ್ಯಕ್ಷರೆ, (ಎಂದು ಅವರು ಹೇಳಿದ್ದಾರೆ. ಬೇಕಾದರೆ ಕಡತ ತೆಗೆದು ನೋಡಿ) ಈ ಸದನದ ಸದಸ್ಯರಲ್ಲದವರ ಹೆಸರನ್ನು ಇಲ್ಲಿ ಏಕೆ ಅವರು ಹೇಳಿದರು?

ಶ್ರೀ ಯು.ಆರ್. ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ನಾನು ಯೀಲ್ಡ್ ಆಗಲಿಲ್ಲ. ಅವರಿಗೆ ಸ್ವಲ್ಪ ಕುಳಿತುಕೊಳ್ಳುವುದಕ್ಕೆ ಹೇಳಿ ಸರ್. ನೀವು ಸುಮ್ಮನೆ ಕುಳಿತುಕೊಂಡರೆ ಅವರು ಮಾತನಾಡುತ್ತಿರುತ್ತಾರೆ. ಅದಕ್ಕೆ ನಾನು ಏನು ಮಾಡಲಿ?

(ಗೊಂದಲ)

ಉಪಾಧ್ಯಕ್ಷರು: ಯಾರ ಯಾರ ಬಗ್ಗೆ ಹೇಳಿದ್ದಾರೋ ಅದನ್ನೆಲ್ಲಾ ತೆಗೆದುಹಾಕಿ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ನಾನು ಯಾರಿಗೂ ಯೀಲ್ಡ್ ಆಗಿಲಿಲ್ಲ. ಮಧ್ಯದಲ್ಲಿ ಬೇರೆಯವರು ಎದ್ದು ನಿಂತು ಮಾತನಾಡಿದರೆ ತಾವು ಅವರನ್ನು ನಿಗ್ರಹಿಸಬೇಕು. ಇದು ನನ್ನ ಕೆಲಸವಲ್ಲ. ಅದು ನಿಮ್ಮ ಕೆಲಸ, ಅದನ್ನು ನಾನು ಏಕೆ ಮಾಡಲಿ? ಮಧ್ಯದಲ್ಲಿ ಮಾತನಾಡಬೇಡಿ ಎಂದು ಅವರಿಗೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಆ ಈ ಸದನದ ಅಧ್ಯಕ್ಷರ ಪೀಠಕ್ಕೆ ಅಗೌರವ ತರುವಂಥ ರೀತಿಯಲ್ಲಿ ಸದಸ್ಯರು ಮಾತನಾಡುವಂಥದ್ದನ್ನು ತಾವು...

ಉಪಾಧ್ಯಕ್ಷರು: ಆ ರೀತಿಯಲ್ಲಿ. ಕಂಟ್ರೋಲ್‌ನ್ನು ತಾವು ಮಾಡಬೇಕು ಎನ್ನುವಂಥದ್ದನ್ನು ಅವರು ಹೇಳಿದರು. ಮಾತನಾಡುವಾಗ ಮಧ್ಯೆ ಮಧ್ಯೆ ನೀವು ಎದ್ದು ಇಂಟರೆಪ್ರಿಟೇಷನ್ ಮಾಡಬೇಡಿ ಎನ್ನುವ ದಿಶೆಯಲ್ಲಿ ಹೇಳಿದರೇ ವಿನ: ಅದರಲ್ಲಿ ಬೇರೆ ಉದ್ದೇಶ ಇಲ್ಲ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಮೀನುಗಾರಿಕೆ ಉದ್ದಿಮೆ ಇವತ್ತು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ರಾಷ್ಟ್ರದ ಎಲ್ಲಾ ಕರಾವಳಿಯಲ್ಲಿ, ರಾಷ್ಟ್ರದಲ್ಲಿಯ ಒಳನಾಡಿನಲ್ಲಿರತಕ್ಕಂಥ ಮೀನುಗಾರಿಕಾ ಉದ್ದಿಮೆ ಕೂಡ ಇದಕ್ಕೆ ಅವಲಂಬನೆ ಆಗಬೇಕಾದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಂಯುಕ್ತವಾಗಿ, ಏಕರೂಪವಾದಂಥ ಸಾಮೂಹಿಕ ನಿಯಮವನ್ನು, ಸಮಗ್ರವಾದಂಥ ನೀತಿಯನ್ನು ರೂಪಿಸಬೇಕಾಗಿದೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು, ಶ್ರೀ ರಾಜೀವ್‌ಗಾಂಧಿಯವರು ಇರುವಾಗ ಕೇಂದ್ರದಲ್ಲಿ ಒಂದು ಮೀನುಗಾರಿಕಾ ಸಲಹಾ ಸಮಿತಿ ಇತ್ತು. ನಮ್ಮ ರಾಷ್ಟ್ರೀಯ ಮೀನುಗಾರರ ಸಂಘಟನೆಯ ಅಧ್ಯಕ್ಷರಾದಂಥ ಪ್ರೊಫೆಸರ್ ರಾಮಚಂದ್ರ ರಾವ್ ಅವರ ಅಧ್ಯಕ್ಷತೆಯಲ್ಲಿ ಆ ಸಲಹಾ ಸಮಿತಿ ಇತ್ತು. ಎಲ್ಲಾ ರಾಜ್ಯಗಳಲ್ಲಿ ಬರತಕ್ಕಂಥ ಮೀನುಗಾರಿಕಾ ಸಮಸ್ಯೆಗಳು ಏನಿವೆ, ಆ ಸಮಸ್ಯೆಗಳನ್ನು ಅಧ್ಯಯನ ಮಾಡಿ ಆ ಮೂಲಕ ಮೀನುಗಾರಿಕಾ ನೀತಿಗೆ ಆಗಿಂದಾಗ್ಗೆ ಸಲಹೆ ಸೂಚನೆಗಳನ್ನು ಕೊಡಲಿಕ್ಕೆ ಒಂದು ಸಮಿತಿ ಇತ್ತು. ಆ ಸಮಿತಿ ಇತ್ತೀಚೆಗೆ ರದ್ದಾಗಿದೆ. ಆ ಸಮಿತಿಯನ್ನು ಪುನ: ಪ್ರಾರಂಭಿಸಬೇಕೆನ್ನುವ ನಮ್ಮ ಬೇಡಿಕೆ ಇನ್ನೂ ಈಡೇರಲಿಲ್ಲ. ಇವತ್ತು ಈ ಉದ್ದಿಮೆ ಏತಕ್ಕಾಗಿ ಕುಂಠಿತಗೊಳ್ಳುತ್ತಿದೆ? ಇದನ್ನು ಅಧ್ಯಯನ ಮಾಡಬೇಕಾಗಿದೆ. ಕರಾವಳಿಯಲ್ಲಿ ಬರತಕ್ಕಂಥ ಮೀನುಗಾರಿಕೆಯಲ್ಲಿ ಏನು ತೊಡಕುಗಳು ಉಂಟಾಗಿವೆ? ಒಳನಾಡಿನಲ್ಲಿ ಕೆರೆಗಳನ್ನು ಕೊಡತಕ್ಕಂಥ ವ್ಯವಸ್ಥೆ, ಇವತ್ತು ಒಳನಾಡಿನಲ್ಲಿ ಕೆರೆಗಳನ್ನು ಮೀನುಗಾರಿಕೆಗಾಗಿ ಮೀನುಗಾರರ ಕೋ ಆಪರೇಟೀವ್ ಸೊಸೈಟಿ ಮೂಲಕ ಮೀನುಗಾರಿಕೆ ನಡೆಸಲಿಕ್ಕೆ ನಾವು ಕೊಡುತ್ತಿದ್ದೇವೆ. ಇವತ್ತು ಅದನ್ನು ಕೊಡುವಾಗಲೂ ಕೂಡ ಅಲ್ಲಿ ಯಾರು ಮೀನುಗಾರಿಕೆ ಉದ್ದಿಮೆ ಮಾಡುವುದಿಲ್ಲ,

ಮೀನುಗಾರಿಕೆಯನ್ನು ಮಾಡುವುದಿಲ್ಲ, ಅವರೆಲ್ಲ ಸೇರಿ ಸಂಘ ಕಟ್ಟಿಕೊಂಡು ಮೀನುಮರಿ ತಂದದ್ದು, ಹಿಡಿದದ್ದು, ಬಿಟ್ಟದ್ದು ಎಂದು ಹೇಳಿ ಮಾಡಿಕೊಂಡು, ಅಲ್ಲಿ ಎಷ್ಟೋ ಅವ್ಯವಹಾರಗಳು ನಡೆದಂಥ ಉದಾಹರಣೆಗಳು ಇವೆ. ಅದಕ್ಕಾಗಿ ಈ ಕೆರೆಗಳನ್ನು ಮೀನುಗಾರರ ಸಹಕಾರಿ ಸಂಘಗಳಿಗೆ ಕೊಡುವಾಗಲೂ ಕೂಡ ಸಮಗ್ರವಾಗಿ ಅಧ್ಯಯನ ಮಾಡಿ ಅವರ ಹಿನ್ನೆಲೆಯನ್ನು ನೋಡಿ ಅವರಿಗೆ ಕೊಡತಕ್ಕಂಥ ಒಂದು ಅವಕಾಶ ಕಲ್ಪಿಸಬೇಕಾಗಿದೆ. ಇವತ್ತು ಮೀನುಗಾರಿಕೆ ಉದ್ದಿಮೆಯಲ್ಲಿ ಮೀನುಗಾರರು ಬಳಸತಕ್ಕಂಥ, ಯಾಂತ್ರೀಕೃತ ಮೀನುಗಾರಿಕೆಗೆ ಬಳಸುವಂಥ ಯಾಂತ್ರೀಕೃತ ದೋಣಿಗಳು ಏನಿದೆ ಅವುಗಳಿಗೆ ಬಳಸತಕ್ಕಂಥ ಡೀಸೆಲ್‌ಗೆ ಸಬ್ಸಿಡಿ ಕೊಡಬೇಕು, ಮಾರಾಟ ತೆರಿಗೆ ರದ್ದು ಮಾಡಬೇಕೆಂದು ನಾವು ಕಳೆದ 3-4 ವರ್ಷಗಳಿಂದ ಕೇಳುತ್ತಲೇ ಇದ್ದೇವೆ. ಸರ್ಕಾರ ಮಾನ್ಯತೆ ಮಾಡಿದೆ. ನಮ್ಮ ರಾಜ್ಯ ಸರ್ಕಾರ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಕಳೆದ ಮೂರು ವರ್ಷಗಳಿಂದ ರದ್ದು ಮಾಡುತ್ತಾ ಬಂದಿದೆ. ಅದಕ್ಕನುಗುಣವಾಗಿ ಕೇಂದ್ರದಲ್ಲಿ ಅಬಕಾರಿ ಸುಂಕ ಮನ್ನಾ ಮಾಡಬೇಕಾಗಿತ್ತು. ಯಾವ ರಾಜ್ಯಗಳು ಯಾವುದೇ ತೆರಿಗೆಯನ್ನು ಮನ್ನಾ ಮಾಡಿದರೆ ಅದಕ್ಕೆ ಕೇಂದ್ರದ ಅಬಕಾರಿ ಸುಂಕವನ್ನು ಕೂಡ ಮನ್ನಾ ಮಾಡುವಂಥ ಪ್ರಾವಿಜನ್ ಕೇಂದ್ರದಲ್ಲಿ ಇದ್ದಂಥದ್ದು ಇವತ್ತಿಗೂ ಕೂಡ ಅದು ಇಂಪ್ಲಿಮೆಂಟ್ ಆಗಲಿಲ್ಲ. ಅದರಿಂದಾಗಿ ಈ ತೆರಿಗೆ ಮನ್ನಾ ಮಾಡುವುದಕ್ಕಿಂತಲೂ ಈ ಮೀನುಗಾರಿಕಾ ಉತ್ಪನ್ನದಲ್ಲಿ ಕುಂಟಿತವಾಗುವುದಕ್ಕೆ ಏನೂ ಕಾರಣ ಎನ್ನುವುದನ್ನು ಕೂಡ ಅಧ್ಯಯನ ಮಾಡಿ, ವಿಷಯ ಸಮಿತಿ ಏನು ವರದಿ ಕೊಟ್ಟಿದೆ ಅದರ ಬಗ್ಗೆ ಅಧ್ಯಯನ ಮಾಡಬೇಕು. ವಿಷಯ ಸಮಿತಿ ತನ್ನ ವರದಿಯಲ್ಲಿ ಒಂದು ಶಿಫಾರಸ್ಸು ಮಾಡಿದೆ. ಅದೇನೆಂದರೆ- 'ಇಲಾಖಾಧಿಕಾರಿಗಳು ಮತ್ತು ಮೀನುಗಾರರ ಮಧ್ಯೆ ಸಂಪರ್ಕದ ಕೊರತೆ ಇರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಈ ಸಂಪರ್ಕವನ್ನು ಉತ್ತಮಗೊಳಿಸಿ ಇಲಾಖಾ ವಿಸ್ತರಣಾ ಚಟುವಟಿಕೆಯನ್ನು ಬಲಪಡಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ' ಎಂದು ಕೊಟ್ಟಿದ್ದಾರೆ. ಇಲಾಖಾಧಿಕಾರಿಗಳು ಯಾರಿದ್ದಾರೆ ಅವರಿಗೂ ಮೀನುಗಾರರಿಗೂ ಸಂಬಂಧವೇ ಇಲ್ಲ. ಅವರು ಅವರಷ್ಟಕ್ಕೆ, ಇವರು ಇವರಷ್ಟಕ್ಕೆ ಇದ್ದಾರೆ. ಅವರು ಕೊಡುವ ಸ್ಟಾಟಿಸ್ಟಿಕ್ಸ್ ಬೇರೆ, ಇವರು ಕೊಡುವ ಸ್ಟಾಟಿಸ್ಟಿಕ್ಸ್ ಬೇರೆ. ಮೀನುಗಾರರು ಮೀನಿನ ಕ್ಷಾಮ ಇದೆಯೆಂದು ಹೇಳಿದರೆ ಅವರು ಕ್ಷಾಮ ಇಲ್ಲ ಎಂದು ಹೇಳುತ್ತಾರೆ. ಮತ್ತೆ ಕೊನೆಗೆ ಇಲ್ಲಿ ಬಂದು- 'ಇಲ್ಲ, ಕಡಲ ತೀರದಲ್ಲಿ ಕರ್ನಾಟಕದ ಮೀನುಗಾರರು ಹಿಡಿದಂಥ ಮೀನನ್ನು ಕೇರಳದವರಿಗೆ ಮಾರಾಟ ಮಾಡಿ ಬಂದು ಇಲ್ಲಿ ಮೀನು ಇಲ್ಲವೆಂದು ಸುಳ್ಳ ಹೇಳಿಕೆ ಕೊಡುತ್ತಾರೆಂದು' ಸುಳ್ಳನ್ನು ವರದಿ ಮಾಡಿದಂಥ ಉದಾಹರಣೆಗಳು ಸಹ ಇದೆ. ಇದೆಲ್ಲದಕ್ಕಿಂತಲೂ ಮೀನುಗಾರಿಕಾ ಇಲಾಖೆಯ ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳೇ ಇಲ್ಲ. ಎಲ್ಲಾ ಹುದ್ದೆಗಳು ಖಾಲಿಯಾಗಿವೆ. ಈ ಹುದ್ದೆಗಳನ್ನು ಕೂಡಲೇ ಭರ್ತಿಗೊಳಿಸಬೇಕು ಮತ್ತು ಮೀನುಗಾರಿಕಾ ಉದ್ದಿಮೆಯನ್ನು ಇನ್ನಷ್ಟು ಬಲಗೊಳಿಸಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಎನ್ನುವ ಮಾತನ್ನು ಹೇಳಿ ನಾನು ಈ ಬೇಡಿಕೆಯ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಗಿಸಿ ಸರ್ಕಾರ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ ಎಂದು ಹೇಳಿ ಇದಕ್ಕೆ ನಾನು ಬೆಂಬಲ ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಉಪಾಧ್ಯಕ್ಷರೆ, ಈ ಬೇಡಿಕೆಗಳ ಮೇಲೆ ಮಾತನಾಡುವ ಪ್ರಾರಂಭದಲ್ಲಿ ಅಣ್ಣ ಬಸವಣ್ಣನವರು ಹೇಳಿದ ಒಂದು ವಚನವನ್ನು ಹೇಳಿ, ಅದೇ ರೀತಿ ಭಗವದ್ಗೀತೆಯಲ್ಲಿ ಬಂದಂಥ ಒಂದು ಶ್ಲೋಕವನ್ನು ಹೇಳಿ, ಡಿ.ವಿ. ಗುಂಡಪ್ಪನವರು ಒಂದು ಕಡೆ ಈ ಮಂಕುತಿಮ್ಮನ ಕಗ್ಗದಲ್ಲಿ ಒಂದು ಮಾತನ್ನು ಹೇಳಿದ್ದಾರೆ ಈ ಮೂರನ್ನು ಹೇಳಿ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ.

"ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲಬಹುದೇ ನಯ್ಯ ಏರಿ ನೀರೊಂಬೊಡೆ, ಬೇಲಿ ಪೈರು ಮೇಯ್ದೊಡೆ ತಾಯಿಯ ಮೊಲೆಹಾಲು ನಂಜಾಗಿ ಕೊಲುವಡೆ ಲೋಕವಿನ್ನೆತ್ತ ಬದುಕುವುದು ಕೂಡಲ ಸಂಗಮದೇವ"

ಇನ್ನು ಯಾರಿಗೆ ಮೊರೆ ಹೋಗಲಿ ಕೂಡಲ ಸಂಗಮದೇವ ಎಂದು ಬಸವಣ್ಣನವರು ಹೇಳಿದ್ದಾರೆ. ಅದೇ ರೀತಿ ಭಗವದ್ಗೀತೆಯಲ್ಲಿ ಒಂದು ಮಾತು ಬರುತ್ತದೆ.

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ಸಂಭವಾಮಿ ಯುಗೇ ಯುಗೇ"

ಶ್ರೀ ಕೆ. ಗೋಪಾಲ ಪೂಜಾರಿ: ಕಥೆ ಹೇಳಿ ನಿಲ್ಲಿಸಿದರೆ ಆಗುವುದಿಲ್ಲ. ಅದರ ಅರ್ಥ ಹೇಳಿ. ಅರ್ಥ ಹೇಳದಿದ್ದರೆ ಏನು ಪ್ರಯೋಜನ?

ಶ್ರೀ ಹೆಚ್ ಎಸ್. ಶಂಕರಲಿಂಗೇಗೌಡ: ನಾನು ಕೂಡಲ ಸಂಗಮದೇವರ ಬಗ್ಗೆ ಒಂದು ವರ್ಣನೆ ಹೇಳುತ್ತೇನೆ.

"ನೀರಿಗೆ ನೈದಿಲೆ ಶೃಂಗಾರ ನದಿಗೆ ತೆರೆ ಶೃಂಗಾರ, ಹೆಣ್ಣಿಗೆ ಗುಣ ಶೃಂಗಾರ, ಬಾನಿಗೆ ಚಂದ್ರಮ ಶೃಂಗಾರ, ಕೂಡಲ ಸಂಗಮನ ಶರಣಗೆ ನೊಸಳ ವಿಭೂತಿಯೇ ಶೃಂಗಾರ"

ಉಪಾಧ್ಯಕ್ಷರು: ನಾನು ನಿಮ್ಮನ್ನು ಮಾತನಾಡಲು ಕರೆದೇ ಇಲ್ಲವಲ್ಲಾ ಏಕೆ ಮಧ್ಯೆ ಮಾತನಾಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಅರ್ಥ ಹೇಳಿ ಎಂದು ನನ್ನನ್ನು ಕೇಳಿದರು. ಕೊನೆಯಲ್ಲಿ ನನ್ನ ಭಾಷಣ ಮುಗಿಯುವ ಮೊದಲು ಇದರ ಅರ್ಥ ಹೇಳಿ ನಂತರ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದ ಭಗವದ್ಗೀತೆಯ ಶ್ಲೋಕವನ್ನು ನಾನು ಸರಿಯಾಗಿ ಹೇಳುತ್ತೇನೆ. ಆ ಶ್ಲೋಕ ಏನೆಂದರೆ-

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ಪರಿತ್ರಾಣಾಯ ಸಾಧುನಾಂ ವಿನಾಶಾಯ ದುಷ್ಕೃತಂ ಧರ್ಮ ಸಂಸ್ಥಾಪನಾಚಾರ್ಯ ಸಂಭಾವಾಮಿ ಯುಗೇ:ಯುಗೇ: "

**4.30 ಪಿಎಂ**

ಶ್ರೀ ಎಸ್.ಎಸ್. ಪಾಟೀಲ್: ನನಗಿಂತ ಬಹಳ ವಿವರವಾಗಿ ಅವರು ಮುಂಚೆ ಹೋದರು. ನಮ್ಮ ಮಾಜಿ ಸಹಕಾರಿ ಸಂಸ್ಕೃತ ಪಂಡಿತರು. ಅವರು ಅದರ ಅಭ್ಯಾಸವನ್ನೂ ಮಾಡಿದ್ದಾರೆಂಬುದು ನನಗೆ ಗೊತ್ತು.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, Devil quoting scriptures. ಎನ್ನುವ ಹಾಗೆ ...

ಶ್ರೀ ಎಸ್.ಎಸ್. ಪಾಟೀಲ್: ಡಿ.ವಿ.ಜಿ. ಯುವರು ಮಂಕುತಿಮ್ಮನ ಕಗ್ಗದಲ್ಲಿ ಒಂದು ಮಾತನ್ನು ಹೇಳಿದ್ದಾರೆ, "ಸರಕಾರ ಹರಿಗೋಲು, ತೆರೆ ಸುಳಿಗಳತ್ತಿತ್ತ, ಸುರೆ ಕುಡಿದವರು ಕೆಲರು ಹುಟ್ಟು ಹಾಕುವವರು, ಸುರೆ ಕುಡಿದವರು ಕೆಲವು ಹುಟ್ಟು ಹಾಕುವರು, ಬಿರುಗಾಳಿ ಬೀಸುವುದು, ಜನಗತ್ತು ಕುಣಿಯುವುದು, ಉರುಳದಿಯೋ ಅಚ್ಚರಿಯೋ ಮಂಕುತಿಮ್ಮ". ನನ್ನ ಭಾಷಣ ಮುಗಿಸುವ ಮುನ್ನು ಈ ಮೂರನ್ನೂ ಏಕೆ ಹೇಳಿದ್ದೇನೆಂದು ಅರ್ಥ ಹೇಳಿ ಮುಕ್ತಾಯ ಮಾಡುತ್ತೇನೆ. ಗ್ರಾಮೀಣ ಅಭಿವೃದ್ಧಿಯಾಗದ ವಿನಹ ಬಹುಶ: ಈ ದೇಶ, ರಾಜ್ಯ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯೆಂದರೆ, ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಂಥ ತಾಯಿ ಇಲಾಖೆ, ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ, ಸಹಕಾರ ಇಲಾಖೆ, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಈ ಮೂರ್ನಾಲ್ಕು ಇಲಾಖೆಗಳನ್ನು ಬಿಟ್ಟರೆ ಮಿಕ್ಕ ಎಲ್ಲಾ ಇಲಾಖೆಗಳು, ಇಲ್ಲೇನು ಮಂತ್ರಿಗಳು ಕುಳಿತಿದ್ದಾರೆ ಅವರೆಲ್ಲರೂ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಂಡರ್‌ನಲ್ಲಿ ಬರುತ್ತಾರೆ. ನಮ್ಮ ಹೊಸ ಸಚಿವರಾದ ಮಾನ್ಯ ಕೋಳಿವಾಡ್‌ರವರು ನಾನೂ ಗ್ರಾಮೀಣಾಭಿವೃದ್ಧಿ ಮಂತ್ರಿ ಎಂದು ಹೇಳಿದಿರಿ. ನಿಮ್ಮದಂತೂ ಅದರಲ್ಲಿ ಒಂದು ಸಣ್ಣ ತುಂಡು. ಪಾಪ ಬಹಳ ದಿವಸಗಳ ನಂತರ ಮಾನ್ಯ ಮುಖ್ಯಮಂತ್ರಿಗಳು ಹಾವೇರಿ ಜಿಲ್ಲೆಗೆ ಪ್ರಾತಿನಿಧ್ಯವನ್ನು ಕೊಟ್ಟು ಏನೋ ಕ್ಯಾಬಿನೆಟ್ ದರ್ಜೆಯದನ್ನು ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು, ಅದು ಹೋಯಿತು. ಇಲ್ಲದಿದ್ದರೆ ಇಂಡಿಪೆಂಡೆಂಟ್ ಆಗಿ ಒಂದು ಚಲೋ ಖಾತೆಯನ್ನಾದರೂ ಕೊಡುತ್ತಾರೆಂದು ತಿಳಿದುಕೊಂಡಿದ್ದೆವು, ಆದರೆ ಅದೂ ಆಗಲಿಲ್ಲ. ಆಡಳಿತ ಸುಧಾರಣೆ ಬಗ್ಗೆ ಹೇಳುವಾಗ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಪೂರೈಕೆ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಎಸ್.ಎಸ್. ಪಾಟೀಲರಿಗೆ ರೂರಲ್ ಡೆವಲಪ್‌ಮೆಂಟ್ ಇಲಾಖೆಯ ಬಗ್ಗೆಯೂ ಪೂರ್ಣ ಮಾಹಿತಿ ಇಲ್ಲ, ಮತ್ತು ರೂರಲ್ ವಾಟರ್ ಸಪ್ಲೈ ಬಗ್ಗೆಯೂ ಪೂರ್ಣ ಮಾಹಿತಿ ಇಲ್ಲ. ಬಜೆಟ್ ಪ್ರಾವಿಜನ್ ತೆಗೆದು ನೋಡಿ, ಯಾವ್ಯಾವುದಕ್ಕೆ ಎಷ್ಟೆಷ್ಟು ಮಹತ್ವವಿದೆ ಎಂಬುದು ತಮಗೆ ಗೊತ್ತಾಗುತ್ತದೆ ಮತ್ತು ತಾವು ಅಣುಕು ಆಡುವುದರ ಸಲುವಾಗಿ ಹೀಗೆ ಮಾತನಾಡುತ್ತಿದ್ದೀರಿ. ನಮಗೆ ನಮ್ಮ ಸರ್ಕಾರದಲ್ಲಿ ಯಾವುದನ್ನು ಕೊಟ್ಟರೂ ಸಂತೋಷವಾಗಿಯೇ ತೆಗೆದುಕೊಳ್ಳುತ್ತೇವೆ ಅದನ್ನು ಅತ್ಯಂತ ಚಾಕಚಕ್ಯತೆಯಿಂದಲೂ ಮಾಡುತ್ತೇವೆ, ದಕ್ಷತೆಯಿಂದಲೂ ಮಾಡಿ ತೋರಿಸುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ತಾವು ತಮ್ಮ ದಕ್ಷತೆಯನ್ನು ತೋರಿಸಲು ಬರುತ್ತದೆ, ಅದನ್ನು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಹಿಂದಿನ ಮಂತ್ರಿಗಳು ಆ ಇಲಾಖೆಯಲ್ಲಿ ದಕ್ಷತೆಯಿಂದ ಮಾಡಿದ್ದಿಲ್ಲ. ಆ ನೀರಾವರಿಯ ಬಗ್ಗೆ ಸರಿಯಾಗಿ ಕೆಲಸ ಮಾಡಿರಲಿಲ್ಲ, ಈಗ ಅದಕ್ಕೆ ಒಬ್ಬ ಮಂತ್ರಿಯನ್ನು ನೇಮಿಸಿದ್ದಾರೆ. ಆ ಮಾತು ಬೇರೆ. ಆದರೆ ಇಂಥ ಒಂದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹಂತ ಹಂತವಾಗಿ, ವರ್ಷ ವರ್ಷ ಆ ಇಲಾಖೆಗೆ ಬಜೆಟ್‌ನಲ್ಲಿ ಕೊಡತಕ್ಕ ಹಣ ಕಡಿಮೆ ಮಾಡಿಕೊಂಡು ಬರುತ್ತಿದ್ದಾರೆ. ಮಾನ್ಯ ಘೋರ್ಪಡೆಯವರು ಇದನ್ನು

ಕೇಳಬೇಕು. ತಾವು ಕ್ಯಾಬಿನೆಟ್‌ನಲ್ಲಿ ಏನು ಮಾಡಿದ್ದೀರೆಂಬುದು ನಮಗೆ ಗೊತ್ತಾಗುವುದಿಲ್ಲ. ವರ್ಷ ವರ್ಷ ಬಜೆಟ್‌ನಲ್ಲಿ ಹಣ ಕಡಿಮೆಯಾಗುತ್ತಿದೆ. ನಮ್ಮ ಸರ್ಕಾರದಲ್ಲಿ 4.21 ಕೋಟಿ ರೂಪಾಯಿ ಇದ್ದದ್ದು ಇವರು ಬಂದ ತಕ್ಷಣವೆ. 3.94 ಕೋಟಿ ರೂ.ಗಳಿಗೆ ಇಳಿಸಿದ್ದಾರೆ. ಈ ವರ್ಷ ಎಷ್ಟು ಇಟ್ಟಿದ್ದಾರೆಂದರೆ ರೂ.2.74 ಕೋಟಿ ರೂಪಾಯಿ ಮಾತ್ರ ಅಂದಾಗ ಅರ್ಧದಷ್ಟು ಇಳಿಸಿದಿರೆ. ನೀವು ಲೆಕ್ಕ ಹೇಳಬಹುದು ಬಜೆಟ್‌ನಲ್ಲಿ ರೋಕ್ಕ ಹೆಚ್ಚಾಗಿದೆ ಎಂದು ಮೊದಲು ಎಷ್ಟು ಕೋಟಿ ಬಜೆಟ್ ಇತ್ತು ಇವತ್ತು ಎಷ್ಟು ಕೋಟಿ ಬಜೆಟ್ ಆಗಿದೆ? ಆ ಬಜೆಟ್‌ನಲ್ಲಿ ಎಷ್ಟು ಪ್ರಮಾಣವನ್ನು ಗ್ರಾಮೀಣಾಭಿವೃದ್ಧಿಗೆ ತೆಗೆದಿರಿ? ಇದು ನನ್ನ ವಾದ, ದಯವಿಟ್ಟು ಇದನ್ನು ಸರಿಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಈ ರಾಜ್ಯದ ಗ್ರಾಮೀಣಾಭಿವೃದ್ಧಿ ಆಗಲು ಸಾಧ್ಯವೇ ಇಲ್ಲ. ವರ್ಷ ವರ್ಷ ಹಂತ ಹಂತವಾಗಿ ಇದಕ್ಕಿರುವ ಬಜೆಟ್‌ನ್ನು ಕಡಿಮೆ ಮಾಡುತ್ತಿದ್ದೀರಿ. ಯಾರಿಗಾದರೂ ಕೊಡಬೇಕಾಗಿದ್ದರೆ, ಈ ಗ್ರಾಮೀಣಾಭಿವೃದ್ಧಿಯ ಹಣವನ್ನು ಖರ್ಚು ಮಾಡುವುದು. ಇದೇ ರೀತಿ ಬಜೆಟ್‌ನಲ್ಲಿ ಕಟ್ ಮಾಡಿಕೊಂಡು ಬಂದಿದ್ದೀರಿ. ದುರ್ದೈವದಿಂದ ಬಹಳ ಅನ್ಯಾಯವಾಗುತ್ತದೆ. ಇನ್ನು ಇಟ್ಟ ದುಡ್ಡನ್ನಾದರೂ ಸಂಪೂರ್ಣವಾಗಿ ಖರ್ಚು ಮಾಡುತ್ತೀರೇನು? 224 ಕೋಟಿ ರೂ.ಗಳನ್ನೇನು ಇಟ್ಟಿದ್ದೀರಿ ಅದನ್ನಾದರೂ ಸಂಪೂರ್ಣವಾಗಿ ಖರ್ಚು ಮಾಡಿದ್ದೀರಾ? ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿಗೆ ಬರತಕ್ಕ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಿದ್ದೀರಾ? ಹೀಗಾದರೆ ಈ ಗ್ರಾಮೀಣ ಪ್ರದೇಶ ಯಾವಾಗ ಉದ್ಧಾರವಾಗುವುದು? ಯಾರು ಉದ್ಧಾರ ಮಾಡುವವರು? ಎಲ್ಲರೂ ಗ್ರಾಮೀಣಾಭಿವೃದ್ಧಿ, ನಾವೆಲ್ಲರೂ ಅದರ ಪರವಾಗಿದ್ದೇವೆಂದು ವಾದ ಮಾಡುವವರೇ, ಗ್ರಾಮದ ಉದ್ಧಾರವೇ ನಮ್ಮ ಗುರಿಯೆಂದು ಹೇಳುತ್ತಿದ್ದೀರಿ, ಆದರೆ ಬಜೆಟ್‌ನಲ್ಲಿ ಇದಕ್ಕೆ ಹಣವನ್ನು ಕಡಿಮೆ ಮಾಡುತ್ತೀರಿ, ಇಟ್ಟ ದುಡ್ಡನ್ನೂ ಸಂಪೂರ್ಣವಾಗಿ ಖರ್ಚು ಮಾಡುವುದಿಲ್ಲ. ಕೇಂದ್ರ ಗ್ರಾಮೀಣ ಅಭಿವೃದ್ಧಿ ನೆರವು 348 ಕೋಟಿ ರೂಪಾಯಿ ಏನಿದೆ ಅದು ಒಂದು ಕಡೆಯೂ ಬಳಕೆಯಾಗಿಲ್ಲ; ಅದನ್ನು ತೆಗೆದುಕೊಂಡಿಲ್ಲ, ಶ್ರೀ ಡಿ.ಆರ್.ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣಾಭಿವೃದ್ಧಿ ವಿಷಯ ಸಮಿತಿಯವರು ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಅದರಲ್ಲಿ ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಎಂದು ಚೆನ್ನಾಗಿ ಹೇಳಿದ್ದಾರೆ. ಕೇಂದ್ರ ಸಚಿವರಾದಂಥ ಶ್ರೀ ಯತ್ನಾಳ್‌ರವರು ನಮ್ಮ ರಾಜ್ಯಕ್ಕೆ ಇದು ನಾಚಿಕೆಗೇಡು, ಕೇಂದ್ರ ಕೊಟ್ಟಂಥ ಹಣವನ್ನೂ ಬಳಸಿಕೊಳ್ಳಲು ನಮ್ಮ ರಾಜ್ಯಕ್ಕೆ ಆಗಿಲ್ಲವೆಂದು ಅವರು ಎಂ.ಪಿ. ಯಾಗಿದ್ದಾಗಲೇ ಹೇಳಿದ್ದಾರೆ. ಎಸ್.ಸಿ.ಎಸ್.ವೈ, ಲೆಕ್ಕ ಪತ್ರಗಳನ್ನು ನೀಡದ ಒಂಭತ್ತು ರಾಜ್ಯಕ್ಕೆ ಕೇಂದ್ರದ ಅನುದಾನ ಕಡಿತ. ನೀವು ಲೆಕ್ಕವನ್ನೇ ಕೇಂದ್ರಕ್ಕೆ ಕಳುಹಿಸುವುದಿಲ್ಲ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆ? ಮಂತ್ರಿಗಳು ತಾವೇನು ಮಾಡುತ್ತೀರಿ? ಲೆಕ್ಕವನ್ನೇ ಸರಿಯಾಗಿ ಕಳುಹಿಸುವುದಿಲ್ಲ. ಮುಖ್ಯ ಮಂತ್ರಿಯವರ ಜಿಲ್ಲೆ, ನಮ್ಮ ಜಿಲ್ಲೆ ಎಲ್ಲಾದಕ್ಕೂ, ಇ.ಎ.ಎಸ್., ಜೆ.ಆರ್.ವೈ., ಹಿಂದಿನ ವರ್ಷ ಕಟ್ ಆಗಿತ್ತು. ಪುನಃ ಈಗ ಕಟ್ ಆಗುತ್ತಿದೆ. ಹಾಗಾದರೆ ಏನು ಮಾಡುತ್ತೀರಿ? ಅಧಿಕಾರಿ ವಿಕೇಂದ್ರೀಕರಣ ಮಾಡಿದ್ದೀರಿ, ಜಿಲ್ಲಾ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ, ಪಂಚಾಯಿತಿಗೆ ಕೊಟ್ಟಿದ್ದೀರಿ, ಇಲ್ಲಿ ಮೇಲೆ ಮಂತ್ರಿಗಳಿದ್ದೀರಿ, ಹಿಂದೆ ಇಬ್ಬರು ಮಂತ್ರಿಗಳಿದ್ದರು, ಈಗ ಮೂರನೆಯವರೊಬ್ಬರು ಆಗಿದ್ದಾರೆ, ಹಿಂದಿನ ಒಬ್ಬರನ್ನು ತೆಗೆದು ಸಹಕಾರ ಖಾತೆಗೆ ಕಳುಹಿಸಿದಿರಿ. ಆದರೆ ಏನು ಮಾಡಿದಿರಿ? ಈ ಹಣವನ್ನು ಏಕೆ ಖರ್ಚು ಮಾಡಲಿಲ್ಲ, ಇದು ನಾವು ಕೇಳತಕ್ಕ ಪ್ರಶ್ನೆ

ಹಾಗಾದರೆ ಈ ರಾಜ್ಯವನ್ನು ಯಾವಾಗ ಅಭಿವೃದ್ಧಿ ಮಾಡುತ್ತೀರಿ? ಗ್ರಾಮೀಣಾಭಿವೃದ್ಧಿಯನ್ನು ತಮ್ಮ ಕಡೆಯಿಂದ ಮಾಡಲು ಸಾಧ್ಯವೇ? ನಮ್ಮ ವಿಷಯ ಸಮಿತಿಯವರು ಬಹಳ ಚೆನ್ನಾಗಿ ವರದಿ ಕೊಟ್ಟಿದ್ದಾರೆ. ನಿಜವಾಗಿ ಆ ಸಮಿತಿಯ ಅಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ಅಭಿನಂದಿಸುತ್ತೇನೆ. ಗ್ರಾಮೀಣ ಪ್ರದೇಶದ ಜನತೆಯ ಜೀವನ ಸುಧಾರಣೆಯ ಸಲುವಾಗಿ 2002-03ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನ 1150 ಕೋಟಿ ರೂಪಾಯಿ ಇದ್ದು ಇದರಲ್ಲಿ 624 ಕೋಟಿ ರೂಪಾಯಿಗಳನ್ನು ಜಿಲ್ಲಾ ವಲಯಕ್ಕೆ ನೀಡಿದ್ದು ರಾಜ್ಯ ಸರ್ಕಾರದಲ್ಲಿ ಶೇ 24 ರಷ್ಟು ಹಣವನ್ನು ನೀಡಿದ್ದರಿಂದ ಪ್ರಸ್ತುತ 8ರಷ್ಟು ಕಡಿಮೆಯಾಗಿರುವುದನ್ನು ಪರಿಶೀಲಿಸಲಾಯಿತು. ಇನ್ನು ಗ್ರಾಮೀಣ ನೈರ್ಮಲ್ಯ, 2001-2002ನೇ ಸಾಲಿನಲ್ಲಿ ಬಿಡುಗಡೆಯಾದ ಹಣ ಸಂಪೂರ್ಣವಾಗಿ ವೆಚ್ಚವಾಗದಿರುವುದನ್ನು ಸಮಿತಿಯು ಗಮನಿಸಿತು, ಈ ರೀತಿ ಕಡಿಮೆ ಖರ್ಚಾಗಿರುವುದಕ್ಕೆ ವಿವರಣೆಯನ್ನು ಬಯಸಿದಾಗ ಫಲಾನುಭವಿಗಳ ಆಯ್ಕೆಯನ್ನು ತಾಲ್ಲೂಕು ಪಂಚಾಯಿತಿಯವರು ಮಾಡಬೇಕಾಗಿದೆ, ಹಿಂದಿನ ವರ್ಷದವರೆಗೆ ಕೇಂದ್ರ ಸರ್ಕಾರದ ಸಬ್ಸಿಡಿ ಹಣ 1030 ರೂಪಾಯಿಗಳನ್ನು ಕೊಡುತ್ತಿದ್ದು, 2001-2002ನೇ ಸಾಲಿನಿಂದ 375 ರೂ.ಗೆ ಇಳಿಕೆಯಾಗಿದೆ. ಸಾವಿರ ರೂಪಾಯಿಗಳಿಂದ ಮೂನ್ನೂರ ಎಪ್ಪತ್ತೈದಕ್ಕೆ ಇಳಿಕೆಯಾಗಿದೆ. ಹಿರಿಯ ಮಂತ್ರಿಗಳಾದ ಶ್ರೀಮನ್ ಘೋರ್ಪಡೆಯವರು ಇದಕ್ಕೆ ಏನು ಹೇಳುತ್ತಾರೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು): ಉತ್ತರ ಹೇಳುವಾಗ ಇದರ ಬಗ್ಗೆ ಸವಿಸ್ತಾರವಾಗಿ ಹೇಳುತ್ತೇನೆ. ಈಗ ಮಧ್ಯ ಪ್ರವೇಶ ಮಾಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ತಾವು ಇದರ ಬಗ್ಗೆ ಹೇಳಬೇಕಾಗುತ್ತದೆ. ತಾವೊಬ್ಬರು ಹಿರಿಯ ಸಚಿವರಾಗಿದ್ದು ತಮ್ಮಗೆ ಒಬ್ಬರು ಸಹಾಯಕ ಮಂತ್ರಿಗಳಿದ್ದು, ವಿಕೇಂದ್ರೀಕರಣ ವ್ಯವಸ್ಥೆಯಾಗಿರುವಾಗ ಇದರ ಬಗ್ಗೆ ತಾವು ಹೇಳಬೇಕು. ತಮ್ಮ ಬಗ್ಗೆ ನಮ್ಮ ಎರಡು ಮಾತಿಲ್ಲ. ಕೆಲವೇ ಮಂದಿ ಪ್ರಾಮಾಣಿಕ ಮಂತ್ರಿಗಳಲ್ಲಿ ತಾವೂ ಒಬ್ಬರಿದ್ದೀರಿ. ತಾವು ದುಡ್ಡು ಹೊಡೆಯುತ್ತೀರಿ, ಲಂಚಕೋರರು, ಭ್ರಷ್ಟರು ಎಂದು ನಿನ್ನೆ ಏನು ಪ್ರಾರಂಭವಾಯಿತಲ್ಲಾ ಅದರ ಪೈಕಿ ತಾವೇನೂ ಒಬ್ಬರಲ್ಲ. ಅದನ್ನು ವಿರೋಧ ಪಕ್ಷದವರು ಮಾತ್ರವನ್ನು ರಾಜ್ಯದಲ್ಲಿ ಯಾರಾದರೂ ಒಪ್ಪಿಕೊಳ್ಳುತ್ತಾರೆ. ಡಿ.ದೇವರಾಜ ಅರಸುರವರ ಕಾಲದಲ್ಲಿ ಇದ್ದ ಒಬ್ಬರು ಒಳ್ಳೆಯ ಮಂತ್ರಿಗಳು ತಾವು, ಇಲ್ಲವೆಂದು ಹೇಳುವುದಿಲ್ಲ. ಆದರೆ ಕೇವಲ ಪ್ರಾಮಾಣಿಕತೆ ಇದ್ದರೆ ಕೆಲಸವಾಗುವುದಿಲ್ಲ. ಆ ಪ್ರಾಮಾಣಿಕತೆ ಜನರಿಗೆ ಉಪಯೋಗವಾಗಬೇಕಲ್ಲಾ, ಕೆಲಸವಾಗಬೇಕಲ್ಲಾ, ನಮಗೆ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು, ರಾಜ್ಯದ ಅಭಿವೃದ್ಧಿಯಾಗಬೇಕು, ಹಳ್ಳಿಗಳ ಅಭಿವೃದ್ಧಿಯಾಗಬೇಕು, ರಸ್ತೆಗಳಾಗಬೇಕು, ನಿಮ್ಮ ಅಧಿಕಾರಿಗಳ ಮೇಲೆ ಹಿಡಿತ ಇಡಬೇಕಾಗುತ್ತದೆ, ಜಿಲ್ಲಾ ಪಂಚಾಯಿತಿಗಳ ಮೇಲೆ ಹಿಡಿತ ಇಡಬೇಕಾಗುತ್ತದೆ, ಅಧಿಕಾರ ವಿಕೇಂದ್ರೀಕರಣ ಮಾಡಿಕೊಡಿ, ನಾವು ಬೇಡವೆಂದು ಹೇಳುವುದಿಲ್ಲ. ನಿಜವಾಗಿ ನಿಮ್ಮ ಒಬ್ಬ ಮಂತ್ರಿಗಳು ಇದು ಅಧಿಕಾರ ವಿಕೇಂದ್ರೀಕರಣವಲ್ಲ ಭ್ರಷ್ಟಾಚಾರ ವೀಕೇಂದ್ರೀಕರಣವಾಗಿದೆ ಎಂದು ಬಹುಶ : ನಮ್ಮ ಡಾ:ಜಿ.ಪರಮೇಶ್ವರರವರು ಹೇಳಿದ ಹಾಗೆ ಆಯಿತು. ಬೇಕಾದರೆ ಅದನ್ನು ಓದುತ್ತೇನೆ, ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ, ಸುಳ್ಳು ಹೇಳಿಲ್ಲ. ಉದಾ:ಗೆ ಹೇಳುವುದಾದರೆ, ನಮ್ಮ ಊರಿನಲ್ಲಿ ಒಬ್ಬ ಹುಡುಗನಿಗೆ ಕರೆದು ನೀನು ಏನು ಮಾಡುತ್ತಿ ಚುನಾವಣೆಗೆ ನಿಲ್ಲಬೇಡವೆಂದು ಹೇಳಿದರೆ, ಆ ಹುಡುಗ ಇಲ್ಲಾ ಸಾರ್

ನಾನು ಚುನಾವಣೆಗೆ ನಿಲ್ಲುತ್ತೇನೆಂದು ಹೇಳಿದ, ನಾನು ಏಕೆ ಎಂದಾಗ, ಇಲ್ಲಾರಿ ಒಂದು ಐದು ವರ್ಷ ನನ್ನ ಮನೆ ನಡೆಯುತ್ತದೆ ಎಂದು ಹೇಳಿದ. ಹೀಗೆ ಅವರು ಹೇಳಬೇಕೆಂದರೆ ಅಲ್ಲಿ ಏನು ನಡೆದಿರಬಹುದು? ತಾಲ್ಲೂಕು ಪಂಚಾಯಿತಿಯಲ್ಲಿ, ಜಿಲ್ಲಾ ಪಂಚಾಯಿತಿಯಲ್ಲಿ ಏನು ನಡೆದಿರಬಹುದು? "ಇದು ಅಧಿಕಾರದ ವಿಕೇಂದ್ರೀಕರಣ ಅಲ್ಲ. ಭಷ್ಟಾಚಾರದ ವಿಕೇಂದ್ರೀಕರಣ" ಎಂಬ ಮಾತು ಏನಿದೆ ಆ ಮಾತು ಇವತ್ತು ನಿಜವಾದ ಅರ್ಥದಲ್ಲಿ ಜಾರಿಗೆ ಬಂದಿದೆ. ಇದನ್ನು ಹೇಗೆ ಕಟ್ ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿ. ಇಲ್ಲಿ ಏನಾಗಿದೆ ಎಂದರೆ, ನಾವು ಇಲ್ಲಿ ಹೀಗೆಯೇ ಸುಮ್ಮನೆ ಮಾತನಾಡುತ್ತೇವೆ ಶಾಸಕರದ್ದು ಅಲ್ಲಿ ಏನೂ ಇಟ್ಟಿಲ್ಲ. ನಮ್ಮನ್ನು ಏನೂ ಕೇಳುವುದಿಲ್ಲ. ಮೊನ್ನೆ ತಾಲ್ಲೂಕು ಪಂಚಾಯಿತಿಗಳಿಗೆ ಕೂಲಿಗಾಗಿ ಕಾಳು ಬಿಡುಗಡೆ ಮಾಡಿದ್ದಾರೆ, ಅದನ್ನು ಎಲ್ಲರೂ ಹಂಚಿಕೊಂಡು ಬಿಟ್ಟಿದ್ದಾರೆ, 80ರಷ್ಟು ಕೆಲಸ ಮಾಡಿದರೆ ಸಾಕು ನೂರಕ್ಕೆ ನೂರರಷ್ಟು ಆಗುತ್ತದೆ, ಆದರೆ 20ರಷ್ಟು ಕೆಲಸ ಮಾಡಿ ಎಂಭತ್ತರಷ್ಟು ತಿಂದಿದ್ದಾರೆ. ಬೇಕಾದರೆ ಹೋಗಿ ನೋಡಿ, ಸುಮ್ಮನೆ ಖರ್ಚು ಮಾಡಿದ್ದಾರೆಂದು ಹೇಳಿದರೆ ಅದು ಹೇಗೆ? ಶಾಸಕರ ಹಿಡಿತವೇ ಅಲ್ಲಿ ಇಲ್ಲ. ಅಲ್ಲಿ ಶಾಸಕರು ಮಾತ್ರ ಬಯ್ಯಿಸಿಕೊಳ್ಳುತ್ತಾರೆ, ಇದು ಬಹುಶ: ಎಲ್ಲಾ ಶಾಸಕರ ಅನುಭವ ಇದೇ ಆಗಿದೆ, ಪಕ್ಷಾತೀತವಾಗಿ ನಾನು ಹೇಳುವುದಾದರೆ, ಯಾವ ಊರಿಗೆ ಹೋದರೂ ನಮ್ಮನ್ನು ಎಲ್ಲರೂ ಕೇಳುತ್ತಾರೆ. ಏನು ಕೆಲಸ ಮಾಡಿದಿರಿ? ಮನೆಯ ಮುಂದಿನ ಒಂದು ಪಂಪ್ ರಿಪೇರಿ ಮಾಡುವುದಕ್ಕೆ ಆಗಿಲ್ಲ, ಇವರಿಗೆ ರಿಪೇರಿ ಮಾಡುವ ಅಧಿಕಾರವೂ ಇಲ್ಲ. ನಮ್ಮ ಶ್ರೀ ಸಭಾಪತಿ ಯವರು ಬಹಳ ಪ್ರಾಮಾಣಿಕವಾಗಿ ಹೇಳಿದರು, ಮಾನ್ಯ ಯಾವಗಲ್‌ರವರು ಮಂತ್ರಿಯಾಗಿದ್ದಾಗ ಎರಡು ಹಂತದ ವ್ಯವಸ್ಥೆ ಇದ್ದಾಗ ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯಲ್ಲಿ ಶಾಸಕರಿಗೆ ಅಧಿಕಾರ ಇತ್ತು, ಅದೇನೋ ಬದಲಾವಣೆ ಮಾಡುವುದಕ್ಕೆ ಹೋಗಿ ಮಾನ್ಯ ರಾಜೀವ್ ಗಾಂಧಿಯವರು ಮಾಡಿದರು. ವಿಕೇಂದ್ರೀಕರಣದ ದೃಷ್ಟಿಯಿಂದ ಅವರು ಅದನ್ನು ಮಾಡಿದರು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ನಾವು ವಿಚಾರ ಮಾಡಬೇಕಾಗುತ್ತದೆ. ಹಿಂದೆ ಯಾವುದೋ ಒಂದು ಕಾಲಕ್ಕೆ ಆಗಿನ ಪರಿಸ್ಥಿತಿಗನುಗುಣವಾಗಿ ಕಾಯಿದೆಯನ್ನು ಮಾಡಿರಬಹುದು. ಆದರೆ ಜನರು ಬದಲಾವಣೆ ಬಯಸಿದಾಗ ಅದನ್ನು ಬದಲಾವಣೆ ಮಾಡಬೇಕಾಗುತ್ತದೆ, ಇದಕ್ಕೆ ಸಂವಿಧಾನದೊಳಗೆ ತಿದ್ದುಪಡಿ ಯಾಗಬೇಕು ಎಂಬುದು ನಮಗೆ ಗೊತ್ತಾಗುತ್ತದೆ. ಶ್ರೀಮತಿ ಇಂದಿರಾಗಾಂಧಿಯವರು ಇದ್ದಂಥ ಕಾಲದಿಂದಲೂ ಕೂಡ ಕೇಂದ್ರದವರು ಮಾಡಿರುವ ಕ್ರಮಗಳನ್ನು ಹೆಚ್ಚಿಗೆ ಜಾರಿಗೆ ತಂದದ್ದು ಎಂದರೆ ನಮ್ಮ ರಾಜ್ಯವೇ, ಬೇರೆ ರಾಜ್ಯದವರು ಅಷ್ಟೊಂದು ಜಾರಿ ಮಾಡಿಲ್ಲ. ಹಿಂದಿನ ಎಲ್ಲಾ ಸರ್ಕಾರದವರೂ ಕೂಡ ಬಹಳ ಪ್ರಾಮಾಣಿಕವಾಗಿ ಆ ಎಲ್ಲಾ ಕ್ರಮಗಳನ್ನು ಜಾರಿಗೆ ಮಾಡಿಕೊಂಡು ಬಂದಿದ್ದಾರೆ. ಆದರೆ ದುರ್ದೈವದಿಂದ ಇವತ್ತು ಏನಾಗಿದೆ ಎಂದರೆ, ತುಲ್ಲೂಕು ಪಂಚಾಯಿತಿ ವ್ಯವಸ್ಥೆಯಾದ ಮೇಲೆ ಶಾಸಕರು ಸಂಪೂರ್ಣವಾಗಿ ಯಾವ ಅಧಿಕಾರ ಇಲ್ಲದ ಹಾಗೆ ಆಗಿ-ಬಿಟ್ಟಿದ್ದಾರೆ. ಅಲ್ಲಿ ಶಾಸಕರಿಗೆ ಏಕೆ ಬರುತ್ತೀರಿ ಎನ್ನುತ್ತಾರೆ? ಇದನ್ನೂ ಕೂಡ ತಾವು ಗಮನಿಸಬೇಕಾಗುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಇವತ್ತು ಶಾಸಕರ ಪರಿಸ್ಥಿತಿ ಏನಾಗಿದೆ ಎಂದರೆ ಅವರನ್ನು ಏಕೆ ಕೇಳಬೇಕು? ಬಯ್ಯಿಸಿಕೊಳ್ಳಲಿಕ್ಕೆ ಮಾತ್ರ ಶಾಸಕರು ಎನ್ನುವಂತಾಗಿದೆ. ಅವರು ಒಳ್ಳೆಯದು ಮಾಡಿದರೆ ಶಾಸಕರು ಬೇಕಾಗಿಲ್ಲ ಅದನ್ನು ನಾವು ಒಪ್ಪುತ್ತೇವೆ. ನಾವು ಕೇವಲ ಕಾಯಿದೆ ಮಾಡುವುದಕ್ಕಾಗಿಯೇ ಇಲ್ಲ, ನಾವು ಕಾಯಿದೆ ಮಾಡಿದ್ದೇವೆ ಎಂದರೆ ಹಳ್ಳಿಗಳಲ್ಲಿ ಕೇಳುವುದಿಲ್ಲ, ಈ ಎಲ್ಲಾ ಅಂಶಗಳನ್ನೂ ಕೂಡ ತಾವು ವಿಚಾರ

ಮಾಡಬೇಕಾಗುತ್ತದೆ. ಸ್ವಚ್ಛಗ್ರಾಮ ಕಾರ್ಯ ಕ್ರಮಕ್ಕೆ ಹತ್ತು ಕೋಟಿ ರೂಪಾಯಿ ಇದ್ದದ್ದು ಐದು ಕೋಟಿ ರೂಪಾಯಿಗೆ ಇಳಿಸಿದರೆಂದು ಇದರಲ್ಲಿ ಹೇಳಿದ್ದಾರೆ, "ಕಳೆದ ವರ್ಷ ಸ್ವಚ್ಛ ಗ್ರಾಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ರೂ.10 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಈ ಸಾಲಿನಲ್ಲಿ ಈ ಯೋಜನೆಗೆ ಕೇವಲ ರೂ.5 ಕೋಟಿಗೆ ಇಳಿಸಲಾಗಿದ್ದನ್ನು ಗಮನಿಸಿತು" ವಿಷಯ ಸಮಿತಿಯವರು ಇದನ್ನು ಬರೆದಿರುತ್ತಾರೆ. ತಾವು ಇದನ್ನು ನೋಡಿ ನಂತರ ಏನು ಆಗಬೇಕು ಅದನ್ನು ನೋಡೋಣ. "ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು ಇದರಲ್ಲಿ ಈ ಸಾಲಿನಲ್ಲಿ ಪ್ರತ್ಯೇಕವಾಗಿ ಅನುದಾನ ಹಂಚಿಕೆ ಮಾಡದಿರುವುದನ್ನು ಸಮಿತಿಯು ಗಮನಿಸಿತು, ಮತ್ತು ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಅನುದಾನ ಬಹಳಷ್ಟು ಕಡಿಮೆ ಯಾಗಿರುವುದನ್ನು ಸಮಿತಿಯು ಗಮನಿಸಿತು. ಈಗ ಒದಗಿಸುವಂತಹ ಈ ಕಾರ್ಯ ಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ಶೇಕಡ 75ರಷ್ಟು ಹಾಗೂ ರಾಜ್ಯ ಸರ್ಕಾರದಿಂದ ಶೇಕಡ 25ರಷ್ಟು ಹಣ ಬಿಡುಗಡೆಯಾಗುತ್ತಿದ್ದು" ಕೇಂದ್ರದವರು ಶೇಕಡ 75ರಷ್ಟು ಕೊಡುತ್ತಿದ್ದರೆ ರಾಜ್ಯ ಸರ್ಕಾರದವರು ಶೇಕಡ 25 ರಷ್ಟು ಕೊಡಬೇಕಾಗುತ್ತದೆ. "ಗ್ರಾಮೀಣ ಯುವಕ-ಯುವತಿಯರಿಗೆ ತರಬೇತಿ ನೀಡಲು ಹೆಚ್ಚಿನ ಗಮನ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ" ಇಷ್ಟು ಕೊಡುತ್ತಿದ್ದರೂ ಇದರಲ್ಲಿಯೂ ಕಡಿಮೆ ಮಾಡಿದ್ದೀರಿ, ನಮ್ಮ ಬಜೆಟ್‌ನಲ್ಲಿ ನೀವು ಹಣ ಕಡಿಮೆ ಮಾಡುತ್ತೀರಿ, ನೀವು 25 ರಷ್ಟು ಕೊಟ್ಟರೆ ಕೇಂದ್ರದವರು 75 ರಷ್ಟು ಕೊಡುತ್ತಾರೆ, ಇಲ್ಲಿಯೂ ಸಹ ನೀವು ಕಡಿಮೆ ಮಾಡಿದ್ದೀರಿ. "ಸಮಗ್ರ ಬಂಜರು ಭೂಮಿ ಅಭಿವೃದ್ಧಿ" ನೋಡಿ, ಇಲ್ಲಿ ಎಂಥ ದುರ್ದೈವದ ಸಂಗತಿ ಇದೆ, "ಈ ಯೋಜನೆಗಳಿಗೆ ಹಿಂದಿನ ವರ್ಷದ ಆಯವ್ಯಯದಲ್ಲಿ ಬಿಡುಗಡೆಯಾದ ಹಣಕ್ಕಿಂತ ಜಾಸ್ತಿ ಖರ್ಚು ಮಾಡಿರುವುದಕ್ಕೆ ಕಾರಣವನ್ನು ಬಯಸಿದಾಗ, ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಬಿಡುಗಡೆಯಾದ ಆಯವ್ಯಯವು ಆಯಾಯ ವರ್ಷದಲ್ಲಿಯೇ ಲೋಪ (ಲ್ಯಾಪ್ಸ್) ವಾಗದ ಕಾರಣ, ಹಿಂದಿನ ವರ್ಷಗಳಲ್ಲಿ ಉಳಿಕೆಯಾದ ಹಣವನ್ನು ಬಳಸಲಾಗಿದೆಯೆಂದು ಸಮಿತಿಯ ಗಮನಕ್ಕೆ ತರಲಾಯಿತು" ಏಕೆ ಖರ್ಚು ಮಾಡಿದ್ದೀರೆಂದು ಕೇಳಿದರೆ ಹಿಂದೆ ಇವರು ಹಣ ಉಳಿಸಿದ್ದರಂತೆ, ಅಂದರೆ ಆ ವರ್ಷದ್ದು ಆ ವರ್ಷಕ್ಕೆ ಖರ್ಚು ಮಾಡುವ ಹಾಗೆ ಇಲ್ಲ. "ಈ ಶೀರ್ಷಿಕೆ ಅಡಿಯಲ್ಲಿ ಮಂಜೂರಾದ ಯೋಜನೆಗೆ 100ಕ್ಕೆ 75ರಷ್ಟು ಹಣವನ್ನು ಕೇಂದ್ರ ಸರ್ಕಾರದವರು ನೀಡುತ್ತಿರುವುದರಿಂದ, ಹಲವಾರು ಕಡೆ ಯೋಜನೆಗಳನ್ನು ಕಾಲಮಿತಿಯಲ್ಲಿ ಕಾರ್ಯಗತ ಮಾಡದಿರುವುದರ ಬಗ್ಗೆಯೂ ಚರ್ಚಿಸಿತು" ಇದನ್ನು ಕೂಡ ಕಾರ್ಯಗತ ಮಾಡಿಲ್ಲ, ವಿಷಯ ಸಮಿತಿಯವರೇ ಈ ವರದಿ ಕೊಟ್ಟಿದ್ದಾರೆ, ತಾವು ಬೇಕಾದರೆ ಓದಿ ನೋಡಿ. ಇನ್ನು ಬರಗಾಲ ಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ; ಇದರಲ್ಲಿ ಕೂಡ ಕಡಿಮೆ ಯಾಗಿದೆ, ಇದನ್ನು ಪೂರ್ತಿಯಾಗಿ ಹೇಳಿಕೊಂಡು ಹೋದರೆ ಟೈಮ್ ಸಾಕಾಗುವುದಿಲ್ಲ. ಹೀಗಾಗಿ ಇದನ್ನು ಇಷ್ಟಕ್ಕೆ ಹೇಳಿಕೊಂಡು ಹೋಗಿಬಿಡುತ್ತೇನೆ. "ರಾಜ್ಯದಲ್ಲಿ ಈ ಯೋಜನೆಯಡಿಯಲ್ಲಿ ಬಹಳಷ್ಟು ಹಣ ಖರ್ಚಾಗದೆ ಇರುವ ಸಂದರ್ಭ ಇರುವುದರಿಂದ ಮಳೆ ಆಶ್ರಿತ ಕೃಷಿ ಮಾಡುವ ಎಲ್ಲಾ ಪ್ರದೇಶಗಳಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆ ಕೆಲಸಗಳನ್ನು ವ್ಯಾಪಕವಾಗಿ ತೆಗೆದುಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ." ನೋಡಿ, ಇಲ್ಲಿ ಬರಗಾಲ ಪ್ರದೇಶದ ಅಭಿವೃದ್ಧಿ ಯೋಜನೆಗೆ ನೀವು ಹಣ ಖರ್ಚು ಮಾಡಿಲ್ಲ. ಇದನ್ನು ಕೂಡ ಸಮಿತಿಯವರು ಹೇಳುತ್ತಾರೆ. "ಗ್ರಾಮೀಣ ಉದ್ಯೋಗ ಭರವಸೆ ಯೋಜನೆ" ಇಲ್ಲಿ ಕೂಡ

ಇಲ್ಲ, ಕೇಂದ್ರ ಸರ್ಕಾರಕ್ಕೆ ಸರಿಯಾದ ವೇಳೆಗೆ ಪ್ರಸ್ತಾವವನ್ನು ಕಳುಹಿಸುವುದಿಲ್ಲ, ಹೀಗಾಗಿ ಅಲ್ಲಿಂದ ದುಡ್ಡು ಬರುವುದಿಲ್ಲ, ಕೋಟಿಗಟ್ಟಲೆ ಹಣ ನಮ್ಮ ಗದಗ್ ಜಿಲ್ಲೆಯದೇ ಉಳಿದಿದೆ. ಕಳೆದ ಸಲ ನಾನೇ ಗದಗ್ ಜಿಲ್ಲಾ ಪಂಚಾಯತ್‌ನಲ್ಲಿ ತೆಗೆದು ಮಾಡಿದ್ದೆವು. ನಂತರದಲ್ಲಿ "ಇಂದಿರಾ ಆವಾಸ್ ಯೋಜನೆ ಹಾಗೂ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ" ಇದರಲ್ಲಿ ಕೂಡ ಇಲ್ಲ. ಹಾಗಾದರೆ ನೀವು ಯಾವುದನ್ನು ಮಾಡಿದ್ದೀರಿ? ಇದರಲ್ಲಿ ಅವರು ಹೇಳುತ್ತಾರೆ "ಹಿಂದಿನ ವರ್ಷಗಳಲ್ಲಿ ಬಿಡುಗಡೆಯಾದ ಅನುದಾನಕ್ಕಿಂತ ಈ ವರ್ಷದಲ್ಲಿ ಅನುದಾನ ಕಡಿತವಾಗಿರುವುದಕ್ಕೆ ಕಾರಣವನ್ನು ಬಯಸಿತು." ಹಿಂದಿನ ವರ್ಷಕ್ಕಿಂತ ಈ ವರ್ಷ ಏಕೆ ಅನುದಾನ ಕಡಿಮೆಯಾಯಿತು? "ರಾಜ್ಯದಲ್ಲಿಯ 12 ಜಿಲ್ಲೆಗಳಲ್ಲಿ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಒದಗಿಸದೇ ಬಿಡುಗಡೆಯಾದ ಹಣದಲ್ಲಿ ಶೇಕಡ 85ರಷ್ಟು ಖರ್ಚಾಗದೇ ಉಳಿದಿತ್ತು" ಈ ರೀತಿ ನಿಮ್ಮ ಇಲಾಖೆಯ ಅಧಿಕಾರಿಗಳು ವಿಷಯ ಸಮಿತಿಯವರು ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದಾರೆ, ಅಂದರೆ 85ರಷ್ಟು ಹಣ ಖರ್ಚಾಗದೇ ಉಳಿದಿದೆ ಅಂದರೆ ನೀವು ಕೇವಲ 15 ಪರ್ಸೆಂಟ್ ಮಾತ್ರ ಹಣ ಖರ್ಚು ಮಾಡಿದ್ದೀರಿ. ಇದನ್ನು ನೋಡಿದರೆ ಎಷ್ಟು ಗಾಬರಿಯಾಗುತ್ತದೆ. ಕೇಂದ್ರ ಸರ್ಕಾರದವರು ಬಡವರಿಗಾಗಿ ಮನೆ ಕಟ್ಟಿಸಿಕೊಡತಕ್ಕಂಥ ಯೋಜನೆ ಇದಾಗಿದ್ದು, ಇದರಲ್ಲಿ ಹೀಗೆ ಆದರೆ ಹೇಗೆ? ಇದರಲ್ಲಿ ಎಲ್ಲಿ ದೋಷವಿದೆ ಎಂಬುದನ್ನು ನೀವು ಕುಳಿತು ಹುಡುಕಿ. ಫಲಾನುಭವಿಗಳ ಆಯ್ಕೆಯಲ್ಲಿ ಎಲ್ಲಿ ದೋಷವಿದೆ? ಯಾಕೆ ಬರಲಿಲ್ಲ? ಅಧಿಕಾರಿಗಳ ದೋಷವೆ? ಗ್ರಾಮ ಸಭೆಗಳ ದೋಷವೆ? ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವನ್ನು ನೀವು ಖರ್ಚು ಮಾಡದಿದ್ದರೆ ಏನು ಮಾಡಬೇಕು? ಇದು ನನ್ನ ಪ್ರಶ್ನೆ "ಬಿಡುಗಡೆಯಾದ ಹಣದಲ್ಲಿ ಶೇಕಡ 85ರಷ್ಟು ಖರ್ಚಾಗದೇ ಉಳಿದಿದ್ದು, ಕೇಂದ್ರ ಸರ್ಕಾರದವರು ಜಿಲ್ಲಾವಾರು ವಿವರಗಳನ್ನು ಪಡೆದು, ಹಿಂದಿನ ವರ್ಷದಲ್ಲಿ ಕಡಿಮೆ ಖರ್ಚಾಗಿರುವುದನ್ನು ಪರಿಗಣಿಸಿ, ಆಯವ್ಯಯ ಹಂಚಿಕೆಯಲ್ಲಿ ಕಡಿತವಾಗಿದೆಯೆಂದು ಇಲಾಖೆಯವರು ಸಮಿತಿಗೆ ತಿಳಿಸಿದರು" ಇವರು ಸರಿಯಾಗಿ ಖರ್ಚು ಮಾಡಲಿಲ್ಲ, ಅದಕ್ಕೆ ಅವರು ಹಿಂದಿನ ವರ್ಷ ಎಷ್ಟು ಖರ್ಚಾಗಿದೆ ಎಂದು ನೋಡಿಕೊಂಡು ಕಡಿಮೆ ಹಣ ಬಿಡುಗಡೆ ಮಾಡಿದರು. ಅಷ್ಟು ಹಣ ಹೋಯಿತು ಸರಿ ಸುಮಾರು ಏಳೆಂಟುನೂರು ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಬಂದಿಲ್ಲ. ಇದು ನಮ್ಮ ಈ ಇಲಾಖೆಯ ಕಾರ್ಯ ವೈಖರಿ, ಈ ಅಧಿಕಾರ ವಿಕೇಂದ್ರೀಕರಣಗೊಳಿಸಿ ಅಧಿಕಾರವನ್ನು ಜನರಿಗೆ ಹಂಚಿ, ಇದಕ್ಕೊಬ್ಬರು ಮಂತ್ರಿಗಳಿದ್ದು ಇಷ್ಟೆಲ್ಲಾ ಇದ್ದರೂ ಗ್ರಾಮೀಣಾಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಇವರು ಖರ್ಚು ಮಾಡಲಿಕ್ಕೆ ಆಗಿಲ್ಲ, ತಮ್ಮ ಬಜೆಟ್‌ನಲ್ಲಿ ಕೂಡ ವರ್ಷ ವರ್ಷ ಕಡಿಮೆ ಮಾಡಿಕೊಂಡು ಹೋಗಿದ್ದಾರೆ, ಹೀಗಾದರೆ ಹಳ್ಳಿಗಳು ಯಾವಾಗ ಉದ್ಧಾರವಾಗುವುದು? ನೀವು ಯಾವಾಗ ಗ್ರಾಮೀಣಾಭಿವೃದ್ಧಿ ಮಾಡುತ್ತೀರಿ? ಇನ್ನು ಎಷ್ಟು ವರ್ಷ ಬೇಕು? ನಮಗೆ ಸ್ವತಂತ್ರ ಬಂದು ಸುಮಾರು 50-55 ವರ್ಷಗಳಾದವು, ಇನ್ನು ಗ್ರಾಮೀಣ ಅಭಿವೃದ್ಧಿಯಾಗಲಿಲ್ಲ? ನಿಮಗೆ ಅಧಿಕಾರ ಲಭಿಸಿ ಎರಡೂವರೆ ವರ್ಷಗಳಿಂದಲೂ ನಿಮ್ಮ ಬಜೆಟ್‌ನಲ್ಲಿ ಹಣ ಕಡಿಮೆ ಮಾಡಿಕೊಂಡು ಬಂದು, ಕೇಂದ್ರ ಸರ್ಕಾರದಿಂದ ಬರುವ ಹಣದಲ್ಲಿ ಕಡಿಮೆ ಹಣ ಖರ್ಚು ಮಾಡಿ, ಈ ದಿವಸ ಈ ರಾಜ್ಯವನ್ನು ಈ ಒಂದು ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದೀರೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ನಮ್ಮ

ಮಾನ್ಯ ಸಭಾಪತಿಯವರು ಹೇಳಿದ ಮಾತಿನಂತೆ, ರೋಣ ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಹಗರಣ ನಡೆದಿದೆ. ಏನೆಂದರೆ, "ಜಿಲ್ಲಾ ಪಂಚಾಯಿತಿ ಸದಸ್ಯನಿಂದ ಗುತ್ತಿಗೆದಾರರ ಮೇಲೆ ತೀವ್ರ ಹಲ್ಲೆ" "ಕಾಮಗಾರಿ ಗುತ್ತಿಗೆ ವಿವಾದ ಕೊಲೆಗೆ ವಿಫಲ ಯತ್ನ" ಪೊಲೀಸ್ ಕಂಪ್ಲೇಂಟ್ ಆಗಿದೆ, ಇಲ್ಲಿ ಗುತ್ತಿಗೆದಾರರ ವ್ಯವಹಾರ ಏನೇನು ಇತ್ತೋ? ಏನೋ ರೋಣದಲ್ಲಿ ನಡೆದಿರುವ ಬಗ್ಗೆ ತಮಗೂ ಕೂಡ ತಿಳಿದಿರಬಹುದು. ಅಲ್ಲಿ ಜಿಲ್ಲಾ ಪಂಚಾಯತ್ ಮೆಂಬರ್ ನಾಪತ್ತೆಯಾಗಿದ್ದ, ಆ ಊರಿನ ಜನ ಎಲ್ಲರೂ ಅವನನನ್ನು ಹೊಡೆಯಬೇಕೆಂದು ಹೋದರು ಅವನು ತಪ್ಪಿಸಿಕೊಂಡು ಬಿಟ್ಟ. ಇದು ನಡೆಯತಕ್ಕಂಥ ವ್ಯವಸ್ಥೆ. ಅದಕ್ಕಾಗಿ ಇದಕ್ಕೆ ಏನಾದರೊಂದು ಕಡಿವಾಣ ಹಾಕಿ. ಭ್ರಷ್ಟಾಚಾರ ವಿಕೇಂದ್ರೀಕರಣ ಎನ್ನುವ ಮಾತು ಏನಿದೆ ನಿಜವಾಗಿ ನಮ್ಮ ಡಿ. ನಜೀರಸಾಬ್‌ರವರ ಕನಸು ಗ್ರಾಮೀಣಾಭಿವೃದ್ಧಿಯ ಕನಸು ನನಸಾಗಬೇಕಾದರೆ ನಾವು ಎಲ್ಲರೂ ಚಿಂತನೆ ಮಾಡಬೇಕಾಗಿದೆ. ಅವರು ಮಾಡಿ ಹೋಗಿದ್ದಾರೆಂದು ನಾವು ಸುಮ್ಮನೆ ಕುಳಿತರೆ ಆಗುವುದಿಲ್ಲ. ಏನಾದರೂ ಕಾಯಿದೆ ಮಾಡಿದರೆ, ಮುಂದೆ ಅದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ನಾವು ಯಾವ ಯಾವ ರೀತಿಯಾಗಿ ಇದನ್ನು ಸರಿಪಡಿಸಬೇಕೆಂದು ನೋಡಬೇಕಾಗುತ್ತದೆ. ಇವತ್ತಿನದಿವಸ ಎಷ್ಟು ಊರುಗಳಲ್ಲಿ ಗ್ರಾಮಸಭೆಗಳು ನಡೆಯುತ್ತಿದೆ ಎನ್ನತಕ್ಕಂಥದನ್ನು ಪ್ರಾಮಾಣಿಕವಾಗಿ ಹೇಳಿ ತಾವು ಎಷ್ಟೋ ಊರುಗಳಲ್ಲಿ ಇವತ್ತಿನದಿವಸ ಗ್ರಾಮ ಸಭೆಗಳು ನಡೆಯುತ್ತಿಲ್ಲ. ನಾನು ನಮ್ಮ ಕಡೆಯ ವಿಷಯ ಹೇಳುತ್ತಿಲ್ಲ. ಇವತ್ತಿನ ದಿವಸ ಗ್ರಾಮ ಸಭೆ ನಡೆಯುತ್ತಿದೆಯೇ ಅಥವಾ ಇಲ್ಲವೇ ಎನ್ನತಕ್ಕಂಥದನ್ನು ಆಡಳಿತ ಪಕ್ಷದ ಶಾಸಕರು ಅಥವಾ ಮಂತ್ರಿಗಳು ಹೇಳಲಿ? ಎಲ್ಲಿ ನಡೆಯುತ್ತಿದೆ ಎನ್ನತಕ್ಕಂಥದನ್ನು ಹೇಳಿದರೆ ನಾವು ಬೇಕಾದರೆ ಅಲ್ಲಿಗೆ ಹೋಗಿ ನೋಡಬಹುದು. ಬಡವರಿಗೆ ಮನೆಗಳನ್ನು ಕೊಡುವುದಕ್ಕೋಸ್ಕರ ಗ್ರಾಮ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡು ಬರಬೇಕೆಂದು ಹೇಳುತ್ತೇವೆ. ಅದರಂತೆ ಅವರು ಆಯ್ಕೆ ಪಟ್ಟಿಯನ್ನು ನನ್ನ ಹತ್ತಿರ ತಂದಿದ್ದರು. ನಾನು ಅದನ್ನು ನೋಡಿ, ನಾಲ್ಕು ಸಾರಿ ಹೇಳಿ ಕಳುಹಿಸಿದೆ. ಇದರಲ್ಲಿ ಮನೆ ಇಲ್ಲದೇ ಇರತಕ್ಕಂಥವರನ್ನು ಆಯ್ಕೆ ಮಾಡಿಕೊಂಡು ಬರಬೇಕೆಂದು ಹೇಳಿದೆ. ಮೊದಲು ಆಯ್ಕೆ ಮಾಡಿದಂಥ ಪಟ್ಟಿಯಲ್ಲಿ 50 ಜನರ ಹೆಸರು ಇದ್ದರೆ, ಅವರು ಮತ್ತೆ ಬರುವಾಗ ಆಯ್ಕೆ ಮಾಡಿಕೊಂಡು ಬಂದಿರತಕ್ಕಂಥ ಪಟ್ಟಿಯಲ್ಲಿ 100 ಜನರ ಹೆಸರು ಇರುತ್ತದೆ. ಸದರಿ ಕಮಿಟಿಗೆ ನಮ್ಮನ್ನು ಛೇರ್ಮನ್ ಮಾಡಿದ್ದೀರಿ. ಆದರೆ, ಮನೆ ಇದ್ದವರಿಗೆ ಮನೆ ಕೊಟ್ಟಿದ್ದೀರಿ ಮನೆ ಇಲ್ಲದವರಿಗೆ ಮನೆ ಕೊಟ್ಟಿಲ್ಲವೆಂದು ಜನರು ನಮ್ಮ ಹತ್ತಿರ ಬಂದು ಕೂಗಾಡುವುದಕ್ಕೋಸ್ಕರ ಈ ಪೋಸ್ಟ್ ಇದೆಯಷ್ಟೆ. ನಾವು ಈಗ ನೆಪಮಾತ್ರಕ್ಕೆ ಛೇರ್ಮನ್ ಆಗಿದ್ದೇವೆ. ಇವತ್ತಿನದಿವಸ ಫಲಾನುಭವಿಗಳನ್ನು, ಆಯ್ಕೆ ಮಾಡತಕ್ಕಂಥ ಅಧಿಕಾರ ಶಾಸಕರಿಗೆ ಇಲ್ಲ. ಆದ್ದರಿಂದ, ನಮಗೆ ಅಲ್ಲಿ ಏನೂ ಕೆಲಸವಿಲ್ಲದಂತೆ ಮಾಡಿದ್ದೀರಿ. ನಾನು ಚೀಟಿ ಕೊಟ್ಟು ಇಂಥವರಿಗೆ ಕೊಡಿ ಎಂದು ಹೇಳಿದರೂ ಕೂಡ, ಅವರು ಕೊಡತಕ್ಕಂಥ ಪಟ್ಟಿಯಲ್ಲಿ ಮನೆ ಇಲ್ಲದೇ ಇರತಕ್ಕಂಥವರು ಕೇವಲ 10 ಜನ ಇದ್ದರೆ, ಉಳಿದ 90 ಮಂದಿ ಮನೆ ಇದ್ದವರೇ ಇರುತ್ತಾರೆ. ಏಕೆ ಈ ರೀತಿ ಮಾಡಿದ್ದೀರಿ ಎಂದು ಕೇಳಿದರೆ, ನಾವು ನಿಷ್ಠೂರ ಆಗಬೇಕಾಗುತ್ತದೆ. ಆದ್ದರಿಂದ ನಾವೇನು ಮಾಡೋಣವೆಂದು ಪಂಚಾಯತಿಯವರು ಹೇಳುತ್ತಾರೆ. ಈ ರೀತಿಯಾದ ವ್ಯವಸ್ಥೆಯಿಂದ ಬಡವರಿಗೆ ನಿಜವಾಗಿಯೂ ಕೂಡ ಉಪಯೋಗವಾಗುವುದಿಲ್ಲ. ಇದರ ಬಗ್ಗೆ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಎಷ್ಟೋ ಜನ ಬಡವರಿಗೆ ಮನೆ ಸಿಗುತ್ತಿಲ್ಲ. ಇಷ್ಟು ಹೊತ್ತಿಗೆ ಮನೆ ಇಲ್ಲದೇ ಇರತಕ್ಕಂಥವರು ಒಬ್ಬರೂ

ಇರಬಾರದಾಗಿತ್ತು. ಇವತ್ತಿನ ದಿವಸ ನಿಮ್ಮ ಸರ್ಕಾರ ಬಂದಮೇಲೆ ಮನೆ ಕಟ್ಟಿಸಿಕೊಡತಕ್ಕಂಥ ಕಾರ್ಯಕ್ರಮದಲ್ಲಿ ಪ್ರೋಗ್ರೆಸ್ ಮಾಡಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ನೀವು ಏನೂ ಮಾಡಿಲ್ಲವೆಂದು ನಾವು ಎಲ್ಲಾ ಸಂದರ್ಭದಲ್ಲಿ ಬಯ್ಯುವುದಕ್ಕೆ ಹೋಗುವುದಿಲ್ಲ. ಇಷ್ಟೆಲ್ಲಾ ಇದ್ದರೂ ಕೂಡ ಬಡವರಿಗೆ ಮನೆ ಸಿಗದೆ ಅವರು ಇವತ್ತೂ ಕೂಡ ಗುಡಿಸಲಿನಲ್ಲಿದ್ದಾರೆ. ನಿಜವಾದ ಬಡವರಿಗೆ ಮನೆ ಕೊಡೋಣವೆಂದರೆ ಶಾಸಕರಾದ ನಮಗೆ ಯಾವುದೇ ರೀತಿಯ ಅಧಿಕಾರ ಇಲ್ಲ. ಅವರು ತರತಕ್ಕಂಥ ಪಟ್ಟಿಯಲ್ಲಿಯೇ ನಾವು ಆರಿಸಬೇಕಾಗುತ್ತದೆ. ನಮ್ಮ ಹತ್ತಿರ ಬರತಕ್ಕಂಥವೆಲ್ಲಾ ಇದೇ ರೀತಿ ಇರುತ್ತದೆ. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಊರಿನ ಹೆಣ್ಣು ಮಗಳೊಬ್ಬಳು ನನ್ನ ಹತ್ತಿರ ಬಂದು, ಅಪ್ಪಾವರೇ, ನನಗೊಂದು ಮನೆ ಕೊಡಬೇಕೆಂದು ಕೇಳಿದಳು. ದಾರಿಯಲ್ಲಿ ಹೋಗುವಾಗ ನಿನ್ನದು ಸಿಮೆಂಟ್ ಮನೆ ಕಾಣುತ್ತದೆ, ಇಂಥ ಸಂದರ್ಭದಲ್ಲಿ ನಿನಗೆ ಮನೆ ಕೊಟ್ಟರೆ ಊರಿನವರು ಏನು ಹೇಳುತ್ತಾರೆ ಎಂದು ಕೇಳಿದೆ. ಮನೆ ನಮಗೆ ಬೇಡ, ನಮ್ಮ ದನಕರುಗಳನ್ನು ಕಟ್ಟುವುದಕ್ಕೆ ಮನೆ ಬೇಕಾಗಿದೆ ಎಂದು ಕೇಳಿದಳು. ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಹೆಣ್ಣು ಮಕ್ಕಳು ಬಹಳ ಶಾಣೆ ಇರುತ್ತಾರೆ. ಮನೆ ಇದ್ದವರಿಗೆ ಮನೆ ಕೊಡುವುದಕ್ಕೆ ಆಗುವುದಿಲ್ಲವೆಂದು ನಾನು ಆ ಹೆಣ್ಣುಮಗಳಿಗೆ ಹೇಳಿದೆ. ಅಪ್ಪಾವರೇ, ಈಗಾಗಲೇ ಮನೆ ಇದ್ದವರಿಗೆ ಮತ್ತೆ ಮನೆ ಕೊಟ್ಟಿದ್ದೀರಿ, ಬೇಕಾದರೆ ನೀವು ಬಂದು ನೋಡಿ ಎಂದು ಹೇಳಿದಳು. ಕೊನೆಗೆ ಅವಳು ಹೇಳತಕ್ಕಂಥದ್ದು ನಿಜವಾಗಿತ್ತು. ಈ ರೀತಿ ಇರತಕ್ಕಂಥದನ್ನು ಯಾವರೀತಿಯಾಗಿ ತಪ್ಪಿಸಬೇಕು ಎನ್ನತಕ್ಕಂಥದನ್ನು ಹಿರಿಯ ಸಚಿವರಾಗಿರತಕ್ಕಂಥ ನೀವು ಈ ವಿಷಯದ ಬಗ್ಗೆ ಚರ್ಚೆ ಮಾಡಿ ಒಮ್ಮೆ ಫಲಾನುಭವಿಗಳನ್ನು ಆರಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಆಗಾಗ ಸುಮ್ಮನೆ ಫಲಾನುಭವಿಗಳನ್ನು ಆರಿಸತಕ್ಕಂಥದ್ದು ಸರಿಯಲ್ಲ. ಹಿಂದೆ ಒಂದು ಸಾರಿ ಸರಿಯಾಗಿ ಆಯ್ಕೆ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೀರಿ. ಆದರೆ ಅದನ್ನು ಯಾರೂ ನೋಡುವುದಿಲ್ಲವೆಂದು ತೆಗೆದುಬಿಟ್ಟರು.

ಶ್ರೀ ಎಂ. ಮಹದೇವ್: ಮಾನ್ಯ ಸದಸ್ಯರೂ ಕೂಡ ಆಶ್ರಯ ಸಮಿತಿಯಲ್ಲಿ ಛೇರ್ಮನ್ ಆಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ಮತ್ತು ಅವರೂ ಕೂಡ ಸದರಿ ಕಮಿಟಿಗಳಿಗೆ ಛೇರ್ಮನ್ ಆಗಿದ್ದೇವೆ. ಆದರೆ, ಇವತ್ತಿನದಿವಸ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ನಮಗೆ ಅಧಿಕಾರ ಇದೆಯೆ? ಅವರು ಕಳುಹಿಸಿರತಕ್ಕಂಥದರಲ್ಲಿಯೇ ನಾವು ಆರಿಸಬೇಕಾಗುತ್ತದೆ. ಆದರೆ, ನೀವು ಬೇಕಾದವರನ್ನು ಬರೆದುಕೊಂಡಿರಬಹುದು. ನಾನು ಆ ರೀತಿಯಾಗಿ ಮಾಡಿಲ್ಲ.

ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹಿಂದೆಯೂಕೂಡ ಅಧ್ಯಕ್ಷರಾಗಿದ್ದರು. ಹಾಗೆಯೇ ಈಗಲೂ ಕೂಡ ಅಧ್ಯಕ್ಷರಾಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನನ್ನ ವಿಷಯವನ್ನೆ ಹೇಳುತ್ತಿದ್ದೇನೆ. ಯಾವ ಸರ್ಕಾರ ಇತ್ತು ಎಂದು ನಾನು ಟೀಕೆ ಮಾಡುವುದಕ್ಕೆ ಹೋಗುತ್ತಿಲ್ಲ. ಹಾಗೆಯೇ ನಮ್ಮ ಸರ್ಕಾರ ಅಥವಾ ನಿಮ್ಮ ಸರ್ಕಾರ ಇದ್ದಾಗ ಏನು ವಿಚಾರ ಇವತ್ತು ಎಂದು ನಾನು ಹೇಳುತ್ತಿಲ್ಲ.

ಇವತ್ತಿನದಿವಸ ಗ್ರಾಮ ಸಭೆಯಲ್ಲಿರತಕ್ಕಂಥ ವ್ಯವಸ್ಥೆಯ ಬಗ್ಗೆಯೇ ಮಾತನಾಡುತ್ತಿದ್ದೇನೆ. ನಮ್ಮ ಕಾಲದಲ್ಲಿ ಎಲ್ಲವನ್ನೂ ಸರಿಯಾಗಿ ಆರಿಸಿ ಕಳುಹಿಸಿದ್ದೇವೆಂದು ನಾನೇನೂ ಹೇಳಲಿಲ್ಲ.

ಶ್ರೀ ಲಮಾಣಿ ರುದ್ರಪ ಮಾನಪ್ಪ: ಹಿಂದೆ ಆಗಿರತಕ್ಕಂಥ ವಿಷಯದ ಬಗ್ಗೆಯೂ ಕೂಡ ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್: ನಾನು ಮೊದಲು ಮಾನ್ಯ ಖರ್ಗೆಯವರ ಆಡಳಿತ ವಿಷಯದ ಬಗ್ಗೆ ಹೇಳುತ್ತಿಲ್ಲ. ನನ್ನ ಊರಿನಲ್ಲಿ ಆಗಿರತಕ್ಕಂಥ ವಿಷಯದ ಬಗ್ಗೆ ಹೇಳುತ್ತಿದ್ದೇನೆ. ದುಡ್ಡು ಕಡಿಮೆ ಬರುವುದಕ್ಕೆ ಫಲಾನುಭವಿಗಳ ಆಯ್ಕೆಯೇ ಮುಖ್ಯ ಕಾರಣವೆಂದು ಇಲ್ಲಿಯೂ ಕೂಡ ಹೇಳಿದ್ದಾರೆ. ಅಂದರೆ, ಫಲಾನುಭವಿಗಳು ಸಮಯಕ್ಕೆ ಸರಿಯಾಗಿ ಬರದೇ ಇರುವುದರಿಂದ ಕೆಲಸ ಆಗದೇ ಇದ್ದ ಕಾರಣ ದುಡ್ಡು ಕಡಿಮೆ ಬಂತು. ಇವತ್ತಿನ ದಿವಸ ಕೆಲಸಗಳೆಲ್ಲವೂ ಹಾಗೇ ಉಳಿದುಕೊಂಡಿವೆ. ಆದ್ದರಿಂದ, ಫಲಾನುಭವಿಗಳ ಆಯ್ಕೆ ಬಗ್ಗೆ ತಾವು ಕೂಡ ಗಮನಹರಿಸಬೇಕಾಗುತ್ತದೆ. ಕೂಡಲೇ ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಎಲ್ಲಾ ಸರಿಯಾಗುತ್ತದೆ. ಒಮ್ಮೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಅದನ್ನು ಮತ್ತೆ ಪರಿಶೀಲನೆ ಮಾಡಿಸಿ ಅದರ ಉಸ್ತುವಾರಿಯನ್ನು ಶಾಸಕರಿಗೆ ಕೊಡಬೇಕು. ಆದರೆ, ಈಗ ಶಾಸಕರಿಗೆ ಸಂಬಂಧಪಡದ ರೀತಿಯಲ್ಲಿ ಇದೆ. ಶಾಸಕರು ಛೇರ್ಮನ್ ಆಗಿ ಬೈಯ್ಯಿಸಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ನಾವು ಅಲ್ಲಿ ಸುಮ್ಮನೆ ಕುಳಿತುಕೊಂಡು ನಮ್ಮ ಹತ್ತಿರ ಬರತಕ್ಕಂಥ ಲಿಸ್ಟ್‌ನ್ನು ಕಳುಹಿಸಿಕೊಡುವುದನ್ನು ಬಿಟ್ಟರೆ ಹೊಸದಾಗಿ ಒಂದು ಮನೆ ಕೊಡುವುದಕ್ಕೂ ಸಹ ಆಗುವುದಿಲ್ಲ. ಆದ್ದರಿಂದ ಇದನ್ನು ಶಾಸಕರ ಉಸ್ತುವಾರಿಗೆ ಕೊಡಿ. ಹಾಗೆಯೇ ತಹಶೀಲ್ದಾರ್ ಅಥವಾ ಪಂಚಾಯತಿ ಕಾರ್ಯದರ್ಶಿಯವರಿಗೆ ಜವಾಬ್ದಾರಿ ವಹಿಸಿ ಮಾರ್ಗಸೂಚಿ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಸಲಹೆಯಾಗಿದೆ. ಈಗ ಹೊಸದಾಗಿ ಗ್ರಾಮೀಣ ಅಭಿವೃದ್ಧಿ ರಾಜ್ಯ ಸಚಿವರು ಬಂದಿದ್ದೀರಿ. 19ನೇ ತಾರೀಖು ನಮ್ಮನ್ನೆಲ್ಲಾ ಕರೆದು ಕುಡಿಯುವ ನೀರಿನ ವಿಷಯವಾಗಿ ಚರ್ಚೆ ಮಾಡುತ್ತೇನೆಂದು ಹೇಳಿದ್ದೀರಿ. ಇದಕ್ಕೆ ನಾನು ನಿಜವಾಗಿಯೂ ಕೂಡ ಸಂತೋಷ ವ್ಯಕ್ತಪಡಿಸುತ್ತೇನೆ. ಇವತ್ತಿನದಿವಸ ಕುಡಿಯುವ ನೀರಿನ ಯೋಜನೆ ಏನಾಗಿದೆ ಎಂದರೆ, ಪ್ರತಿಯೊಂದಕ್ಕೂ ಸಹ 10 ಪರ್ಸೆಂಟ್ ತುಂಬಬೇಕೆಂದು ಹೇಳಿದ್ದೀರಿ. ಇದನ್ನು ಯಾರು ತುಂಬುವುದಕ್ಕೆ ಸಾಧ್ಯವಿದೆ? ಇವತ್ತಿನದಿವಸ ಮಾನ್ಯ ಮಂತ್ರಿಯವರ ತಾಲ್ಲೂಕಿನಲ್ಲಿ ಮತ್ತು ನನ್ನ ತಾಲ್ಲೂಕಿನಲ್ಲಿ ಮತ್ತು ಅಧ್ಯಕ್ಷರ ತಾಲ್ಲೂಕಿನಲ್ಲಿ 10 ಪರ್ಸೆಂಟ್ ಹಣವನ್ನು ಎಷ್ಟು ಜನ ತುಂಬುವುದಕ್ಕೆ ಸಾಧ್ಯವಾಗುತ್ತದೆ? ಗ್ರಾಮೀಣ ರಾಜೀವ್‌ಗಾಂಧಿ ಟೆಕ್ನಾಲಜಿ ಮೆಷಿನ್ ವತಿಯಿಂದ ನನಗೆ 2.5 ಕೋಟಿ ರೂಪಾಯಿ ಮಂಜೂರು ಆಗಿದೆ. ಇದಕ್ಕೆ 10 ಪರ್ಸೆಂಟ್ ತುಂಬಿ ಎಂದು ಹೇಳಿದರೆ ಬರಗಾಲ ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ 10 ಪರ್ಸೆಂಟ್ ಎಲ್ಲಿಂದ ತುಂಬುವುದಕ್ಕೆ ಆಗುತ್ತದೆ? ಇವತ್ತಿನದಿವಸ ಕುಡಿಯುವುದಕ್ಕೂ ನೀರಿಲ್ಲ ಮತ್ತು ತಿನ್ನುವುದಕ್ಕೆ ಕೂಳು ಇಲ್ಲದಂಥ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಅದಕ್ಕೆ ಹಣ ತುಂಬುವುದಕ್ಕೆ ಆಗುವುದಿಲ್ಲ. ಇದರಿಂದ ಕೆಲಸ ಕೂಡ ಆಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆ ಕೇಳಿದ್ದಕ್ಕೆ ಮುಂದೆ ಸ್ವಲ್ಪ ಬದಲಾವಣೆ ಮಾಡಿದರು. ಇದು ಯಾವರೀತಿಯಾಗಿ ಬದಲಾವಣೆಯಾಗಿದೆ ಎಂದರೆ, ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಆದರೆ, ಸದರಿ ಕೆಲಸ ಮುಗಿಯುವುದರೊಳಗೆ 10 ಪರ್ಸೆಂಟ್ ಹಣವನ್ನು ತುಂಬಬೇಕೆಂದು ಹೇಳಿದ್ದೀರಿ. ಇದನ್ನು ಒಪ್ಪಿಕೊಂಡ ಈಗಲೇ ಬರೆದು ಕೊಡಿ, ಮುಂದೆ ಇರುವವರು ಯಾರೋ ಅಥವಾ ಸಾಯುವವರು ಯಾರೋ ಎಂದು ನಾನು ಜನಗಳಿಗೆ ಹೇಳಿದ್ದೇನೆ. ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, 10 ಪರ್ಸೆಂಟ್ ತುಂಬತಕ್ಕಂಥದ್ದನ್ನು ರದ್ದು ಮಾಡಿ. ನಮ್ಮ ಸರ್ಕಾರ ಇದ್ದಾಗ ಸಂಪೂರ್ಣವಾಗಿ ನಾವೇ ಮಾಡುತ್ತಿದ್ದೆವು. 10 ಪರ್ಸೆಂಟ್ ಕೊಡತಕ್ಕಂಥದ್ದು ನಮ್ಮಲ್ಲಿ ಇರಲಿಲ್ಲ. ನಾವು ಆ ಸಂದರ್ಭದಲ್ಲಿ 6 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಸಂಪೂರ್ಣವಾಗಿ ಸರ್ಕಾರಿ ವೆಚ್ಚದಿಂದಲೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾನ್ಯ ಹೊಸ ಮಂತ್ರಿಯವರೂ ಕೂಡ ಬರಗಾಲ ಪ್ರದೇಶದಿಂದ ಬಂದವರು. ಆದ್ದರಿಂದ ದಯವಿಟ್ಟು ಇದನ್ನು ತೆಗೆದು, ಸಂಪೂರ್ಣವಾದ ಸರ್ಕಾರಿ ವೆಚ್ಚದಲ್ಲಿಯೇ ಮಾಡಿಸಬೇಕು. ಈ ರೀತಿ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಸರ್ಕಾರವೇ ಇದನ್ನು ತುಂಬುತ್ತದೆಯೇ ಎಂದು ನಾನು ಕೇಳಿರತಕ್ಕಂಥ ಪ್ರಶ್ನೆಗೆ, ಪರಿಶೀಲಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇದನ್ನು ಯಾವಾಗ ಪರಿಶೀಲನೆ ಮಾಡುತ್ತೀರಿ? ಈಗ ನೀವು ಮಂಜೂರು ಮಾಡಿ 6 ತಿಂಗಳಾಯಿತು. ಆದರೆ, ಇನ್ನೂ ಕೆಲಸ ಪ್ರಾಂಭವಾಗಿಲ್ಲ. ಏಕೆಂದರೆ, ಅವರಿಗೆ ರೊಕ್ಕ ತುಂಬುದುದಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತಿನ ಸ್ಥಿತಿಯಲ್ಲಿ ಹಣ ತುಂಬುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಇವತ್ತಿನದಿವಸ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ ಮತ್ತು ತಿನ್ನುವುದಕ್ಕೆ ಕೂಳು ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಅಲ್ಲಿ ಯಾವರೀತಿಯಾದ ಪರಿಸ್ಥಿತಿ ಇದೆ ಎನ್ನತಕ್ಕಂಥದನ್ನು ತಾವು ಹೋಗಿ ನೋಡಿ. ಇವತ್ತಿನದಿವಸ ಬಹಳಷ್ಟು ಜನ ಗುಳೆ ಹೋಗಿದ್ದಾರೆ. ನನ್ನ ಮುಂಡರಗಿ ತಾಲ್ಲೂಕಿನಲ್ಲಿ ಸುಮಾರು 40 ಪರ್ಸೆಂಟ್ ನಷ್ಟು ಜನ ಗುಳೆ ಹೋಗಿದ್ದಾರೆ. ರೈತ ಕೆಲಸವನ್ನು ನಂಬಿಕೊಂಡಿರತಕ್ಕಂಥ ಸುಮಾರು 60 ಪರ್ಸೆಂಟ್ ಜನ ಅಲ್ಲಿಯೇ ಇದ್ದಾರೆ. ಈ ವಿಷಯವನ್ನು ಕೃಷಿ ಇಲಾಖೆಯ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಮತ್ತೆ ಪ್ರಸ್ತಾಪ ಮಾಡುತ್ತೇನೆ. ಕುಡಿಯುವ ನೀರಿನ ಯೋಜನೆಯಲ್ಲಿ ಶೇಕಡ 10 ರಷ್ಟು ಕೊಡಬೇಕೆಂದು ತಾವು ರೂಲ್ ಮಾಡಿದ್ದೀರಿ, ಅದನ್ನು ರದ್ದು ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ತಮಗೂ ಸಹ ಪತ್ರ ಬರೆದಿದ್ದೇನೆ. ಹಾಗೆಯೇ ಇದಕ್ಕೆ ಸಂಬಂಧಪಟ್ಟಂತೆ ವಿಧಾನ ಸಭೆಯಲ್ಲಿಯೂ ಕೂಡ ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿದ್ದೀರಿ. ಇದನ್ನು ತೀವ್ರವಾಗಿ ಮಾಡಬೇಕು. ಆರು ತಿಂಗಳು ಅಥವಾ ಒಂದು ವರ್ಷ ಮಾಡುವುದಕ್ಕೆ ಹೋಗಬೇಡಿ. ನೀವು ಇದನ್ನು ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ನಮ್ಮ ಕಡೆ ಫ್ಲೋರೈಡ್ ರೋಗದಿಂದ ಬಹಷ್ಟು ಜನ ಬಳಲುತ್ತಿದ್ದಾರೆ. ಒಂದು ಕಡೆ ಕುಡಿಯುವುದಕ್ಕೆ ನೀರಿಲ್ಲ, ಮತ್ತೊಂದು ಕಡೆ ನಿಮ್ಮ ಕಂಡೀಶನ್ ಬೇರೆ ಇದೆ. ನೀವು ಹಾಕಿರತಕ್ಕಂಥ ಕಂಡೀಶನ್ ಪ್ರಕಾರ ಅವರು ಹಣ ತುಂಬುದಕ್ಕೆ ಆಗುವುದಿಲ್ಲ. ಇದರಿಂದ ಅವರಿಗೆ ಕುಡಿಯುವುದಕ್ಕೆ ನೀರು ಸಿಗದೇ ಇರತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ತಾವು ಹಿರಿಯ ಸಚಿವರು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಸ್ವತಂತ್ರ ನಿರ್ವಹಣೆ ಸಚಿವರಾಗಿ ಅವರು ಸಹ ಆಯ್ಕೆಯಾಗಿದ್ದಾರೆ. ಆದ್ದರಿಂದ ತಾವಿಬ್ಬರು ಮಾನ್ಯ ಮುಖ್ಯಮಂತ್ರಿಯವರ ಮನವೊಲಿಸಿ 10 ಪರ್ಸೆಂಟ್ ಏನು ತುಂಬಬೇಕೆಂದು ಇದೆ, ಅದನ್ನು ಸಂಪೂರ್ಣವಾಗಿ ಸರ್ಕಾರಿ ವೆಚ್ಚದಲ್ಲಿಯೇ

ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಕೇಂದ್ರ ಪುರಸ್ಕೃತ ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಕೇಂದ್ರದಿಂದ ಬಂದಿರತಕ್ಕಂಥ 116 ಕೋಟಿ ರೂಪಾಯಿಗಳಲ್ಲಿ ಕೇವಲ 78 ಕೋಟಿ ರೂಪಾಯಿಗಳನ್ನು ಬಳಸಿಕೊಂಡಿದ್ದೀರಿ. ಈ ವಿಷಯವನ್ನು ವಿಷಯ ಸಮಿತಿ ನೀಡಿರತಕ್ಕಂಥ ವರದಿಯಲ್ಲಿ ಇದೆ. ಇವತ್ತಿನದಿವಸ ಬಂಜರು ಭೂಮಿ ಅಭಿವೃದ್ಧಿ ಮತ್ತು ಬರಗಾಲ ಪ್ರದೇಶದ ಅಭಿವೃದ್ಧಿ ಹಾಗೂ ಇಂದಿರಾ ಆವಾಸ್ ಯೋಜನೆ ಮತ್ತು ಉದ್ಯೋಗ ಭರವಸೆ ಯೋಜನೆಗೆ ಮತ್ತು 10ನೇ ಹಣಕಾಸಿನ ಯೋಜನೆಯಲ್ಲಿಯೂ ಕೂಡ ಸರಿಯಾಗಿ ಕೆಲಸ ಆಗಿಲ್ಲ. ಈ ಎಲ್ಲಾ ವಿಷಯವನ್ನು ವಿಷಯ ಸಮಿತಿ ವರದಿಯಲ್ಲಿ ಹೇಳಿದ್ದಾರೆ. 10ನೇ ಹಣಕಾಸಿನ ಯೋಜನೆಯಲ್ಲಿಯೂ ಕೂಡ ಕುಡಿಯುವ ನೀರಿನ ಯೋಜನೆಗೆ ಸರಿಯಾಗಿ ಹಣ ಬಿಡುಗಡೆಯಾಗಿಲ್ಲ. ಹಾಗಾದರೆ, ನೀವು ಯಾವುದರಲ್ಲಿ ನಿಮ್ಮ ಪ್ರಗತಿ ಆಗಿದೆ? ಕುಡಿಯುವ ನೀರಿನ ಯೋಜನೆಯಲ್ಲಿ ಮತ್ತು ಮನೆ ಕಟ್ಟುವುದರಲ್ಲಿಯೂ ಕೂಡ ಪ್ರಗತಿ ಆಗಿಲ್ಲ. ಈ ರೀತಿಯಾದರೆ ಈ ರಾಜ್ಯದ ಹಳ್ಳಿಗಳು ಯಾವರೀತಿಯಾಗಿ ಉದ್ಧಾರ ಆಗುತ್ತದೆ? ಕಳೆದ ಎರಡು ವರ್ಷಗಳಿಂದ ಪ್ರತಿಯೊಂದು ಬಜೆಟ್‌ನಲ್ಲಿಯೂ ಕೂಡ ಇದಕ್ಕಾಗಿ ದುಡ್ಡು ಕಡಿಮೆ ಮಾಡುತ್ತಿದ್ದೀರಿ. ನೀವು ಇಲ್ಲಿ ದುಡ್ಡು ಕಡಿಮೆ ಮಾಡಿದರೆ, ಕೇಂದ್ರದಿಂದ ಬರತಕ್ಕಂಥ ಕುಡಿಯುವ ನೀರಿನ ಯೋಜನೆಗೂ ಕೂಡ ಕಡಿಮೆ ಹಣ ಬರುತ್ತದೆ. 2.74 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ಕಡೆ ಕೇವಲ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಿ. ಹಲವಾರು ಸಂದರ್ಭದಲ್ಲಿ ನೀವು ಸಿಟ್ಟಿಗೆದ್ದು ರಾಜೀನಾಮೆ ಕೊಟ್ಟಿದ್ದೀರಿ. ಆದರೆ, ಈಗ ಏಕೋ ರಾಜೀನಾಮೆ ಕೊಟ್ಟಿಲ್ಲ. ಹಿಂದೆ ಯಾವುದೋ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ರಾಜೀನಾಮೆ ಕೊಟ್ಟು ಏನಾದರೂ ಮಾಡಿಕೊಳ್ಳಿ ಎಂದು ತಾವು ಹೋಗಿರತಕ್ಕಂಥದ್ದು ನಮಗೆ ಗೊತ್ತಿದೆ. ಹಿಂದಿನ ವರ್ಷ 3.5 ಕೋಟಿ ರೂಪಾಯಿ ಇರತಕ್ಕಂಥದ್ದರಲ್ಲಿ ಕೇವಲ ಮೂರು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಆದರೆ, ಲೆಕ್ಕ ಮಾತ್ರ ಸಮ್ಮನೆ ತೋರಿಸುತ್ತೀರಷ್ಟೆ. ಇವತ್ತಿನದಿವಸ ಗ್ರಾಮೀಣಾಭಿವೃದ್ಧಿ ಇರತಕ್ಕಂಥ ಅನುದಾನದಲ್ಲಿಯೇ ಕಟ್ ಮಾಡತಕ್ಕಂಥ ಪರಿಸ್ಥಿತಿ ನಿಮ್ಮಲ್ಲಿದೆ. ಇನ್ನು ರಸ್ತೆ ಮತ್ತು ಸೇತುವೆ, ಇಲ್ಲಿ ನಮ್ಮ ಲೋಕೋಪಯೋಗಿ ಸಚಿವರು ಇದ್ದಾರೆ. ನಿಮಗೇನು 1ಲಕ್ಷ.ಕಿ.ಮೀ. ರಸ್ತೆ ಇದೆಯೇ?

**5.00 ಪಿಎಂ**

ಮಾನ್ಯ ಸದಸ್ಯರು: ಹಿಂದೆ ರಸ್ತೆ ಹೇಗಿತ್ತೂ, ಈಗಿನ ಸರ್ಕಾರ ಬಂದ ಮೇಲೆ ರಸ್ತೆ ಹೇಗಿದೆ ಎಂಬುದನ್ನು ಬೇಕಾದರೆ ಹೋಗಿ ನೋಡಿ.

ಶ್ರೀ ಎಸ್.ಎಸ್. ಪಾಟೀಲ್: ಅದನ್ನು ಹೇಳುತ್ತೇನೆ ಕೇಳಿ. ಇಲ್ಲಿ ಮಾಗಡಿಯ ಮಾನ್ಯ ಸಚಿವರು ಇದ್ದಾರೆ, ಮಾನ್ಯ ದೇವೇಗೌಡರ ಚುನಾವಣೆಗೆ ಹೋದಾಗ ನಾನು ಅವರಿಗೆ ಹೇಳಿದ್ದೇನೆ. ನಿಮ್ಮ ಕ್ಷೇತ್ರದಲ್ಲಿ ಕೂಡ ನಾನು ಅಡ್ಡಾಡಿ ನೋಡಿದ್ದೇನೆ. ನಾವು ಬಂದ ಮೇಲೆ ಏನಾಗಿದೆ ಎನ್ನುವುದನ್ನು ನಾನು ಚಾಲೆಂಜ್ ಮಾಡಿ ಹೇಳುತ್ತೇನೆ. ನಿಜವಾಗಿಯೂ ಈ ಸಂದರ್ಭದಲ್ಲಿ ನಾವು ಮಾನ್ಯ ದೇವೇಗೌಡರನ್ನು ನೆನೆಸಬೇಕು, ಅವರು ಪ್ರಧಾನ ಮಂತ್ರಿಗಳಾಗಿ ಹೋದ ಮೇಲೆ ನಬಾರ್ಡ್‌ನಿಂದ್ದ ಮೊದಲು ಸಾಲವನ್ನು ಕೊಡುಸುವುದಾಗಿತ್ತು. ಮಾನ್ಯ ದೇವೇಗೌಡರು ನಮ್ಮ ಕಡೆ ನಬಾರ್ಡ್‌ನ್ನು ತಿರುವಿದ್ದರಿಂದ ಇಷ್ಟು ಕೆಲಸಗಳು ಆಗಿವೆ, ನಮ್ಮ ಕಾಲದಲ್ಲಿ ಅಷ್ಟು ಕೆಲಸವಾಗಬೇಕಾದರೆ, ನಬಾರ್ಡ್‌ದಿಂದ ಸಾಲ ತೆಗೆದುಕೊಂಡು ಕೆಲಸವನ್ನು ಮಾಡಿಸಿದ್ದೇವೆ.

ಶ್ರೀ ಡಿ. ಆರ್. ಪಾಟೀಲ್: ಒಂದು ನಿಮಿಷ ದಯವಿಟ್ಟು ಕೇಳಿ, ಆರ್‌ಐಡಿಎಫ್ ಸ್ಟಾರ್ಟ್ ಆಗಿದ್ದು ಮಾನ್ಯ ನರಸಿಂಹರಾಯರು ಪ್ರಧಾನ ಮಂತ್ರಿಗಳು ಇದ್ದ ಕಾಲದಲ್ಲಿ.

ಶ್ರೀ ಎಸ್.ಎಸ್. ಪಾಟೀಲ್: ರೊಕ್ಕ ಬಂದದ್ದು ಮಾನ್ಯ ದೇವೇಗೌಡರ ಕಾಲಕ್ಕೆ. ಒಂದು ದುಡ್ಡಾದರೂ ರಸ್ತೆಗೆ ಬಂದದ್ದು ನೀವು ತೋರಿಸಿ. ಮಾನ್ಯ ನರಸಿಂಹರಾವ್ ಅವರ ಕಾಲದಲ್ಲಿ ನಿಮ್ಮ ಕ್ಷೇತ್ರದ ಒಂದು ಗ್ರಾಮೀಣ ರಸ್ತೆಗಾದರೂ ದುಡ್ಡು ತಂದಿದ್ದರೆ ಹೇಳಿ.

ಶ್ರೀ ಡಿ.ಆರ್. ಪಾಟೀಲ್: ನಾವು ಆಗ ಅಪೋಜಿಷನ್ ಪಾರ್ಟಿಯಲ್ಲಿದ್ದುದರಿಂದ ನಮಗೆ ಆಗ ಹಣವನ್ನು ಕೊಡಲಿಲ್ಲ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್: ಎಲ್ಲರನ್ನು ಹಾರಿಬಡಿದು ಇವತ್ತು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಯಾರಾದರೂ ಕೆಲಸ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಬರುವ ದುಡ್ಡನ್ನು ನಾವು ಹೊಳ್ಳಿ ಬಿಟ್ಟರೆ ಇನ್ನು ನಮ್ಮ ಗತಿ ಏನು? ಜಿಲ್ಲಾ ಪಂಚಾಯಿತಿಯಿಂದ ಬರುವ ಗ್ರಾಮೀಣ ರಸ್ತೆಗಳು ಒಟ್ಟು ಒಂದು ಲಕ್ಷ ಕಿ.ಮೀ.ಇದೆ. ಅದಕ್ಕೆ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಆಗ ನಮ್ಮ ಬಿ.ಆರ್.ಯಾವಗಲ್ ರವರು ಅಧ್ಯಕ್ಷರಾಗಿದ್ದರು, ಅದಕ್ಕೆ ನಾವು ಸದಸ್ಯರಾಗಿದ್ದೆವು. ಆಗ ಸುಮಾರು ಒಂದು ಕಿ.ಮೀ. ರಸ್ತೆಗೆ 8 ಸಾವಿರ ರೂಪಾಯಿಗಳು ಬರುತ್ತಿತ್ತು. ಅಷ್ಟಾದರೂ ಹಣವನ್ನು ಬಿಡುಗಡೆ ಮಾಡಿ ಎಂದು ಹೇಳಿದೆವು, 8 ಸಾವಿರ ರೂ.ಗಳನ್ನು ಬಿಡುಗಡೆ ಮಾಡಲಿಲ್ಲ. ಇವರು ನನಗೆ ಕೊಟ್ಟಿರುವ ಉತ್ತರದಲ್ಲಿ ಹೇಳುತ್ತಾರೆ, ಒಂದು ಕಿ.ಮೀ.ರಸ್ತೆಯ ರಿಪೇರಿಗೆ ಎಷ್ಟು ಹಣವನ್ನು ಒದಗಿಸಬೇಕೆಂದು ನಿಯಮ ಇರುತ್ತದೆ. ಪ್ರತಿ ಕಿ.ಮೀ.ಗೆ ಕೆಳಗಿನಂತೆ ಹಣವನ್ನು ಒದಗಿಸಲು ನಿಯಮ ಇರುತ್ತದೆ. ಡಾಂಬರೀಕರಣ ಮಾಡಿದ ರಸ್ತೆಗೆ ರಿಪೇರಿಗಾಗಿ 19,200 ರೂ.ಗಳು, ಜಿಲ್ಲೆ ರಸ್ತೆಗೆ 13,800-00 ರೂ.ಗಳು ಮಣ್ಣಿನ ರಸ್ತೆಗೆ 9,200-00 ರೂ.ಗಳು, ಇದು ನಿಮ್ಮ ನಿಯಮ ಇರುವುದು. ಆದರೆ ನೀವು ಬಿಡುಗಡೆ ಮಾಡಿದ ಹಣ ಎಷ್ಟು? ಒಂದು ಕಿ.ಮೀ.ಗೆ 3 ಅಥವಾ 4 ಸಾವಿರ ರೂ.ಗಳನ್ನು ಕೊಟ್ಟಿರುತ್ತೀರಿ. ಹಾಗಾದರೆ ಹೇಗೆ ರಿಪೇರಿ ಮಾಡುವುದು? ನಾವು ನಬಾರ್ಡ್‌ದಿಂದ ಹಣವನ್ನು ತೆಗೆದುಕೊಂಡು ರಸ್ತೆಗಳನ್ನು ಮಾಡಿದ್ದೇವೆ, ಅವು ಇವತ್ತು ಗುಂಡಿಗಳು ಬಿದ್ದಿವೆ, ಆ ಜಿಲ್ಲಾಪಂಚಾಯಿತಿ ರಸ್ತೆಗಳು ರಿಪೇರಿಯಾಗುತ್ತಿಲ್ಲ. ಮುಂದೆ ಮತ್ತೆ ಹಾಳಾಗಿ ಹೋಗುತ್ತವೆ. ಇನ್ನು ಎರಡು ವರ್ಷದಲ್ಲಿ ಕಳೆದರೆ ಮತ್ತು ಹೊಸದಾಗಿ ಸಾಲವನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ. ಪ್ರತಿವರ್ಷ ಆ ರಸ್ತೆಗೆ 10-20 ಸಾವಿರ ರೂ.ಗಳನ್ನು ಹಾಕಿಕೊಂಡು ಹೋದರೆ ಹೇಗೆ. ತಾವು ಇದನ್ನು ನೋಡಬೇಕು ಇದರ ಬಗ್ಗೆ ಕಳೆದ ವರ್ಷ ಮಿಟಿಂಗ್ ಮಾಡಿ ನಾವೆಲ್ಲರೂ ನಿಮಗೆ ಹೇಳಿದ್ದೇವೆ. ಪಿಡಬ್ಲ್ಯೂಡಿ ರಸ್ತೆಗಳ ಬಗ್ಗೆ ಎಷ್ಟು ಇದೆ ಎಂದು ಹೇಳುತ್ತೇನೆ. ಲೋಕೋಪಯೋಗಿಯದಕ್ಕೂ ನಿಮ್ಮದಕ್ಕೂ ನೋಡಿದರೆ ಅವರನ್ನು 39 ಸಾವಿರ ರೂ.ಒಂದು ಕಿ.ಮೀ.ಗೆ ಇದೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಪಿಡಬ್ಲ್ಯೂಡಿ ರಸ್ತೆಗಳ ಬಗ್ಗೆ ನೀವು ಹಳೆಯ ಕಾಲದ ಕತೆಯನ್ನು ಹೇಳುತ್ತಿದ್ದೀರಿ. ಮೊನ್ನೆ ಅವರು ಆಂಧ್ರಪ್ರದೇಶಕ್ಕೆ ಒಂದು ಕಮಿಟಿಯನ್ನು ಕಳುಹಿಸಿ ಅದನ್ನು ರಿವೈಸ್ ಮಾಡಿದ್ದಾರೆ, ಅದನ್ನು ತಾವು ನೋಡಿರುವುದಿಲ್ಲ.

ಶ್ರೀ ಧರ್ಮಸಿಂಗ್: (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ರಸ್ತೆಗಳು ಪ್ರಾರಂಭವಾಗಿದ್ದು 1952 ರಿಂದ, 41 ಸಾವಿರ ಕಿ.ಮೀ. ರಸ್ತೆ ನಮ್ಮ ಇಲಾಖೆಗೆ ಬರುತ್ತದೆ. ಮೇಂಟೆನೆನ್ಸ್‌ಗೆ ಇಲ್ಲಿಯವರೆಗೆ ಇಟ್ಟಿರುವ ಹಣ 20 ಸಾವಿರ ರೂ.ಗಳು ಮಾತ್ರ. ಮಾನ್ಯ ವೀರೇಂದ್ರ ಪಾಟೀಲರು ಲೋಕೋಪಯೋಗಿ ಸಚಿವರಾದ ಕಾಲದಲ್ಲಿಯೂ ಕೂಡ ಅಷ್ಟೆ ಇತ್ತು. ನಾನು ಬಂದಮೇಲೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಕ್ಕೆ ಚೀಫ್ ಇಂಜನಿಯರ್ ಮಟ್ಟದಲ್ಲಿ ಒಂದು ಟೀಮ್‌ನ್ನು ಕಳುಹಿಸಿಕೊಟ್ಟೆ, ಅಲ್ಲಿ ಮೇಂಟೆನೆನ್ಸ್‌ಗೆ ಒಂದು ಕಿ.ಮೀ.ರಸ್ತೆಗೆ 1,25,000-00 ರೂ.ಗಳನ್ನು ಕೊಡುತ್ತಾರೆ. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿ ರಸ್ತೆಗೆ 50 ಎಂಎಂ ಡಾಂಬರೀಕರಣ ಹಾಕುವುದು. ಮಹಾರಾಷ್ಟ್ರದಿಂದ ನಾವು ಕರ್ನಾಟಕ್ಕೆ ಬಂದಾಗ ನಮ್ಮ ರಸ್ತೆಗೂ ಅವರ ರಸ್ತೆಗೂ ವ್ಯತ್ಯಾಸ ಹೇಳುತ್ತೇವೆ. ನನಗೆ ಮೊದಲಿನಿಂದಲೂ ಇಲ್ಲಿಯವರೆಗೂ ಗೊತ್ತಾಗುತ್ತಿಲ್ಲ. ಡಾಂಬರೀಕರಣ ಮಾಡುವ ರಸ್ತೆಯ ಥಿಕ್‌ನೆಸ್ ಎಷ್ಟು ಇರಬೇಕು, ಮೇಂಟೆನೆನ್ಸ್ ಇಲ್ಲಿಯವರೆಗೆ ಏನು ಮಾಡಬೇಕೆಂದು ಇರಲಿಲ್ಲ. ನಾವು ಬಂದಮೇಲೆ 1999 ರಿಂದ ಒಂದು ಕಿ.ಮೀ.ಗೆ 40 ಸಾವಿರ ರೂ.ಗಳನ್ನು ಮಾಡುತ್ತಿದ್ದೇವೆ, ಅದನ್ನು ಕೂಡ ಸಂಪನ್ಮೂಲ ನೋಡಿಕೊಂಡು ಮಾಡಬೇಕಾಗುತ್ತದೆ. ಮೊದಲನೆಯ ಸಲ ನಾವು ಲೋಕೋಪಯೋಗಿ ಇಲಾಖೆಯಲ್ಲಿ 20 ಸಾವಿರದಿಂದ 40 ಸಾವಿರ ರೂ.ಗಳಿಗೆ ಇನ್‌ಕ್ರೀಸ್ ಮಾಡುತ್ತಿದ್ದೇವೆ. ಇವತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿಯೂ ಕೂಡ ಮಾಡುತ್ತಿದ್ದೇವೆ. ನೀವು ನಬಾರ್ಡ್ ಬಗ್ಗೆ ಹೇಳಿದಿರಿ, ಅದು ಸ್ಟಾರ್ಟ್ ಆಗಿದ್ದು 1996ರಲ್ಲಿ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಬಾರ್ಡ್ 2 ರಿಂದ ನಬಾರ್ಡ್ 4 ರವರೆಗೆ ಎಷ್ಟು ಕಿ.ಮೀ. ರಸ್ತೆಯಾಗಿದೆ. ನಬಾರ್ಡ್ 5,6,7, ರಲ್ಲಿ ಎಷ್ಟು ರೋಡ್ ಮಾಡಿದ್ದೇವೆ ಎನ್ನುವುದರ ಬಗ್ಗೆ ಐವಿಲ್ ಗಿವ್ ದಿ ಬ್ರೇಕ್ ಅಪ್. ನಾನು 4 ವರ್ಷದಲ್ಲಿ ಆಗಿದ್ದು ಹಾಗೂ ಮೂರು ವರ್ಷದಲ್ಲಿ ಆಗಿರುವ ಬಗ್ಗೆ ಹೋಲಿಕೆಯನ್ನು ಕೊಡುತ್ತೇನೆ. ಮೊದಲು ನಬಾರ್ಡ್ 2 ರಿಂದ 4 ರವರೆಗೆ we have spent Rs.363 crores in Karnataka. There is no visibility at all. ಏಕೆ ಇಲ್ಲವೆಂದರೆ, ನಬಾರ್ಡ್ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಹಾಟ್‌ಮಿಕ್ಸ್ ಪ್ಲಾಂಟ್‌ಗ್ಸ್ ಮತ್ತು ಪೇವರ್ಸ್ ಮಾಡತಕ್ಕಂಥದ್ದರಲ್ಲಿ, ನಬಾರ್ಡ್‌ನ ಮೇಲೆ ಬೈಂಡಿಂಗ್ ಇಲ್ಲ. In Karnataka we have introduced that. The Chairman, Mr. Nanda has appreciated the Karnataka Government's stand.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಬಾರ್ಡ್ ಪ್ರಾರಂಭವಾಗಿದ್ದು 1996ರಲ್ಲಿ ಎಂದು ತಾವು ಮಾನ್ಯ ಡಿ.ಆರ್. ಪಾಟೀಲರವರ ಪ್ರಶ್ನೆಗೆ ಉತ್ತರವನ್ನು ಹೇಳಿದಂತಾಯಿತು.

ಶ್ರೀ ಡಿ.ಆರ್. ಪಾಟೀಲ್: 1996ರಲ್ಲಿ ಮಾನ್ಯ ಪಿ.ವಿ.ನರಸಿಂಹರಾವ್‌ರವರು ಪ್ರಧಾನ ಮಂತ್ರಿಯಾಗಿದ್ದಾಗ, ಪ್ರಧಾನ ಮಂತ್ರಿ ನಿಮ್ಮವರು ಆಗಿದ್ದು 1996ರ ಜೂನ್ ನಂತರದಲ್ಲಿ, ಆ ಸ್ಕೀಂ ತಂದವರು ನಾವು. ನೀವು ಕ್ರೆಡಿಟ್ ಕೊಡಿ.

ಶ್ರೀ ಧರ್ಮಸಿಂಗ್: ಅದು ಕೇಂದ್ರ ಸರ್ಕಾರದ ಹಣ. ನಬಾರ್ಡ್ ನಾವು ಒಂದು ಬ್ಯಾಂಕ್ ಇದೆ. ಅಲ್ಲಿಂದ ನಾವು ಸಾಲವನ್ನು ತರುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದು ನನಗೂ ಗೊತ್ತಿದೆ. ಅವರು ಪುಕ್ಕಟೆಯಾಗಿ ಕೊಟ್ಟಿದ್ದಾರೆಂದು ನಾನು ಹೇಳುವುದಿಲ್ಲ. ಸಾಲವನ್ನು ತೆಗೆದುಕೊಂಡು ಬಂದು ರಸ್ತೆಯನ್ನು ಮಾಡಿರುವುದು. ಮಾನ್ಯ ಸಚಿವರು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದ ಲೋಕೋಪಯೋಗಿ ರಸ್ತೆಯ ಉದ್ದ ಎಷ್ಟು ಎಂದು ಕೇಳಿದ್ದೇನೆ, ಅದರ ಬಗ್ಗೆ ಹೇಳಿದ್ದಾರೆ. ನಿಮ್ಮ ಲೋಕೋಪಯೋಗಿ ರಸ್ತೆ ಇರುವುದು 38,76,000 ಕಿ.ಮೀ.ಇದೆ. ಗ್ರಾಮೀಣ ರಸ್ತೆ ಇರುವುದು ಒಂದು ಲಕ್ಷ ಕಿ.ಮೀ. ಅದಕ್ಕೆ 80 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ರಸ್ತೆಯ ದುರಸ್ತಿಗೆ ಪ್ರತಿ ಕಿ.ಮೀ.ಗೆ ಎಷ್ಟು ಹಣವನ್ನು ಒದಗಿಸಲಾಗಿದೆ ಮತ್ತು ಸಧ್ಯಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ಲೆಕ್ಕಶೀರ್ಷಿಕ್ಕೆ 3054ರ ನಡುವೆ, ಸೇತುವೆ ಅಡಿಯಲ್ಲಿ 2002-03ನೇ ಸಾಲಿಗೆ ಪ್ರತಿ ಕಿ.ಮೀ.ಗೆ 35 ಸಾವಿರ ರೂ.ಗಳಂತೆ ಮುಖ್ಯ ಇಂಜಿನಿಯರ್ (ದಕ್ಷಿಣ ಮತ್ತು ಉತ್ತರ) ಇವರಿಗೆ ಹಣ ಬಿಡುಗಡೆ ಮಾಡಿದ್ದೇವೆಂದು ನನಗೆ ಉತ್ತರವನ್ನು ಕೊಟ್ಟಿರುತ್ತೀರಿ. ಇಲ್ಲವೆಂದು ನೀವು ಈಗ ಹೇಳುತ್ತೀರಿ. ಹಾಗಾದರೆ ಆ ಹಣ ಎಲ್ಲಿ ಹೋಯಿತು, ಪಿಡಬ್ಲ್ಯೂಡಿ ರಸ್ತೆಗಳು ಹಾಗೇ ಗುಂಡಿ ಬಿದ್ದು ಹೋಗಿವೆ. ಅವರು 3 ಸಾವಿರದಂತೆ ರೇಟ್ ಹಾಕಿದ್ದಾರೆ, ನೀವು ಪ್ರತಿ ಕಿ.ಮೀ.ಗೆ 35 ಸಾವಿರ ರೂ.ಗಳಂತೆ ಬಿಡುಗಡೆ ಮಾಡಿರುವ ಹಣ ಎಲ್ಲಿ ಹೋಯಿತು? ಹಾಗಾದರೆ ಇದು ಯಾರ ಜೇಬಿಗೆ ಹೋಯಿತು. ನಮ್ಮ ಕ್ಷೇತ್ರದಲ್ಲಿ ಇರುವ ಸ್ವಲ್ಪ ಲೋಕೋಪಯೋಗಿ ರಸ್ತೆಗಳಲ್ಲಿ ಇನ್ನು ಗುಂಡಿಗಳು ಹಾಗೇ ಇವೆ. ಅವಕ್ಕೆ ಲೋಕೋಪಯೋಗಿ ಇಲಾಖೆಯವರು ಎಲ್ಲಿ ದುಡ್ಡು ಹಾಕಿದರೋ ಏನು ಮಾಡಿದರೋ ಎಲ್ಲಿ ತಿನ್ನುತ್ತಾರೋ ಗೊತ್ತಿಲ್ಲ. ನಮ್ಮ ಜಿಲ್ಲಾ ಪಂಚಾಯಿತಿ ಇಂಜಿನಿಯರ್ ಹೇಳಿದರು, ಒಂದು ಕಿ.ಮೀ.ಗೆ 8 ಸಾವಿರ ರೂ.ಗಳಂತೆ ಬಿಡುಗಡೆ ಮಾಡಿಸಿ, ರಸ್ತೆಗಳು ಕೆಟ್ಟರೆ ಅವುಗಳನ್ನು ನಾವು ನೋಡಿಕೊಳ್ಳುತ್ತೇವೆಂದು ಹೇಳಿದರು. ನೀವು ಹಣವನ್ನು ಬಿಡುಗಡೆ ಮಾಡಲಿಲ್ಲ. ನೀವು ಸುಮ್ಮನೆ ಕ್ಯಾಬಿನೆಟ್‌ದಲ್ಲಿ ಕುಳಿತುಕೊಳ್ಳುತ್ತೀರಿ. ಇರುವ 80 ಕೋಟಿ ರೂ.ಗಳನ್ನು ಏಕೆ ಬಿಡುಗಡೆ ಮಾಡಿಸಲಿಲ್ಲ. ಒಂದುಕಡೆ ಒಂದು ಕಿ.ಮೀ.ರಸ್ತೆಗೆ 35 ಸಾವಿರ ರೂ.ಗಳನ್ನು ಇನ್ನೊಂದು ಕಡೆ 3 ರಿಂದ 4 ಸಾವಿರ ರೂ.ಗಳನ್ನು ಕೊಟ್ಟರೆ ರಸ್ತೆಗಳು ಯಾವಾಗ ರಿಪೇರಿಯಾಗುತ್ತವೆ? ಹಣ ಕೊಡುವುದೇ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಜಿಲ್ಲಾ ಪಂಚಾಯಿತಿಯಲ್ಲಿ ಆ ವ್ಯವಸ್ಥೆ ಇಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು, ರೋಡ್ ಮೇಂಟೆನೆನ್ಸ್ ಎಂದು ಜಿಲ್ಲಾ ಪಂಚಾಯಿತಿಯಲ್ಲಿ ಇಲ್ಲವೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಮಾನ್ಯ ಸಚಿವರು ಇದನ್ನು ನೋಡಿಸಬೇಕು. ಲೋಕೋಪಯೋಗಿ ಇಲಾಖೆಗೆ ಸೇರಿದ 50 ಕಿ.ಮೀ. ರಸ್ತೆಯಲ್ಲಿ 50 ಕಿ.ಮೀ. ರಸ್ತೆ ನನ್ನ ಕ್ಷೇತ್ರದಲ್ಲಿ ಬಂದರೆ, ಮಾನ್ಯ ಉಪಾಧ್ಯಕ್ಷರೆ ನಿಮ್ಮ ಕ್ಷೇತ್ರದಲ್ಲಿ 450 ಕಿ.ಮೀ. ಬರುತ್ತದೆ. ನಿಮ್ಮದು ರಿಪೇರಿಯಾದರೆ ಮುಗಿದೆ ಹೋಯಿತು. ಜಿಲ್ಲಾ ಪಂಚಾಯಿತಿಯಿಂದ ಪಿಡಬ್ಲ್ಯೂಡಿ ಇಲಾಖೆಗೆ ಕೊಡಿ, ನಮ್ಮ ಪರಿಸ್ಥಿತಿ ಗುಡ್ಡುಗಾಡಿನಲ್ಲಿ ಇದ್ದಂತಾಗಿದೆ. ನಾವು ನಬಾರ್ಡ್‌ದಿಂದ ರಸ್ತೆಗಳನ್ನು ಮಾಡಿಸಿದೆವು, ಈಗ ಅವು ಗುಂಡಿ ಬಿದ್ದು ಹೋಗಿವೆ. ಮುಂದೆ ಜನ ಹೇಗೆ ಅಡ್ಡಾಡಬೇಕು. ನಾವು ಕೇಳತಕ್ಕಂಥ ಪ್ರಶ್ನೆ ಇದಾಗಿದೆ. ತಾವು ಹೇಳಿದಿರಿ ಸಾಲ ಬಹಳ ಮಾಡಿದ್ದೇವೆ ಎಂದು, ನಾನು ನಿಮಗೆ ಬಂದು 10 ಸಲ ಹೇಳಿದೆ, 1 ಕಿ.ಮೀ.ರಸ್ತೆ ಕೂಡ

ಕೊಡಲಿಲ್ಲ. ನಬಾರ್ಡ್‌ಗೆ ಹೋಗಿದ್ದನ್ನು ತಡೆಹಿಡಿದಿರಿ, ನನ್ನ ಕ್ಷೇತ್ರ ಬಹಳ ಹಿಂದುಳಿದದ್ದು ಎಂದು ಹೇಳಿದೆ, ಆದರೂ ಒಂದು ಕಿ.ಮೀ. ರಸ್ತೆ ಕೂಡ ಕೊಡಲಿಲ್ಲ. ಯಾರ ಕ್ಷೇತ್ರಕ್ಕಾದರೂ ಕೊಡಿ, ಆದರಿಂದ ನಮ್ಮ ರಾಜ್ಯದ ಅಭಿವೃದ್ಧಿಯೇ ಆಗುತ್ತದೆ, ತಮಗೆ ದೇವರು ದೊಡ್ಡ ಬುದ್ಧಿ ಕೊಟ್ಟಾಗ ನನ್ನ ಕ್ಷೇತ್ರಕ್ಕೆ ಕೊಡಿ. ನಿಮಗೆ ಎಲ್ಲರಿಗೂ ನಾನು ಒಂದು ಲೆಕ್ಕವನ್ನು ಕೊಟ್ಟಿದ್ದೇನೆ.: ಶ್ರೀ ಡಿ.ಆರ್. ಪಾಟೀಲರವರ ಕ್ಷೇತ್ರದಲ್ಲಿ ಬರುವ ರಸ್ತೆಗಳ ಶ್ರೀ ಯಾವಾಗಲ್ ಹಾಗೂ ನನ್ನ ಕ್ಷೇತ್ರಕ್ಕೆ ಬಂದಿದೆ, ಇರುವ 200 ಕಿ.ಮೀ. ರಸ್ತೆಗೆ ಎಲ್ಲಾ ಹಣವನ್ನು ಅವರೇ ತೆಗೆದುಕೊಳ್ಳುತ್ತಾರೆ. ನಮಗೂ ಕೊಟ್ಟು ನಿಮಗೂ ಕೊಡಲಿ, ಅದಕ್ಕಾಗಿ : ಶ್ರೀ ಧರ್ಮಸಿಂಗ್‌ರವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ ಎಂದು ಹೇಳಿದೆ. ದಯಮಾಡಿ ನನಗೆ ಇನ್ನು ಕಾಲಾವಕಾಶ ಬೇಕು, ಇದು ಎಲ್ಲರಿಗೂ ಸಂಬಂಧಪಟ್ಟದ್ದಾಗಿದೆ, ನನ್ನ ಒಬ್ಬನ ಸಲುವಾಗಿ ಮಾತನಾಡುತ್ತಿಲ್ಲ. ನಾನು ಓದಿಕೊಂಡು ಅಭ್ಯಾಸ ಮಾಡಿ ಕೊಂಡು ಬಂದಿದ್ದೇನೆ, ನಾನು ಬರೀ ಆರ್‌ಡಿಪಿಆರ್ ಮೇಲೆ ಮಾತನಾಡಿ ಎಂದರೆ ಮೂರು ದಿವಸಗಳ ಕಾಲ ಮಾತನಾಡುತ್ತೇನೆ. ಇದರಲ್ಲಿ ಅಷ್ಟು ಅನ್ಯಯವಾಗಿದೆ, ಅಷ್ಟೊಂದು ಹಣ ಸೋರಿ ಹೋಗಿದೆ. ಜಿಲ್ಲಾ ಪಂಚಾಯಿತಿಯಲ್ಲಿ ಕೆಲಸಗಳು ಆಗಿದೆ, ತಮಗೆ ಹೇಳಿದಂತೆ, ರೋಣದಲ್ಲಿ ಹೊಡೆದಾಟ, ಮರ್ಡ್‌ರ್ ಕೂಡ ಆಗಿದೆ, ಅದರ ಬಗ್ಗೆ ತಮಗೂ ಗೊತ್ತಿದೆ. ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಹಣ ಹಂಚಿಕೊಳ್ಳುವುದು ನಡೆದಿದೆ. ಎಲ್ಲಾ ಶಾಸಕರನ್ನು ಕರೆಯಿಸಿ ಒಂದು ನಿರ್ಣಯ ಮಾಡಿ, ಅದನ್ನು ನಿಲ್ಲಿಸುವ ವ್ಯವಸ್ಥೆ ಮಾಡೋಣ, ಅಧಿಕಾರದ ವಿಕೇಂದ್ರೀಕರಣ ಮಾಡುತ್ತೇವೆಂದು, ಭ್ರಷ್ಟಾಚಾರ ವೀಕೇಂದ್ರೀಕರಣವಾಗಿ ಹೋದರೆ ಬೈಯ್ಯಿಸಿಕೊಳ್ಳುವವರು ಶಾಸಕರು. ತಾವೇ ಹೇಳಿ, ಹಳ್ಳಿಗೆ ಹೋದರೆ ಬೈಯ್ಯಿಸಿಕೊಳ್ಳುವವರು ನೀವೇ ಬೇರೆ ಯಾರನ್ನು ಬೈಯ್ಯುವುದಿಲ್ಲ. ಒಂದು ಪಂಪ್‌ಸೆಟ್ಟು ರಿಪೇರಿಯಾಗದಿದ್ದರೂ ನಮ್ಮನ್ನೇ ಕೇಳುವುದು, ಶಾಸಕರೆ, ನೀವು ಏನು ಕೆಲಸ ಮಾಡಿದ್ದೀರಿ ಎಂದು ಅನ್ನುತ್ತಾರೆ. ಇದು ಎಲ್ಲರ ಅನುಭವಕ್ಕೆ ಬಂದಿರುವ ಮಾತು, ದಯಮಾಡಿ ಜಿಲ್ಲಾ ಪಂಚಾಯಿತಿ ರಸ್ತೆ ಕಡೆ ಗಮನ ಕೊಡಬೇಕು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪಾಟೀಲರೆ, ತಾವು ಹೇಳುವುದು ಹೊಸದು ಏನೂ ಇಲ್ಲ. ಸರ್ಕಾರದ ಪರವಾಗಿ ನಾನೇ ಎಷ್ಟೋ ಸಲ ಹೇಳಿದ್ದೇನೆ. ಮೇನ್‌ಟೇನೆನ್ಸ್‌ಗೆ ಸಾಕಷ್ಟು ಹಣವನ್ನು ಖರ್ಚು ಮಾಡುವುದಕ್ಕಾಗುತ್ತಿಲ್ಲ. ಗುಣಮಟ್ಟ ಸುಧಾರಣೆ ಮಾಡಬೇಕು. ತಾವು ಹೇಳಿದಂತೆ, ಒಂದು ಲಕ್ಷ ಕಿ.ಮೀ. ರೂರಲ್ ಡೆವಲೆಪ್‌ಮೆಂಟ್ ರಸ್ತೆ ಇದೆ. ನಾವು ಕೇಳಿರುವುದು 136 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದು 70-80 ಕೋಟಿ ರೂ.ಗಳು, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಕೂಡ ಕಾಳಜಿ ಇದೆ. ಇದು ಬರೀ ರಾಜ್ಯ ಸರ್ಕಾರದ ಪ್ರಶ್ನೆ ಅಲ್ಲ. ಸಡಕ್ ಯೋಜನೆ ಮೂಲಕ ದೊಡ್ಡ ಪ್ರಮಾಣದಲ್ಲಿ ಮಾಡುವುದಕ್ಕೆ ಹೊರಟಿದ್ದೇವೆ. ಇನ್ನು ಎರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಸಾವಿರ ಜನಸಂಖ್ಯೆ ಇರುವ ಎಲ್ಲಾ ಹ್ಯಾಬಿಟೇಶನ್ಸ್‌ಗೆ ಪಕ್ಕಾ ರಸ್ತೆಯ ಕನೆಕ್ಷನ್ ಮಾಡುವುದಕ್ಕೆ ಹೊರಟಿದ್ದೇವೆ. ಇನ್ನು 4 ವರ್ಷದಲ್ಲಿ 500 ಜನಸಂಖ್ಯೆ ಇರುವ ಪ್ರದೇಶಕ್ಕೂ ಕೂಡ ಗ್ರಾಮೀಣ ಭಾಗದಲ್ಲಿ ರಸ್ತೆಯನ್ನು ಮಾಡುತ್ತೇವೆ. ಅದರಲ್ಲಿ ಅನುಮಾನ ಏನೂ ಇಲ್ಲ, ಅದರ ಜೊತೆಗೆ ಮೇನ್‌ಟೇನೆನ್ಸ್‌ಗೆ ಹೆಚ್ಚಿಗೆ ಗಮನ ಕೊಡಬೇಕೆನ್ನುವುದು

ಹೊಸ ಪ್ರಶ್ನೆ ಇಲ್ಲ, ಇದರ ಬಗ್ಗೆ ನಿಮ್ಮೆಲ್ಲರ ಪರವಾಗಿ ಸರ್ಕಾರಕ್ಕೆ ನಾನು ಎಷ್ಟೋ ಸಲ ಹೇಳಿದ್ದೇನೆ. ಮಾನ್ಯ ಪಿಡಬ್ಲ್ಯೂಡಿ ಮಿನಿಸ್ಟರ್ ಕೂಡ ಇಲ್ಲಿಯೇ ಇದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಗ್ರಾಮೀಣ ಭಾಗದಲ್ಲಿ ರಸ್ತೆಗೆ ಎಷ್ಟು ನಾವು ಖರ್ಚು ಮಾಡುತ್ತಿದ್ದೇವೆ ಅಷ್ಟೇ ಪ್ರಮಾಣದಲ್ಲಿ ನಾವು ಗ್ರಾಮೀಣ ಪ್ರದೇಶದ ರಸ್ತೆಗಳ ಮೇಂಟೇನೆನ್ಸ್‌ಗೂ ಕೂಡ ಗಮನ ಕೊಡಬೇಕೆನ್ನುವುದು ನನ್ನ ಅಭಿಮತ. ಇದರ ಬಗ್ಗೆ ಸ್ವಲ್ಪ ಚರ್ಚೆಯಾಗಲಿ, ಇದೊಂದು ಸಣ್ಣ ಪ್ರಶ್ನೆ ಇದೆ. ಇದರಲ್ಲಿ ಹಣದ ಒಂದೇ ಪ್ರಶ್ನೆ ಅಲ್ಲ, ಮೇನ್‌ಟೇನೆನ್ಸ್ ಪಾಲಿಸಿ ಏನಿದೆ, ಅದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದವರು ರಿವಾಲ್ವಿಂಗ್ ಫಂಡ್ ಮಾಡುವ ಬಗ್ಗೆ ಹೇಳುತ್ತಾರೆ, ಇದರಲ್ಲಿ ನಾವೂ ಕೂಡ ಎಷ್ಟು ಬೇಕು ಅಷ್ಟು ಸಹಾಯ ಮಾಡುವುದಕ್ಕೆ ತಯಾರಿದ್ದೇವೆ. ಒಂದು ರಿವಾಲ್ವಿಂಗ್ ಫಂಡ್ ಮಾಡೋಣ ಎಂದು ಅದರ ಬಗ್ಗೆ ನನ್ನ ಅಭಿಪ್ರಾಯ ಕೇಳಿದ್ದಕ್ಕೆ ನಾನು ಅದನ್ನು ಸ್ವಾಗತ ಮಾಡಿದ್ದೇನೆ. ಸೆಂಟ್ರಲ್ ಮತ್ತು ಸ್ಟೇಟ್‌ದವರು ನಾವು ದೊಡ್ಡ ಪ್ರಮಾಣದಲ್ಲಿ ರಸ್ತೆಯನ್ನು ಮಾಡುವುದಕ್ಕೆ ಹೊರಟಿದ್ದೇವೆ, ಅದಕ್ಕೆ ಸರಿಯಾದಂಥ ಮೇನ್‌ಟೇನನ್ಸ್ ಪಾಲಿಸಿ ದೇಶದಲ್ಲಿ ಇಲ್ಲ. ಅದನ್ನು ಆಯಾ ರಾಜ್ಯಕ್ಕೆ ಬಿಟ್ಟುಕೊಡುವುದು ಅಷ್ಟು ಸೂಕ್ತವಲ್ಲ. ಇದಕ್ಕೆ ಒಂದು ರಾಷ್ಟ್ರೀಯ ಪಾಲಿಸಿ ಇರುವುದು ಒಳ್ಳೆಯದೆಂದು ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಇದನ್ನು ಕರ್ನಾಟಕ ರಾಜ್ಯ ಒಂದಕ್ಕೆ ಮಾಡುವುದಕ್ಕಾಗುವುದಿಲ್ಲ. ರಾಷ್ಟ್ರ ಮಟ್ಟದಲ್ಲಿ ಇದರ ಬಗ್ಗೆ ನಾವು ಮೂಲಭೂತವಾಗಿ ಯೋಚನೆಯನ್ನು ಮಾಡಿ ಹೊಸ ಪಾಲಿಸಿಯನ್ನು ನಾವು ತಯಾರಿಸಬೇಕಾಗುತ್ತದೆ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲಿರತಕ್ಕ ಮತ್ತು ಗ್ರಾಮೀಣ ಇಲಾಖೆಯ ವ್ಯಾಪ್ತಿಗೆ ಬರತಕ್ಕ ರಸ್ತೆಯ ಬಗ್ಗೆ ನಿಖರವಾಗಿ ಇಷ್ಟೇ ಕಿ.ಮೀ. ಉದ್ದದ ರಸ್ತೆ ಇದೆಯೆಂಬ ಮಾಹಿತಿ ಇಲಾಖೆಯಲ್ಲಿ ಇಲ್ಲ. ಇದರ ಬಗ್ಗೆ ವಿಷಯ ಸಮಿತಿಯಲ್ಲಿ ಚರ್ಚೆ ಮಾಡಿದಾಗ, ಹಲವಾರು ಅಂಕಿಸಂಖ್ಯೆಗಳನ್ನು ಕೊಟ್ಟರು ಅದರಲ್ಲಿ ಯವುದು ನಿಖರವಾಗಿ ಇರಲಿಲ್ಲ. ಕೊಡುವಂತ ಹಣ 80 ಕೋಟಿ ರೂ.ಗಳನ್ನು ಯಾವ ರೀತಿ ಖರ್ಚು ಮಾಡುತ್ತೀರಿ ನಿಮ್ಮ ಕಾರ್ಯ ಕ್ರಮ ಏನು ಎಂದು ಹೇಳುವಂಥದ್ದು ಕೂಡ ಇಲಾಖೆಯಲ್ಲಿ ಇರಲಿಲ್ಲ. ನಾವು ಹಠ ಹಿಡಿದು ಎರಡು-ಮೂರು ಸಭೆಗಳನ್ನು ಮಾಡಿದಾಗ ಅಲ್ಪಸ್ವಲ್ಪ ಮಾಹಿತಿ ಆಗ ಬಂತು. ಇದು ಈ ವರ್ಷದ ಸಮಿತಿಯಲ್ಲಿ ಅಲ್ಲ, ಇದು ಹಿಂದಿನ ವಿಷಯ ಸಮಿತಿ ಬಗ್ಗೆ, ಅದಲ್ಲಿ ಮಾನ್ಯ ಎಸ್.ಎಸ್.ಪಾಟೀಲರು ಹಾಗೂ ಶ್ರೀ ಡಿ.ಆರ್. ಪಾಟೀಲರು ಇದ್ದರು. ಒಂದು ತಾಲ್ಲೂಕಿಗೆ ಸುಮಾರು 40 ಲಕ್ಷ ರೂ.ಗಳನ್ನು ಮೇನ್‌ಟೇನೆನ್ಸ್‌ಗೆ ಕೊಡುವ ಯೋಚನೆ ಬಜೆಟ್‌ನಲ್ಲಿತ್ತು, ಅದು ಕೂಡ ವ್ಯವಸ್ಥಿತವಾಗಿ ಅಲ್ಲ, ಕೊಡುವಂಥ ಹಣವನ್ನು ರಸ್ತೆ ನಿರ್ವಹಣೆಗೆ ಖರ್ಚು ಮಾಡುತ್ತಿರಲಿಲ್ಲ. ಅದು ದಿನಗೂಲಿ ನೌಕರರಿಗೆ ಕೊಡುವುದು, ಬೇರೆ ಬೇರೆ ಕೆಲಸಕ್ಕೆ ಕೊಡುತ್ತಿದ್ದರು, ಇದರ ಬಗ್ಗೆ ಕೇಳಿದಾಗ, ಇದು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಡಿಸ್ಕ್ರಿಷನರಿ ಗ್ರಾಂಟ್ ಎಂದು ಹೇಳಿದರು. ಅದನ್ನು ಬದಲಾಯಿಸಿ, ಕಾರ್ಯಕ್ರಮಕ್ಕೆ ಬದ್ಧರಾಗಿ ಇರಬೇಕು, ನಿಖರವಾಗಿ ಒಂದು ಕಿ.ಮೀ.ಗೆ ಸುಮಾರು 20 ಸಾವಿರ ಹಣ ಬರುತ್ತಿತ್ತು. ಅಷ್ಟನ್ನು ಮಾಡುವುದಕ್ಕೂ ಆ ಇಲಾಖೆ ತಯಾರಿರಲಿಲ್ಲ, ಅದರ ಬಗ್ಗೆ ಕೂಡ ರಾಜ್ಯದಲ್ಲಿ ವ್ಯವಸ್ಥಿತವಾದ ಜಾಲ, ಅದನ್ನು ತರುವುದು ಬಹಳ ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಉಪಾಧ್ಯಕ್ಷರೆ, ನಾನು ಮಧ್ಯದಲ್ಲಿ ಪ್ರವೇಶ ಮಾಡಬಾರದೆಂದು ಇದ್ದೆ, ಆದರೆ ಈ ರಸ್ತೆ ಬಗ್ಗೆ ನಮ್ಮ ಹಿರಿಯ ಸದಸ್ಯರು ತಮ್ಮ ಅನುಭವದಿಂದ ಹೇಳಿರುವ ಮಾತುಗಳನ್ನು ಕೇಳಿದನಂತರ ನಾನು ಕೆಲವು ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಕರ್ನಾಟದಲ್ಲಿ ರಸ್ತೆಯ ಬಗ್ಗೆ ನಾನ್ ಪ್ಲಾನ್ ಗ್ರ್ಯಾಂಟ್ ಏನಿದೆ, ಅದನ್ನು ನಾವು ಪ್ಲಾನ್ ರೀತಿಯಲ್ಲಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಹಿಂದೆ ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡುವಾಗ ಅದು ಸರಿಯಾಗಿ ನಡೆಯುತ್ತದೆಯೇ ಇಲ್ಲವೇ ಎಂದು ನೋಡುವುದಕ್ಕೆ ಅವಕಾಶ ಇರಲಿಲ್ಲ. ನಾನ್‌ಪ್ಲಾನ್ 100 ಅಥವಾ 120 ಕೋಟಿ ರೂ.ಗಳು ಇರಲಿ, ಅದು ಪ್ಲಾನ್ ರೀತಿಯಲ್ಲಿ ಮೇನ್‌ಟೇನೆನ್ಸ್ ಆಗಬೇಕೆಂದು ಹೇಳಿದ್ದೇವೆ. ಇನ್ನೊಂದು ಪ್ರಶ್ನೆಯ ಬಗ್ಗೆ ನಾವು ಇವತ್ತು ಅಲ್ಲದಿದ್ದರೂ ನಾಳೆ ಚರ್ಚೆ ಮಾಡಬೇಕಾಗುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಎಷ್ಟೆಷ್ಟು ರಸ್ತೆ ಇದೆ, ಎಷ್ಟು ಡಾಂಬರೀಕರಣ ರಸ್ತೆ ಇದೆ, ಎಷ್ಟು ಮೆಟೆಲ್ ರಸ್ತೆ ಇದೆ, ಬೇರೆ ರಸ್ತೆ ಎಷ್ಟು ಇದೆ, ಅದಕ್ಕೆ ಮೇನ್‌ಟೇನೆನ್ಸ್ ಹಣ ಎಷ್ಟೇ ಬರಲಿ ಆ ಪ್ರಪೋರ್ಷನ್‌ನಲ್ಲಿ ಹಂಚಬೇಕೆನ್ನುವ ಒಂದು ತಾಂತ್ರಿಕವಾದ ವಿಚಾರ ಇದೆ. ಅದನ್ನು ನಾನು ಸೈದ್ಧಾಂತಿಕವಾಗಿ ಒಪ್ಪುತ್ತೇನೆ. ನಿಮ್ಮ ಕಾಲದಿಂದ ಏನು ಕೊಡುತ್ತಾ ಬಂದಿದ್ದಾರೆ, ಅದನ್ನೇ ನಾವು ಕೊಡುತ್ತಾ ಹೋದರೆ, ಅದು ಪ್ರಗತಿಯ ಲಕ್ಷಣವಲ್ಲ. should we distribute money according to the length of the roads? ಈ ಪ್ರಶ್ನೆ ಕೂಡ ನಮ್ಮ ಮುಂದೆ ಇದೆ. ಒಂದು ಕಡೆ ಮೇನ್‌ಟೆನೆನ್ಸ್ ಹಣ ಜಾಸ್ತಿಯಾಗಬೇಕು. ಇನ್ನೊಂದು ಕಡೆ ಹಣದ ವಿನಿಯೋಗ ಶಾಶ್ವತವಾಗಿ ನಡೆಯಬೇಕು. ಪ್ಲಾನ್ ಪ್ರಕಾರ ನಡೆಯ ಬೇಕು, ನಾನ್‌ಪ್ಲಾನ್ ಏನಾಯಿತೆಂದು ಗೊತ್ತಾಗದೆ, ಏನು ಪರಿಸ್ಥಿತಿ ಇತ್ತು, ಅದನ್ನು ತಪ್ಪಿಸಬೇಕೆನ್ನುವ ವಿಚಾರ ಸರ್ಕಾರಕ್ಕಿದೆ. ಇದರ ಬಗ್ಗೆ ನಾವು ಕ್ರಮ ಕೈಗೊಳ್ಳುವಾಗ ನಿಮ್ಮ ಸಹಕಾರ ಸಿಗುತ್ತದೆಂದು ನಾನು ನಂಬಿರುತ್ತೇನೆ.

ಶ್ರೀ ರಾಜೇಂದ್ರ ವರ್ಮ: ಮಾನ್ಯ ಉಪಾಧ್ಯಕ್ಷರೆ, ಬಂದಿರುವ ದುಡ್ಡನ್ನು ಪ್ರತಿ ಸದಸ್ಯರು ವರ್ಷಕ್ಕೆ 5-5ಲಕ್ಷ ರೂ.ಗಳನ್ನು ಹಂಚಿಕೊಂಡು ಒಂದೇ ರಾತ್ರಿಯಲ್ಲಿ ಕೆಲಸವನ್ನು ಮುಗಿಸುವುದು ಒಂದಾದರೆ, ನಾನ್‌ಪ್ಲಾನ್‌ದಲ್ಲಿ ನೀವು ದುಡ್ಡು ಕೊಡುವುದು, ನಿಮ್ಮ ದಿನಗೂಲಿ ನೌಕರರು ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಪ್ರತಿ ತಿಂಗಳು ಒಂದೊಂದು ಕೋಟಿ ಅಂದರೆ ವರ್ಷಕ್ಕೆ 10 ಕೋಟಿ ರೂ.ಗಳವರೆಗೆ ಹೋಗುತ್ತದೆ. ನೀವು ಅಭಿವೃದ್ಧಿ ಮಾಡಬೇಕೆನ್ನುವ ದೃಷ್ಟಿಯಿಂದ ನಿಮ್ಮ ಅಭಿಪ್ರಾಯವನ್ನು ನೀವು ಹೇಳುತ್ತಿದ್ದೀರಿ. ಆದರೆ ನಿಮ್ಮ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮೆಂಬರ್‌ಗಳು ಅದನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕಲ್ಲವೇ?

ಶ್ರೀ ಶಿವಾನಂದ್ ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಶ್ರೀ ರಾಜೇಂದ್ರ ವರ್ಮರವರು ಹೇಳಿದ ಹಾಗೆ, ಇವುಗಳು ವಿಲೇಜ್ ಅಪ್ರೋಚ್ ರಸ್ತೆಗಳಾದವು, ನಿಮ್ಮ ಜಿಲ್ಲಾ ಪಂಚಾಯಿತಿಯ ಕೆಲವು ರಸ್ತೆಗಳನ್ನು ನಾವು ನಬಾರ್ಡಿಗೆ ಹಸ್ತಾಂತರ ಮಾಡಿಸಿದ್ದೆವು. ನಬಾರ್ಡ್ ಯೋಜನೆಯಡಿಯಲ್ಲಿ ಆರ್‌ಐಡಿಎಫ್ 1-2,3,4, ರಲ್ಲಿ ವಿಲೇಜ್ ರಸ್ತೆಗಳನ್ನು ನಬಾರ್ಡಿಗೆ ಕೊಡಲಾಗಿತ್ತು. ನಬಾರ್ಡ್ ಸಂಸ್ಥೆಯಿಂದ ರಸ್ತೆಗಳು ಇವತ್ತಿಗೆ ಫಾರ್ಮೇಶನ್ ಮಾಡಿ ಪುನ : ಜಿಲ್ಲಾ ಪಂಚಾಯಿತಿಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ಜಿಲ್ಲಾ ಪಂಚಾಯತಿಯವರು ಲಕ್ಷ್ಯ ಕೊಡುತ್ತಿಲ್ಲ, ಲೋಕೋಪಯೋಗಿ ಇಲಾಖೆಯವರು ಅದನ್ನು ನೋಡುತ್ತಿಲ್ಲ. ಈಗ ಸದನದಲ್ಲಿ

ಇಬ್ಬರು ಸಚಿವರು ಇದ್ದೀರಿ ಇಬ್ಬರಲ್ಲಿ. ಒಬ್ಬರಾದರೂ ಉತ್ತರ ಕೊಡಿ. ಈ ನಬಾರ್ಡ್ ರಸ್ತೆಗಳು ಲೋಕೋಪಯೋಗಿ ಇಲಾಖೆಯವೇ ಅಥವಾ ಜಿಲ್ಲಾ ಪಂಚಾಯಿತಿಯವೆ? ಏಕೆಂದರೆ ನಬಾರ್ಡ್‌ನಿಂದ 700-800 ಕೋಟಿ ರೂಪಾಯಿ ಹಣ ತಂದು ರಸ್ತೆಗಳನ್ನು ಘಾರಂ ಮಾಡಿದ್ದೀರಿ. ಕನಿಷ್ಟಪಕ್ಷ ಅವುಗಳನ್ನು ಮೇಂಟೇನ್ ಮಾಡತಕ್ಕ ಅಭಿಪ್ರಾಯ ಇಬ್ಬರಲ್ಲಿ ಒಬ್ಬರಿಗಾದರೂ ಇದೆಯೆ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಬಹಳ ಒಂದು ಮಹತ್ವದ ವಿಚಾರ ಇದು. ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಇಬ್ಬರು ಸಹಿತ ಇವತ್ತು ಒಂದೇ ಬಾರಿಗೆ ಸದನದಲ್ಲಿ ಸಿಕ್ಕಿದ್ದಾರೆ. ಮೊದಲನೆಯದಾಗಿ ನ್ಯಾಷನಲ್ ಹೈವೇಗಳು ಏನಿವೆ ಅವುಗಳ ಮೇಂಟೆನೆನ್ಸ್ ಸ್ವಲ್ಪ ಹೆಚ್ಚು ಕಡಿಮೆ ಸರಿಯಾಗಿ ಆಗುತ್ತಿದೆ, ಅದರ ಬಗ್ಗೆ ನಾನು ಅಪ್ರೀಷಿಯೇಟ್ ಮಾಡುತ್ತೇನೆ. ಮತ್ತೆ ಕೇಂದ್ರ ಸರ್ಕಾರದವರು ಈಗ ರಾಷ್ಟ್ರೀಯ ಹೆದ್ದಾರಿಯನ್ನು ಮಾಡತಕ್ಕ ವಿಚಾರದಲ್ಲಿ ಕರ್ನಾಟಕದಲ್ಲಿ ತೆಗೆದುಕೊಂಡಿರತಕ್ಕ ಕೆಲಸಗಳು ಏನಿವೆ ಅದು ಸ್ವಾಗತಾರ್ಹವಾದ ವಿಚಾರ. ಆ ಕೆಲಸ ವಿಶೇಷವಾಗಿ ಬೆಂಗಳೂರು-ಹುಬ್ಬಳ್ಳಿ-ಬೆಳಗಾಂ ಮೂಲಕ ಉತ್ತರ ಕರ್ನಾಟಕದ ಬಹಳ ಪ್ರಮುಖವಾದ ರಸ್ತೆಯನ್ನು ನಾಲ್ಕು ಕಾಲಂ ಲೇನ್ ಆಗಿ ಮಾಡತಕ್ಕ ಕೆಲಸ ಅದು ಬಹಳ ಒಳ್ಳೆಯ ಕೆಲಸ. We appreciate Infact in the entire country, the Central Government has taken up this work. ನ್ಯಾಷನಲ್ ಹೈವೇ ಕೆಲಸ ಚೆನ್ನಾಗಿ ಆಗುತ್ತಿದೆ. ನಮ್ಮ ಲೋಕೋಪಯೋಗಿ ಇಲಾಖೆ ಸ್ವಲ್ಪಮಟ್ಟಿಗೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರಸ್ತೆಗಳ ವಿಚಾರದಲ್ಲಿ ಮಹತ್ವ ಕೊಟ್ಟಿರತಕ್ಕದ್ದು ಆ ಕೆಲಸಗಳೇ ಮಾತನಾಡುತ್ತವೆ. ನಾವು ಮಾತನಾಡುವುದಕ್ಕಿಂತ ಹೆಚ್ಚಾಗಿ ಆ ಕೆಲಸಗಳೇ ಮಾತನಾಡುತ್ತವೆ. ಅದನ್ನು I have to appreciate. ಆದರೆ ಈಪ್ಪೊಂದು ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರ ಗಮನಕ್ಕೆ ತರತಕ್ಕ ವಿಚಾರ ಏನೆಂದರೆ ನಬಾರ್ಡ್ ಕೆಲಸಗಳು ಏನಿವೆ ಅವು ಸಲ್ಪ ಸ್ಥಗಿತವಾಗಿವೆ. because financial releases have not been made properly. ಏನು ಪ್ರಾಬ್ಲಮ್ ಆಗಿದೆ ಅಂದರೆ, ಮೂರು ವರ್ಷಗಳ ಹಿಂದೆ ನಬಾರ್ಡ್‌ನಿಂದ ನಬಾರ್ಡ್-2, ನಬಾರ್ಡ್-3, ನಬಾರ್ಡ್-4ರಲ್ಲಿ ನಬಾರ್ಡ್-5ರಲ್ಲಿ ಜಲ್ಲೆ ಏನು ಹಾಕಿದ್ದಾರೆ. ಅದಕ್ಕೆ ಫೇವರ್‌ಯಿಂದ ಹಾಕಿಸಬೇಕೋ ಎನ್ನುವ ವಿಷಯದಲ್ಲಿ ಕಾಂಟ್ರವರ್ಸಿ ಇದೆ, ಈಗ ಎಸ್‌ಆರ್ ರೇಟ್ ಕೂಡ ಚೇಂಜ್ ಆಗಿದೆ. ಹಾಕಿರತಕ್ಕ ಜಲ್ಲೆಯನ್ನು ಸಂಪೂರ್ಣವಾಗಿ ಪಕ್ಕದವರು ಆಯ್ದುಕೊಂಡು ಹೋಗಿದ್ದಾರೆ. ಮತ್ತೆ ನೀವು ಅದಕ್ಕೆ ನಬಾರ್ಡ್‌ನವರ ಹತ್ತಿರ ರೀ-ಎಸ್ಟಿಮೇಟ್ ಮಾಡಿ ಮತ್ತೊಂದು ಸ್ಯಾಂಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಏನು ಆಗ್ರಹಪಡಿಸುತ್ತೇನೆಂದರೆ ನಬಾರ್ಡ್ ಯೋಜನೆಗಳಲ್ಲಿ, ನಬಾರ್ಡ್-6ರವರೆಗೆ ಕೆಲಸ ಪ್ರಾರಂಭವಾಗಿದೆ. ನಬಾರ್ಡ್-7ರಲ್ಲಿ ಇನ್ನೂ ಕೆಲಸಗಳು ಪ್ರಾರಂಭವಾಗಿಲ್ಲ. ನಿಮ್ಮ ಸರ್ಕಾರ ಬಂದಬೇಲೆ ನಬಾರ್ಡ್-4, ನಬಾರ್ಡ್-5, ನಬಾರ್ಡ್-6ನ್ನು ಕಂಪ್ಲೀಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ ನಬಾರ್ಡ್ ಒಳಗೆ ಅಟೆಂಪ್ಟ್ ಮಾಡುತ್ತಿದ್ದೀರಿ. ನಬಾರ್ಡ್-5ರವರೆಗೆ ತೆಗೆದುಕೊಂಡಿರತಕ್ಕ ರಸ್ತೆಗಳು ಏನಿವೆ ಆ ರಸ್ತೆಗಳಿಗೆ ಅಂದರೆ ಜಲ್ಲಿ ಹಾಕಿರುವ ರಸ್ತೆಗಳಿಗೆ ಡಾಂಬರೀಕರಣಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂಬುದು ಮೊದಲನೆಯದು. ಎರಡನೆಯದು ನನ್ನ ಒತ್ತಾಯ ಏನೆಂದರೆ ಅನೇಕ ಸದಸ್ಯರು ಹೇಳಿರತಕ್ಕ ವಿಚಾರ ಸರಿಯಾಗಿದೆ. ಅದು ತಮಗೆ ಗೊತ್ತಿದೆ. ನಬಾರ್ಡ್ ಯೋಜನೆಯಿಂದ ತೆಗೆದುಕೊಂಡಿರತಕ್ಕ ಎಲ್ಲಾ ರಸ್ತೆಗಳು, ಲೋಕೋಪಯೋಗಿ

ಇಲಾಖೆಯ ರಸ್ತೆಗಳಲ್ಲ. ಕೆಲವು ಜಿಲ್ಲಾ ಪರಿಷತ್ತಿನ ರಸ್ತೆಗಳು, ಕೆಲವು ಲೋಕೋಪಯೋಗಿ ಇಲಾಖೆಯ ರಸ್ತೆಗಳು. ಅವುಗಳ ಮೇಂಟೇನೆನ್ಸ್‌ಗೆ ಗ್ರಾಂಟ್ ಇಲ್ಲ. ಅದಕ್ಕೆ ಮೆಂಟೇನೆನ್ಸ್ ಗ್ರಾಂಟ್ ಇಲ್ಲದಿರುವುದರಿಂದಾಗಿ, ನಾವು ನಬಾರ್ಡ್‌ನಿಂದ ಪ್ರತಿಯೊಂದು ಹಂತದಲ್ಲೂ 300-400ಕೋಟಿ ರೂಪಾಯಿ ಸಾಲ ತೆಗೆದುಕೊಂಡು ಬಂದು ಆ ರಸ್ತೆಗಳು ಎರಡು ಮೂರು ವರ್ಷದಲ್ಲಿ ಹಾಳಾಗತಕ್ಕ ಸಂದರ್ಭವಿದೆ. ಈ ಎರಡು ವಿಚಾರಗಳಲ್ಲಿ ತಾವು ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಗ್ರಾಮೀಣಾಭಿವೃದ್ಧಿ ಸಚಿವರಿಗೆ ಸಂಬಂಧಪಟ್ಟ ಹಾಗೆ, ಬಹಳಷ್ಟು ಎಂಡಿಆರ್ ರಸ್ತೆಗಳು ಜಿಲ್ಲಾ ಪಂಚಾಯಿತಿಯ ಜೊತೆಯಲ್ಲಿಯೇ ಇವೆ. ಮೇಜರ್ ಕನೆಕ್ಷನ್‌ಕ್ಟೀವ್ ರೋಡ್ಸ್ ನಿಮ್ಮ ಕಡೆಗೆ ಇದೆ. ಈಗ ಪಿಎಂಜಿಎಸ್‌ನಲ್ಲಿ ಸ್ವಲ್ಪ ಕೆಲಸ ತೆಗೆದುಕೊಂಡಿದ್ದೇವೆ. ತಾವು ಮೊದಲನೇ ಸಾರಿ ಅಧಿಕಾರಕ್ಕೆ ಬಂದಾಗ ಸ್ಟಾಂಪ್‌ಡ್ಯೂಟಿಯಿಂದ ಹಣ ತೆದೆದು ಪೂಲ್‌ಮಾಡಿ ರಸ್ತೆಗಳನ್ನು ಮಾಡಿದ್ದೀರಿ. ಆದರೆ ತೊಂದರೆ ಏನಾಗಿದೆ ಅಂದರೆ ಅದರ ಮೇಂಟೇನೆನ್ಸ್‌ಗೆ ಗ್ರಾಂಟ್ ಇಲ್ಲದಿರುವುದರಿಂದ ಒಂದು ವರ್ಷ ಜಲ್ಲಿ ಹಾಕಿಕೊಂಡು ಬರುತ್ತಾರೆ. ಮತ್ತೊಂದು ವರ್ಷ ಆ ಜಲ್ಲಿಯನ್ನು ಜನ ಆಯ್ದುಕೊಂಡು ಹೋಗುತ್ತಾರೆ. ಇದು ಎಲ್ಲಾ ಕಡೆಗಳಲ್ಲಿ ಆಗಿರತಕ್ಕ ಅನುಭವ. ತಾವೇನು ರಾಷ್ಟ್ರೀಯ ನೀತಿ ಆಗಬೇಕು ಅದಕ್ಕೆ ಹಣ ಬಿಡುಗಡೆಯಾಗಬೇಕೆಂದು ಹೇಳುತ್ತೀರಿ. All that is agreed. ರಾಷ್ಟ್ರೀಯ ನೀತಿಯನ್ನು ಮಾಡಿ, ಆದರೆ ಅದನ್ನು ಮಾಡುವುದಕ್ಕೆ ಆ ಬಗ್ಗೆ ಚರ್ಚೆ ಆಗಿ ಆಗುವುದಕ್ಕೆ ಎರಡು-ಮೂರು ವರ್ಷಗಳಾಗುತ್ತದೆ. ತಕ್ಷಣ ಕರ್ನಾಟಕದಲ್ಲಿ ಏನಾದರೂ ಒಂದು ಪರಿಹಾರ ಕೊಡಬೇಕು. ಜಿಲ್ಲಾ ಪಂಚಾಯಿತಿ ರಸ್ತೆಗೆ ಇಡೀ ರಾಜ್ಯದ 224 ಕ್ಷೇತ್ರಗಳಲ್ಲಿನ ರಸ್ತೆಗಳಿಗೆ ಮೇಂಟೇನೆನ್ಸ್ ಗ್ರಾಂಟ್‌ಗೋಸ್ಕರ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ನಾನು ಲೋಕೋಪಯೋಗಿ ಮಂತ್ರಿಗಳನ್ನು ಅಪ್ರೀಷಿಯೇಟ್ ಮಾಡುತ್ತೇನೆ. ಅವರು ಲೋಕೋಪಯೋಗಿ ಮಂತ್ರಿಗಳಾದ ಮೇಲೆ I appreciate the Hon.Minister for PWD, somehow he has prevailed on the Chief Minister and other Ministers and succeeded in increasing the amount from Rs.20,000 to Rs.40,000. ಅದನ್ನು ನೀವು ಮಾಡಿದ್ದೀರಿ. ಆದರೆ ಏನು ಮಾಡಿದ್ದೀರಿ? ಆದರೆ ನೀವು ಮಾಡಿರುವುದು ಸರಿ, ಅದನ್ನು ನಾನು ಅಪ್ರೀಷಿಯೇಟ್ ಮಾಡುತ್ತೇನೆ. ಅದನ್ನೆಲ್ಲಾ ಪ್ಯಾಕೇಜ್ ಟೆಂಡರ್‌ನಲ್ಲಿ ಕಾಂಟ್ರಾಕ್ಟ್ ಕೊಟ್ಟಿದ್ದೀರಿ. ಅದನ್ನು ತಾವು ದಯವಿಟ್ಟು ರಿವ್ಯೂ ಮಾಡಿ. ಬಹುತೇಕ ಕಡೆಗಳಲ್ಲಿ ಇಂಜನಿಯರ್‌ಗಳು ಮತ್ತು ಕಂಟ್ರಾಕ್ಟರ್‌ದಾರರುಗಳು ಬಿಲ್ ಮಾಡಿಕೊಂಡಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ಏನು ಎಕ್ಸ್‌ಪೆಕ್ಟ್ ಮಾಡಿದ್ದೆ ಅಂದರೆ ಗ್ಯಾಂಗ್‌ಮ್ಯಾನ್‌ಗಳನ್ನು ತೆಗೆದುಹಾಕಿ ಕಂಟ್ರಾಕ್ಟ್ ಕೊಡುವುದರಿಂದ ಇದೆಲ್ಲಾ ಆಗುತ್ತದೆ ಎನ್ನತಕ್ಕದ್ದು ಏನಿತ್ತು ಆ ಕೆಲಸ ಆಗಲಿಲ್ಲ. ಅದರ ಬಗ್ಗೆ ನಿಮ್ಮ ಇಲಾಖೆ ಬೇಡಿಕೆ ಬಂದಾಗ ನಾನು ಮಾತನಾಡುತ್ತೇನೆ. ಈ ವಿಚಾರದ ಬಗ್ಗೆ ತಾವು ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್: (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಬಹಳ ಮೂಲಭೂತವಾದ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ನಬಾರ್ಡ್‌ನ ಟೆಂಪೋ ಏನಿದೆ ಅದು ಚೆನ್ನಾಗಿದೆ. ಆದರೆ ಕೆಲಸಕಾರ್ಯಗಳು ಸ್ವಲ್ಪ ಸ್ಥಗಿತಗೊಂಡಿದೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಿತ್ತಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ. ಈಗ ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿರುವುದನ್ನು ನಾನು ಮುಖ್ಯಮಂತ್ರಿಗಳ ಜೊತೆಗೆ

ಮಾತನಾಡತಕ್ಕ ಕಾಲದಲ್ಲಿ ಮಾನ್ಯ ಕಾಗೋಡುತ್ತಿಮ್ಮಪ್ಪನವರು ನನ್ನ ಜೊತೆಯಲ್ಲಿದ್ದರು. ನಬಾರ್ಡ್‌ನಿಂದ ಹಣವನ್ನು ತಂದು ಅದನ್ನು ಖರ್ಚು ಮಾಡಿ ನಬಾರ್ಡ್ ರಸ್ತೆಗಳನ್ನು ಮಾಡಿ ಅದನ್ನು ಮೇಂಟೇನೆನ್ಸ್ ಬಿಗ್ ಪ್ರಾಬ್ಲಮ್. ನಬಾರ್ಡ್-2ರಿಂದ ನಬಾರ್ಡ್-4ರವರೆಗೆ ರಸ್ತೆಗಳ ಕೆಲಸ ಮಾಡಲಾಗಿದೆ. 360 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಆ ರಸ್ತೆಗಳು ಎಲ್ಲಿವೆ ಯೆಂದು ಕಾಣುತ್ತಿಲ್ಲ. ಏಕೆಂದರೆ ಅದರ ಮೇಂಟೇನೆನ್ಸ್ ಅನ್ನು ಯಾರು ಮಾಡಬೇಕು ಎಂಬುದು ಇದೆ. ಇದರ ಬಗ್ಗೆ ಯಾರು ಮೇಂಟೇನೆನ್ಸ್ ಮಾಡಬೇಕೆನ್ನುವ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಎಲ್ಲಿಯವರೆಗೆ ನಾವು ಮಾಡುವುದಿಲ್ಲ ಅಲ್ಲಿಯವರೆಗೆ ಅದು ಆರ್ಫನ್ ಕೊಡಗಳಾಗಿ ಬಿಡುತ್ತವೆ. ಅದರ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ. ಎಲ್ಲಾ ಪ್ರಪೋಸಲ್ಸ್ ನಮ್ಮ ಮುಂದೆ ಇದೆ. ಜಿಲ್ಲಾ ಪಂಚಾಯತಿಯವರಿಗೆ ವಹಿಸಿಕೊಡಬೇಕೇ ಅಥವಾ ಲೋಕೋಪಯೋಗಿ ಇಲಾಖೆಯಲ್ಲಿ ಇಟ್ಟುಕೊಳ್ಳಬೇಕೇ ಎನ್ನುವ ಬಗ್ಗೆ ನಾವು ಅವರು ಕೂಡಿ ತೀರ್ಮಾನ ಮಾಡುತ್ತೇವೆ. ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಕಡೆ ಈ ಸಮಸ್ಯೆ ಇದೆ. ಈ ಬೇಡಿಕೆ ಬರುತ್ತಿದೆ. ರಸ್ತೆಗಳು ಕಾಣೆಸುತ್ತಿಲ್ಲವೆಂದು ಹೇಳುತ್ತಾರೆ. ಇಷ್ಟೆಲ್ಲಾ ಹಣ ಖರ್ಚು ಮಾಡಿದರು ರೋಡ್ಸ್ ಆಗುತ್ತಿಲ್ಲವೆನ್ನುವ ಬೇಡಿಕೆಯಿದೆ. ಪ್ಯಾಕೇಜ್ ಗುತ್ತಿಗೆ ಬಗ್ಗೆ ಪ್ರತಿಭಟನೆ ನಡೆದಾಗ ನಾನು ಆ ಪ್ರತಿಭಟನಾ ಸಭೆಗೆ ಹೋಗಿದ್ದೇನೆ. ಪ್ಯಾಕೇಜ್ ಏನಾಗಿದೆ ಏಕೆ ಮಾಡಿದ್ದಾರೆ ಅಂದರೆ ನಮ್ಮ ಅನುಭವದ ಪ್ರಕಾರ ಬ್ರಿಡ್ಜ್‌ಸ್ ಇದೆ, ನಾನು ಮತ್ತು ಮಾನ್ಯ ಎಂ.ಸಿ. ನಾಣಯ್ಯನವರು ಹೋಗಿದ್ದೆವು. ಆ ಬ್ರಿಡ್ಜ್‌ಸ್‌ನಲ್ಲಿ ಏನಾಗಿದೆ ಅಂದರೆ Package has become successful in Karnataka. We have identified 148, We have completed 140 bridges, in the Karnataka State. That is a visibility. ನಾವು ಕೆಲಸ ಮಾಡಿದ್ದೇವೆ. ಮತ್ತೊಂದು ಏನಾಗಿದೆ ಅಂದರೆ, ಶೀರ್ಷಿಕೆ 1354 ಏನಿದೆ ಅದರಲ್ಲಿ ಎಲ್ಲಾ ಕಡೆಗೆ ಹಣ ಕೊಡಬೇಕು ಎನ್ನುವ ಮಾತಿದೆ. ಒಟ್ಟು ಲೋಕೋಪಯೋಗಿ ಇಲಾಖೆಯದು 41 ಸಾವಿರ ಕಿಲೋಮೀಟರ್ ರಸ್ತೆ ಇದೆ. 10,800 ಕಿಲೋಮಿಟರ್ ಸ್ಟೇಟ್ ಹೈವೇ ರಸ್ತೆ ಇದೆ. 28 ಸಾವಿರ ಕಿಲೋಮೀಟರ್ ಎಂಡಿಆರ್ ರಸ್ತೆಯಿದೆ. ನಾವು ಸ್ಟೇಟ್ ಹೈವೇ ಜೋನ್‌ನಲ್ಲಿ ರಸ್ತೆ ದುರಸ್ತಿ ಮಾಡುವ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರಲ್ಲಿ ನಾವೇನು ಮಾಡಿದ್ದೇವೆಂದರೆ ಮೂರು ವರ್ಷದ ಗುತ್ತಿಗೆ ಮೇಲೆ ಮಾಡಿ, ಅದಕ್ಕೆ ಹುಡ್ಕೋದಿಂದ ಸಾಲ ತೆಗೆದುಕೊಂಡು ನಾವೇನು ನಾನ್‌ಪ್ಲಾನ್‌ನಲ್ಲಿ ಏನು ಹಣವನ್ನು ಗುಂಡಿ ಬಿದ್ದಾಗ ಬಿಡುಗಡೆ ಮಾಡುತ್ತೇವೆ ನಮ್ಮ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್‌ಗೆ ಆ ಕೆಲಸ ಕೊಟ್ಟು ಸಮರ್ಪಕವಾಗಿ ಇದುವರೆಗೆ ಆಗಿಲ್ಲ. ನಾವೇನು ಮಾಡಿದ್ದೇವೆಂದರೆ ಮೂರು ವರ್ಷದ ಗುತ್ತಿಗೆಯ ಮೇಲೆ ಗುಂಡಿ ಮುಚ್ಚತಕ್ಕ ಕೆಲಸವನ್ನು, resurfacing, purback cutting, that is a new concept started in Karnataka. ಇದು ಎಲ್ಲಿಯೂ ಆಗಿಲ್ಲ. ಬೇರೆ ರಾಜ್ಯದವರು ಬಂದು ನೋಡಿಕೊಂಡು ಹೋಗುತ್ತಿದ್ದಾರೆ. 7600 ಕಿಲೋಮೀಟರ್ ರಸ್ತೆ ಕೆಲಸವನ್ನು ತೆಗೆದುಕೊಂಡು ಮಾಡುತ್ತಿದ್ದಾರೆ. ಎಲ್ಲಾ ಕಡೆಗೆ ಪ್ರತಿಯೊಂದು ಜಿಲ್ಲೆಗೆ ಹೇಳಿದ್ದೇವೆ. 28 ಸಾವಿರ ಎಂಡಿಆರ್ ರಸ್ತೆಗಳನ್ನು ಮಾಡುತಿದ್ದಾರೆ. ಅದಕ್ಕೆ 7 ಕೋಟಿ ರೂಪಾಯಿ ಹಣ ಬೇಕಾಗುತ್ತದೆ, ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹಣ ಖರ್ಚಾಗುವುದು ಹೇಗೆ, 1354ರಲ್ಲಿ ಹಾಕಿ ನಾನ್‌ಪ್ಲಾನ್‌ನಲ್ಲಿ ಎಲ್ಲೆಲ್ಲಿ ರಸ್ತೆಗಳು ಕೆಟ್ಟು ಹೋಗಿವೆ ಅಲ್ಲಿ ಸಮರ್ಪಕವಾಗಿ ಕೆಲಸವಾಗಬೇಕು ಡ್ಯೂರಬಿಲಿಟಿ ಇರಬೇಕು ಎನ್ನತಕ್ಕ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ ಮಾಡುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ನೀವು ಪ್ಯಾಕೇಜ್ ಟೆಂಡರ್‌ನಲ್ಲಿ ರೋಡ್ ಬ್ರಿಡ್ಜ್‌ಸ್ ಮಾಡಿರತಕ್ಕದ್ದನ್ನು I agree it has been done well in advance. ಗುಂಡಿಗಳನ್ನು ತೆಗೆದು ಸ್ಟೇಟ್ ಎಸ್‌ಹೆಚ್‌ಗಳನ್ನು 11 ಸಾವಿರ ಕಿಲೋಮೀಟರ್ ರಸ್ತೆಯನ್ನು ಪ್ಯಾಕೇಜ್‌ಗೆ ಕೊಟ್ಟು ಮಾಡಿದ್ದೇವೆಂದು ಏನು ಹೇಳುತ್ತೀರಿ ಆ ಕೆಲಸಗಳು ಸಮರ್ಪಕವಾಗಿ ಆಗಿಲ್ಲ; ಅದರ ಬಗ್ಗೆ ವಿಚಾರಣೆ ಆಗಬೇಕು.

ಶ್ರೀ ಧರ್ಮಸಿಂಗ್: ಪ್ಯಾಕೇಜ್‌ಗೆ ಕೊಟ್ಟಿಲ್ಲ. ಓಪನ್ ಟೆಂಡರ್ ಇದೆ. They have participated ಆ ಕೆಲಸ ಚೆನ್ನಾಗಿ ಆಗಿದೆ, ಬೇಕಾದರೆ ನಾನು ತಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ.

5.30 ಪಿಎಂ

ಶ್ರೀ ಶಿವಾನಂದ ಎಸ್. ಪಾಟೀಲ್: ಕೆಹೆಚ್‌ಎಸ್‌ಪಿದ್ದು ಈಗ ನೀವು ಟೆಂಡರ್ ಮಾಡಿ ಅವರಿಗೆ ವರ್ಕ್ ಎಂಟ್ರಸ್ಟ್ ಮಾಡಿದ್ದೀರಿ. ಅದನ್ನು ಮಾಡಿ ಒಂದೂವರೆ ವರ್ಷ ಆಯಿತು. ಜನವರಿಗೆ ಕೆಲಸ ಪ್ರಾರಂಭವಾಗಬೇಕಾದದ್ದು ಇನ್ನೂ ಆಗಿಲ್ಲ. ಉದಾಹರಣೆಗೆ ಜೇವರ್ಗಿಯಿಂದ ಚಿಕ್ಕೋಡಿ ರಸ್ತೆಯಲ್ಲಿ ಎಷ್ಟೋ ಜನ ಕಂಟ್ರಾಕ್ಟರ್‌ಗಳು ಜನವರಿಯಿಂದ ಕೆಲಸ ಪ್ರಾರಂಭಮಾಡಬೇಕಾಗಿತ್ತು ಅದನ್ನು ಇನ್ನುವರೆಗೂ ಮಾಡಿಲ್ಲ. ಪಿ.ಡಬ್ಲ್ಯೂ.ಡಿ.ಯವರು ಏನು ಮಾಡಿದರು ಎಂದರೆ ಇದು ಕೆಹೆಚ್‌ಎಸ್‌ಪಿಯಲ್ಲಿದೆ, ವರ್ಲ್ಡ್‌ಬ್ಯಾಂಕ್ ಏಡ್‌ನಿಂದ ಅವರು ಮಾಡುತ್ತಾರೆ ಎಂದು ಪಿ.ಡಬ್ಲ್ಯೂ.ಡಿ. ಯವರು ಮೇಯಂಟನೆನ್ಸ್ ಮಾಡುವುದು ಬಿಟ್ಟು ಒಂದು ವರ್ಷವಾಯಿತು. ಈ ಕಡೆ ಕೆಹೆಚ್‌ಎಸ್‌ಪಿ ಅವರು ಟೇಕ್‌ಓವರ್ ಮಾಡಿ ಮೇಯಂಟೇನ್ ಮಾಡಬೇಕಾಗಿತ್ತು, ಅದನ್ನೂ ಮಾಡಿಲ್ಲ. ಹೊಸರಸ್ತೆಗಳನ್ನು ಜನವರಿಯಿಂದ ನಿರ್ಮಾಣ ಮಾಡುತ್ತೇವೆ ಎಂದು ಹೇಳಿದ ಕೆಲಸ ಇದುವರೆಗೂ ಮಾಡಿಲ್ಲ. ಕೊನೇ ಪಕ್ಷ ಅವರು ಮೇಯಂಟೇನ್ ಮಾಡಬೇಕಾಗಿತ್ತು. ಒಂದಿಷ್ಟು ಗುಂಡಿಯನ್ನಾದರೂ ಮುಚ್ಚಿ ಟ್ರಾಫಿಕ್‌ಗೆ ಅನುಕೂಲ ಮಾಡಿಕೊಟ್ಟಿದ್ದರೆ ಜನ ಸ್ವಲ್ಪ ಸಂತೋಷದಿಂದ ಇರುತ್ತಿದ್ದರು. ದಯವಿಟ್ಟು ಇದರ ಬಗ್ಗೆ ಹೇಳಬೇಕು.

ಶ್ರೀ ಧರ್ಮಸಿಂಗ್: ನೀವು ಅಥಣಿಯಿಂದ ಬಿಜಾಪುರ ರಸ್ತೆ ಬಗ್ಗೆ ಹೇಳುತ್ತಿದ್ದೀರಿ. ಅಲ್ಲಿ ಕಂಟ್ರಾಕ್ಟರ್ಸ್‌ನ್ನು ಕರೆಸಿ ಹೇಳಿದ್ದು ಅಲ್ಲಿ ಕೂಡ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ಗುಂಡಿ ಮುಚ್ಚತಕ್ಕಂಥ ಕೆಲಸ ಅವರ ಪ್ರಾವಿಜನ್‌ನಲ್ಲಿ ಇಲ್ಲ. ಆದರೂ ಕೂಡ ಕಂಟ್ರಾಕ್ಟರ್ಸ್‌ಗೆ ಹೇಳಿದ್ದೇವೆ. ರಸ್ತೆ ಮಾಡುವುದಕ್ಕೆ ತಡವಾದರೂ ಕೂಡ ಕನಿಷ್ಟ ಪಕ್ಷ ಗುಂಡಿಗಳನ್ನು ಮುಚ್ಚುವುದಕ್ಕೆ ಕೂಡ ಹೇಳಿದ್ದೇವೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಹೇಳಿದ್ದರ ಬಗ್ಗೆ ಒಂದು ಮಾತನ್ನು ಹೇಳಬೇಕು. ಇದು ಮೂಲಭೂತವಾದಂಥ ವಿಷಯವನ್ನು ಅವರು ಎತ್ತಿದ್ದಾರೆ. ಇವತ್ತು ಗ್ರಾಮೀಣ ಭಾಗದಲ್ಲಿ ಹೆಚ್ಚು ಕಡಿಮೆ ಒಂದು ಲಕ್ಷ ಕಿಲೋಮೀಟರ್ ರಸ್ತೆ ಇದೆ. ಇದರಲ್ಲಿ ಅಂದಾಜಿನ ಮೇಲೆ ಹೇಳುವುದಾದರೆ 30 ಸಾವಿರ ಕಿಲೋಮೀಟರ್ ಡಾಂಬರು ರಸ್ತೆ ಇರಬಹುದು. ಇವತ್ತು ಇಡೀ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಅವರ ಮೇಯಂಟನೆನ್ಸ್‌ಗೆ

30-40ಸಾವಿರ ಕಿಲೋಮೀಟರ್ ರಸ್ತೆ ಮಾತ್ರ ಇದೆ. ಇದಕ್ಕೆ ನಮ್ಮ 30 ಸಾವಿರ ಕಿಲೋಮೀಟರ್ ರಸ್ತೆಯನ್ನು ಹೋಲಿಸಿದರೆ ಅದು ಕಡಿಮೆ ಏನೂ ಅಲ್ಲ. ಆದ್ದರಿಂದ ಇವತ್ತು ಗ್ರಾಮಾಂತರ ಪ್ರದೇಶವಾಗಲೀ ಅಥವಾ ಬೇರೆ ಪ್ರದೇಶವಾಗಲೀ ಇದರಲ್ಲಿ ವ್ಯತ್ಯಾಸ ಮಾಡಬಾರದು ಎನ್ನುವುದು ನನ್ನ ಅಭಿಪ್ರಾಯ ಇದೆ. ಇವತ್ತು ಇದು ಒಂದು ಕಾಮನ್ ಮೇಯಂಟನೆನ್ಸ್ ಪಾಲಿಸಿಯನ್ನು ಮಾಡಬೇಕು. ನಮ್ಮ ಶಕ್ತಿ ಅನುಸಾರವಾಗಿ ಏನು ಖರ್ಚುಮಾಡುವುದಕ್ಕೆ ಸಾಧ್ಯವಿದೆ ಅದೇ ಆಧಾರದ ಮೇಲೆ ಅದು ಗ್ರಾಮೀಣ ಭಾಗದಲ್ಲಿ ಇರಲಿ ಬೇರೆ ಭಾಗದಲ್ಲಿ ಇರಲಿ ಅದು ಒಂದು ಯೂನಿಫಾರಂ ಪಾಲಿಸಿಯನ್ನು ಮಾಡಬೇಕಾದ ಅವಶ್ಯಕತೆ ಇದೆ. ನನ್ನ ಅಭಿಪ್ರಾಯ ಈ ರೀತಿ ಇದೆ. ಇದರ ಬಗ್ಗೆ ನಾವೆಲ್ಲರೂ ಸರ್ಕಾರದ ಮೇಲೆ ರಚನಾತ್ಮಕವಾದಂಥ ಒತ್ತಾಯ ತರುವುದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಯೂನಿಫಾರಂ ಪಾಲಿಸಿ ಇರಲಿ. ಹಿಂದೆ ಏನಿತ್ತು ಎಂದರೆ ಮಣ್ಣಿನ ರಸ್ತೆಗಳು ಗ್ರಾಮೀಣ ಭಾಗದಲ್ಲಿ ಇದ್ದವು. ಇವತ್ತು ಹಾಗೆ ಇಲ್ಲ. ಹೆಚ್ಚು ಕಡಿಮೆ ಅಷ್ಟೇ ಡಾಂಬರು ರಸ್ತೆ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಇವೆ. ಆದಕಾರಣ ಈ ಡಾಂಬರು ಮತ್ತು ಬೇರೆ ಕಡೆ ಇರತಕ್ಕಂಥ ಡಾಬಂರು ರಸ್ತೆಗೆ ವ್ಯತ್ಯಾಸ ಮಾಡುವುದಕ್ಕೆ ಯಾವ ತಾಂತ್ರಿಕ ಆಧಾರವೂ ಇಲ್ಲ. ಆದ್ದರಿಂದ ಈ ವ್ಯೂವನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಯೂನಿಫಾರಂ ಪಾಲಿಸಿ ಆಫ್ ಮೇಯಂಟನೆನ್ಸ್ ಕರ್ನಾಟಕ್ಕೆ ಇರಬೇಕು. ಸೆಂಟ್ರಲ್‌ನವರು ನಮ್ಮ ಜೊತೆಗೆ ಬರುವುದಾದರೆ ಇನ್ನೂ ಒಳ್ಳೆಯದು.

ಶ್ರೀ ಉಮೇಶ್.ವಿ. ಕತ್ತಿ: ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಯವರು ಸ್ಟೇಟ್ ಹೈವೇಗಳ ಮೇಯಂಟನೆನ್ಸ್ ತೆಗೆದುಕೊಂಡಿದ್ದಾರೆ. ಇದರ ಜೊತೆಗೆ ನಬಾರ್ಡಿನಲ್ಲಿ ಆರನೇ ಹಂತದವರೆಗೆ ಹೋಗಿದ್ದೇವೆ. ನಬಾರ್ಡ್ ರಸ್ತೆಗಳನ್ನು ಮೇಯಂಟನೆನ್ಸ್ ಮಾಡುವವರು ಯಾರು ಎಂಬುದು ತೀರ್ಮಾನ ಆಗುತ್ತಿಲ್ಲ. ಜಿಲ್ಲಾ ಪಂಚಾಯತ್‌ನವರು ಇದನ್ನು ನಬಾರ್ಡ್‌ನವರೇ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಮೇಯಂಟನೆನ್ಸ್ ಮಾಡುವುದಕ್ಕೆ ಸಾಕಷ್ಟು ಹಣ ಇಲ್ಲ. ಇದರ ಜೊತೆಗೆ ಜಿಲ್ಲಾ ಪಂಚಾಯತ್‌ಗೆ ಹ್ಯಾಂಡ್ ಓವರ್ ಮಾಡಿದರೆ ಅವರಿಗೂ ಅದನ್ನು ಮೇಯಂಟನೆನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ನಬಾರ್ಡ್ ರಸ್ತೆಗಳನ್ನು ಮೇಯಂಟನೆನ್ಸ್ ಮಾಡದೇ ಇರುವುದರಿಂದ ಕಳೆದ ಕಳೆದ ಎರಡು-ಮೂರು ವರ್ಷಗಳಿಂದ ಈ ರಸ್ತೆಗಳು ಹಾಳಾಗುತ್ತಿವೆ. ನಬಾರ್ಡ್ ರಸ್ತೆಗಳನ್ನು ಜಿಲ್ಲಾ ಪಂಚಾಯತ್‌ನವರು ಮೇಯಂಟನೆನ್ಸ್ ಮಾಡಬೇಕು ಎಂಬ ಆದೇಶ ಇದೆ. ಆದರೆ ಮೇಯಂಟೇನ್ ಮಾಡುವುದಕ್ಕೆ ಅಲ್ಲಿ ದುಡ್ಡಿಲ್ಲ. ದುಡ್ಡು ಇಲ್ಲದೇ ಇರುವುದರಿಂದ ನಬಾರ್ಡ್ ರಸ್ತೆಗಳು ಕಳೆದ ಮೂರು ನಾಲ್ಕು ವರ್ಷಗಳಿಂದ ಏನೂ ಆಗಿಲ್ಲ. ಅವರಿಗೆ ದುಡ್ಡಾದರೂ ಕೊಡಿ. ಇಲ್ಲದಿದ್ದರೆ ಇದನ್ನು ಪಿ.ಡಬ್ಲ್ಯೂ.ಡಿ. ಯವರಾದರೂ ಮಾಡಲಿ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಂ.ವೈ.ಘೋರ್ಪಡೆ: ಇದರ ಬಗ್ಗೆ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಮೇಡರ್ ಡಿಸ್ಟ್ರಿಕ್ಟ್ ರೋಡ್‌ಗಳನ್ನು ಹ್ಯಾಂಡ್ ಓವರ್ ಮಾಡಿದ ತಕ್ಷಣ ನಮಗೆ ಏನೂ ಜವಾಬ್ದಾರಿ ಇಲ್ಲವೆಂದು ಪಿ.ಡಬ್ಲ್ಯೂ.ಡಿ. ಯವರು ಹೇಳಬಾರದು. ಅವರೇ ಮೇಂಟೇನ್ ಮಾಡಲಿ ಅಥವಾ ಜಿಲ್ಲಾ ಪಂಚಾಯತ್‌ನವರು ಮಾಡಲಿ, ಗ್ರಾಮೀಣ ಪ್ರದೇಶದ ರಸ್ತೆಗಳ ಮೇಂಟೆನೆನ್ಸ್ ಬಗ್ಗೆ ಒಂದು ಪಾಲಿಸಿ ಅಂತೂ ಯೂನಿಫಾರಂ ಆಗಿ ಇರಬೇಕು. ಇದರಲ್ಲಿ ಎರಡು ಅಭಿಪ್ರಾಯ ಇಲ್ಲ.

ಶ್ರೀ ಉಮೇಶ್.ವಿ.ಕತ್ತಿ: ನಾಲ್ಕು ವರ್ಷಗಳ ಹಿಂದೆ ಮಾಡಿದ ನಬಾರ್ಡ್ ರಸ್ತೆಗಳನ್ನು ಇವತ್ತು ಮೇಯಿಂಟನೆನ್ಸ್ ಮಾಬೇಕು ಎಂದರೆ ಪಿ.ಡಬ್ಲ್ಯೂ.ಡಿ. ಯವರನ್ನು ಕೇಳಿದರೆ ಈಗಾಗಲೇ ಜಿಲ್ಲಾ ಪಂಚಾಯತ್‌ಗೆ ಹ್ಯಾಂಡ್ ಓವರ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಜಿಲ್ಲಾ ಪಂಚಾಯತ್‌ನಲ್ಲಿ ದುಡ್ಡಿಲ್ಲ. ಈ ಪಾಲಿಸಿ ಡಿಸಿಷಿನ್ ಆಗುವವರೆಗೆ ರಸ್ತೆಗಳು ಉಳಿಯುವುದಿಲ್ಲ. ಆದ್ದರಿಂದ ಯಾವುದಾದರೂ ಒಂದು, ಪಿ.ಡ.ಬ್ಲ್ಯೂ.ಡಿ. ಯವರು ಮಾಡುತ್ತಾರಾ ಅಥವಾ ಜಿಲ್ಲಾ ಪಂಚಾಯತ್‌ನವರು ಮಾಡುತ್ತಾರಾ ಎಂದು ಖಚಿತವಾದಂಥ ಮಾಹಿತಿಯನ್ನು ಕೊಡಿ; ಮತ್ತು ಹಣ ಬಿಡುಗಡೆ ಮಾಡಿಕೊಡುತ್ತೀರಾ ಎಂದು ಇಷ್ಟು ಹೇಳಿ.

ಶ್ರೀ ಧರ್ಮಸಿಂಗ್: ನಾನು ಲೋಕೋಪಯೋಗಿ ಇಲಾಖೆ ಸಚಿವನಾಗಿದ್ದೇನೆ. ನನ್ನ ಅನುಭವದ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಏಕೆಂದರೆ ಇಷ್ಟೆಲ್ಲಾ ಹಣ ಖರ್ಚು ಮಾಡುವಾಗ ನಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ವಹಿಸಿಕೊಟ್ಟರೆ ಅವರೂ ಮಾಡುತ್ತಿಲ್ಲ, ನಾವೂ ಮಾಡುತ್ತಿಲ್ಲ. ಇದನ್ನು ಹೇಗೆ ಮಾಡಬೇಕೆಂದು ಇನ್ನು ಒಂದು ತಿಂಗಳ ಒಳಗೆ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಈ ಬಗ್ಗೆ ಲೋಕೋಪಯೋಗಿ ಇಲಾಖೆ ವಿಷಯ ಸಮಿತಿಯಲ್ಲಿ ಬಹಳಷ್ಟು ಚರ್ಚೆಯಾಗಿದೆ. ಇಲ್ಲಿ ಎರಡು ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ಒಂದು ಪಿ.ಡಬ್ಲ್ಯೂ.ಡಿ.ಯಿಂದ ನಬಾರ್ಡ್‌ಗೆ, ಅವರು ಕೆಲಸ ಮಾಡಿದ್ದಾರೆ, ಆದರೆ ಮೇಯಿಂಟೆನೆನ್ಸ್ ಮಾಡುತ್ತಿಲ್ಲ. ಆ ಕಡೆಯಿಂದ ಐದು ಕಿ.ಮೀ.ನಬಾರ್ಡ್‌ನಿಂದ ಮಾಡಿದ್ದಾರೆ. ಈ ಕಡೆಯೂ ಐದು ಕಿ.ಮೀ. ನಬಾರ್ಡ್‌ನಿಂದ ಮಾಡಿದ್ದಾರೆ. ಮಧ್ಯೆ ಎರಡು ಕಿಲೋಮೀಟರ್ ರಸ್ತೆ ಅನಾಥವಾಗಿ ಬಿದ್ದಿದೆ. ನಬಾರ್ಡ್‌ನಿಂದ ಮಾಡಿರುವುದಕ್ಕೆ 14,600 ಕಿ.ಮೀ.ರಸ್ತೆಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಪಿ.ಡಬ್ಲ್ಯೂ.ಡಿ. ಅವರಿಗೆ ವರ್ಗಾವಣೆ ಮಾಡಬೇಕೆಂದು ಪ್ರಸ್ತಾವನೆಯನ್ನು ಮಾಡಿ ಆರು ತಿಂಗಳು ಆಯಿತು. ಅದರ ಬಗ್ಗೆ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಅದನ್ನು ನಾವು ತಮ್ಮ ಕಛೇರಿಯಲ್ಲಿ ತಮ್ಮ ಗಮನಕ್ಕೆ ತಂದೆವು. ಇದರ ಜೊತೆಯಲ್ಲಿ ಮಧ್ಯ ಉಳಿದಿರತಕ್ಕಂಥ ಮೂರು ಸಾವಿರ ಕಿ.ಮೀ. ಸೇರಿಸಿ 17,600 ಕಿ.ಮೀ. ಸಹಿತ ಪಿ.ಡಬ್ಲ್ಯೂ.ಡಿ.ಗೆ ಹ್ಯಾಂಡ್ ಓವರ್ ಮಾಡಿ ಅದನ್ನು ಅವರೇ ಮೇಯಿಂಟೇನ್ ಮಾಡಬೇಕೆಂದು ಒತ್ತಾಯವನ್ನು ನಾವು ವಿಷಯ ಸಮಿತಿಯ ಶಿಫಾರಸ್ಸಿನಲ್ಲಿ ಮಾಡಿದ್ದೇವೆ. ಅದನ್ನು ಅವರು ಕನ್ಸಿಡರ್ ಮಾಡಬೇಕು. ಮಧ್ಯೆ ಇರುವಂಥ ರಸ್ತೆ ನಬಾರ್ಡ್‌ನಿಂದ ಆಗಿಲ್ಲ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದಲೂ ಅದನ್ನು ಮಾಡಿಲ್ಲ. ಈ ಕಡೆ ಆ ಕಡೆ ಎಲ್ಲಾ ರಸ್ತೆ ಚೆನ್ನಾಗಿದೆ. ಮಧ್ಯೆ ಮೂರು ಕಿ.ಮೀ. ಏನು ಇದೆ, ಅಲ್ಲಿ ರಸ್ತೆಯೇ ಇಲ್ಲದಂಥ ಪರಿಸ್ಥಿತಿ ಇದೆ. ಅದನ್ನು ಹ್ಯಾಂಡ್ ಓವರ್ ಮಾಡಬೇಕು. 17,600 ಕಿ.ಮೀ. ರಸ್ತೆಯನ್ನು ಹ್ಯಾಂಡ್ ಓವರ್ ಮಾಡತಕ್ಕಂಥ ಪ್ರಸ್ತಾವನೆ ಏನಿದೆ ಅದಕ್ಕೆ ಲೋಕೋಪಯೋಗಿ ಇಲಾಖೆಯುವರು ಮಂಜೂರಾತಿಯನ್ನು ಬೇಗನೇ ಪಡೆದುಕೊಂಡು ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ.ಎಸ್. ಮಹದೇವ ಪ್ರಸಾದ್: ಹಿಂದ ನಬಾರ್ಡ್ ರಸ್ತೆ ಏನಾಗಿದೆ, ಅದನ್ನು ಮೇಯಿಂಟೇನ್ ಮಾಡಲಿಕ್ಕೆ, ಸ್ವಲ್ಪ ಸೈಡ್‌ಡ್ರೈನ್ ಮಾಡದೇ ಇರುವುದರಿಂದ ರಸ್ತೆಗಳು ಹಾಳಾಗುತ್ತಿದೆ. ಆದ್ದರಿಂದ ಈ ಮೇಯಿಂಟೆನೆನ್ಸ್‌ಗೆ ಸ್ವಲ್ಪ ಸೈಡ್‌ಡ್ರೈನ್ ಮಾಡುವುದಕ್ಕೆ ಪ್ರಾವಿಜನ್ ಇಲ್ಲದೇನೇ ತೊಂದರೆಯಾಗಿದೆ.

ಶ್ರೀ ಧರ್ಮಸಿಂಗ್: ಅದರ ಬಗ್ಗೆ ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. ಆರ್.ಡಿ.ಪಿ.ಆರ್. ನವರೂ ಕೂಡ ರೆಫರ್ ಮಾಡಿದ್ದಾರೆ. ಕನೆಕ್ಟಿವಿಟಿ ಇಲ್ಲ. ನಮ್ಮ ಭಾಗದ್ದು ನಾವು ಮಾಡಿದ್ದೇವೆ. ಈ ಎರಡು-ಮೂರು ಕಿ.ಮೀ.ಕನೆಕ್ಟಿವಿಟಿ ಮಾಡತಕ್ಕಂಥಾದ್ದೂ ಕೂಡ ಅಲ್ಲಿ ಇದೆ. ನೀವು ವಿಷಯ ಸಮಿತಿಯಲ್ಲಿ ಚರ್ಚೆ ಮಾಡಿ ನಮಗೆ ಶಿಫಾರಸ್ಸು ಮಾಡಿದ್ದೇ ನಾವು ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕರಡಿ ಸಂಗಣ್ಣ: ಜಿಲ್ಲಾ ಪ್ಯಾಕೇಜ್‌ನಲ್ಲಿ ಗುತ್ತಿಗೆ ಕೆಲಸ ವಹಿಸಿಕೊಟ್ಟಿದ್ದಾರೆ. ಕೊಪ್ಪಳ ಮತ್ತು ಉಡುಪಿ ಜಿಲ್ಲೆಯದ್ದು ರಿಸರ್ಫೇಸಿಂಗ್ ಒಂದು ಕಿ.ಮೀ. ಕೂಡ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ನಾನು ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಭೇಟಿ ಯಾಗಿದ್ದೆ. ಆ ಪ್ರೊಪೋಸಲ್ ಅನ್ನು ತರಿಸಿ ಸೇರಿಸಿಕೊಡುತ್ತೇನೆ ಎಂದು ಹೇಳಿದ್ದರು. ಅದನ್ನು ಸೇರಿಸಿದ್ದೀರಾ ಮತ್ತು ಆ ಕೆಲಸ ಕೈಗೆತ್ತಿಕೊಂಡಿದ್ದೀರಾ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್: ರಿಸರ್ಫೇಸಿಂಗ್ ತೆಗೆದುಕೊಂಡಿಲ್ಲ. ಉಳಿದ ಕೆಲಸ ಮಾಡಿದ್ದೇವೆ. ಅದಕ್ಕೆ ಮತ್ತೆ ಆರು ಕೋಟಿ ರೂ.ಬೇಕಾಗುತ್ತದೆ. ಅದನ್ನು ಸೇರಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಟೇಕನ್‌ಓವರ್ ರಸ್ತೆ ಎಂದು, ಅದು ಜಿಲ್ಲಾ ಪಂಚಾಯತ್ ರಸ್ತೆ ಅಲ್ಲ, ಪಿ.ಡಬ್ಲ್ಯೂ.ಡಿ. ರಸ್ತೆಯೂ ಅಲ್ಲ ಅಥವಾ ಪಂಚಾಯತ್ ರಸ್ತೆನೂ ಅಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಇದು ಗೊತ್ತಿದೆ ನಮ್ಮ ಒಂದು ಜಿಲ್ಲೆಯಲ್ಲೇ ಸುಮಾರು 5 ಸಾವಿರ ಕಿ.ಮೀ.ರಸ್ತೆ ಇದೆ. ಇದೊಂದು ರೀತಿಯಲ್ಲಿ ಅತಂತ್ರ ಸ್ಥಿತಿ. ಯಾರೂ ಅದರ ವಾರ್ಷಿಕ ನಿರ್ವಹಣೆ ಮಾಡುವವರೂ ಇಲ್ಲ. ಕೆಲವು ಮುಖ್ಯ ರಸ್ತೆಗಳು ಇವೆ. ಅವುಗಳಿಗೆ ರಿಪೇರಿ ಸಹ ಇಲ್ಲ. ಮಳೆಗಾಲದಲ್ಲಿ ಮಣ್ಣು ಕೊರೆದುಹೋಗುತ್ತದೆ ಮತ್ತು ಬಸ್ಸುಗಳು ಓಡಾಡುವುದಕ್ಕೆ ಆಗುವುದಿಲ್ಲ. ಈ ರೀತಿ ಅನೇಕ ಸಮಸ್ಯೆಗಳು ಅಲ್ಲಿ ಇವೆ. ನಾನು ಹಿಂದಿನ ಸಲ ಪ್ರಸ್ತಾಪ ಮಾಡಿದಾಗ ತಾವು ಬಜೆಟ್ ಪ್ರಾವಿಜನ್ ಮಾಡಿದ್ದೇವೆ, ಟೇಕನ್ ಓವರ್ ರಸ್ತೆಗಳಿಗೂ ಗ್ರಾಂಟ್ ಕೊಡುತ್ತೇವೆ ಎಂದು ಒಂದು ಪ್ರಶ್ನೋತ್ತರ ಸಂದರ್ಭದಲ್ಲಿ ಹೇಳಿದ್ದೀರಿ. ಆದರೆ ಇವತ್ತಿನ ವರೆಗೂ ನಮ್ಮ ಜಿಲ್ಲೆಯಲ್ಲಿ ಟೇಕನ್ ಓವರ್ ರಸ್ತೆಗಳಿಗೆ ಗ್ರಾಂಟ್ ಕೊಡುತ್ತಿಲ್ಲ. ದಯವಿಟ್ಟು ಈಗ ಅತಂತ್ರ ಸ್ಥಿತಿಯಲ್ಲಿರುವ ಈ ಟೇಕನ್ ಓವರ್ ರಸ್ತೆ ಐದು ಸಾವಿರ ಕಿ.ಮೀ. ಇದೆ, ಅದಕ್ಕೆ ಅನುದಾನ ಸಿಗುವಂತೆ ವಿಶೇಷವಾದ ಅವಕಾಶವನ್ನು ಕೊಡಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ನಬಾರ್ಡ್ ರಸ್ತೆಗಳದ್ದು ಏನಾಗಿದೆ ಎಂದರೆ ಪಿ.ಡಬ್ಲ್ಯೂ.ಡಿ ಯವರು ಜಿಲ್ಲಾ ಪಂಚಾಯತ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಜಿಲ್ಲಾ ಪಂಚಾಯತ್‌ನವರು ತೆಗೆದುಕೊಂಡಿಲ್ಲ ಎನ್ನುತ್ತಾರೆ. ಆದ್ದರಿಂದ ಮಾನ್ಯ ಘೋರ್ಪಡೆ ಯವರೂ ಕೂಡ ಕಳೆದ ಅಧಿವೇಶನದಲ್ಲಿ ಹೇಳಿದ್ದರು, ಏನೆಂದರೆ ನಾವು ಕೆಲವನ್ನು ಪಿ.ಡಬ್ಲ್ಯೂ.ಡಿ.ಗೆ ಕೊಡುವುದಕ್ಕೆ ಸಿದ್ಧರಿಸಿದ್ದೇವೆ ಎಂದು. ಕೆಲವೊಂದು ರಸ್ತೆಗಳು ಈಗ ಹಾಳಾಗಿ ಹೋಗಿವೆ. ಜಿಲ್ಲಾ ಪಂಚಾಯತ್‌ನಲ್ಲಿ ಯೋಜನೇತರ ಹಣ ಏನಾಗಿದೆ ಎಂದರೆ ಹೊಸ ರಸ್ತೆಗಳ ನಿರ್ಮಾಣಕ್ಕೆ ಆಗುತ್ತಿದೆಯೇ ಹೊರತಾಗಿ ಡ್ರೈನೇಜ್ ಆಗಲಿ, ಜಂಗಲ್ ಕ್ಲಿಯರ್ ಮಾಡುವುದಕ್ಕಾಗಲಿ ಆಗುತ್ತಿಲ್ಲ. ಇದರ ಜೊತೆಗೆ ಪಿ.ಡಬ್ಲ್ಯೂ.ಡಿ. ಯಲ್ಲಿ ಒಂದು ಕಿ.ಮೀ. ರಸ್ತೆಯ ಮೇಂಟೆನೆನ್ಸ್‌ಗೆ 16 ಸಾವಿರ ರೂಪಾಯಿಗಳು

ಇದೆ. ಆದರೆ ಜಿಲ್ಲಾ ಪಂಚಾಯಿತಿಯಲ್ಲಿ ಕೇವಲ 4 ಸಾವಿರ ರೂ.ಇದೆ. ಇದರಿಂದ ರಸ್ತೆ ಉತ್ತಮವಾಗಿಡಲು ಕಷ್ಟವಾಗುತ್ತದೆ. ಕೆಲಸ ಚೆನ್ನಾಗಿ ಆಗಿದೆ, ಆದರೆ ಅದನ್ನು ಉತ್ತಮವಾಗಿ ಇಡಬೇಕೆದಂರೆ ನಬಾರ್ಡ್‌ನವರು ಸ್ವಲ್ಪ ಹಣವನ್ನೂ ಜಾಸ್ತಿ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಇದನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡಬೇಕೆಂದು ತಮ್ಮ ಮೂಲಕ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಈ ಪ್ರಶ್ನೆಗೆ ಉತ್ತರ ಕೊಡಬೇಕೆಂದರೆ, ಕೆಲವು ವರ್ಷಗಳ ಹಿಂದೆ ಈ ಪಟ್ಟಿ ಸಮಗ್ರವಾಗಿ ಇರಲಿಲ್ಲ. ಗ್ರಾಮೀಣ ಭಾಗದಲ್ಲಿ ಸುಮಾರು 70 ಸಾವಿರ ಕಿ.ಮೀ. ರಸ್ತೆ ಇದೆಯೆಂದು ಪಟ್ಟಿ ಇತ್ತು . ಎರಡು ವರ್ಷಗಳ ಹಿಂದೆ ಆ ರೀತಿ ಇತ್ತು. ಈಗ ಆ ಪಟ್ಟಿಯನ್ನು ಸರಿಮಾಡಿದ್ದೇವೆ, ಅದರಂತೆ ಗ್ರಾಮೀಣ ಭಾಗದಲ್ಲಿ ಒಂದು ಲಕ್ಷ ಕಿ.ಮೀ. ಗಿಂತ ಜಾಸ್ತಿ ರಸ್ತೆ ಇದೆಯೆಂದು ತಿಳಿದುಬಂದಿದೆ. ಪಟ್ಟಿ ಮಾಡುವಾಗ ಏನಾದರು ರಸ್ತೆಗಳು ಬಿಟ್ಟು ಹೋಗಿದ್ದರೆ ಅದು ರಸ್ತೆಗಳ ತಪ್ಪಲ್ಲ ನಿಮ್ಮ, ನಮ್ಮ ತಪ್ಪಲ್ಲ. ಅದನ್ನು ಸರಿ ಮಾಡಬೇಕು. ಅದಕ್ಕೂ ಮೇಂಟೆನೆನ್ಸ್ ಗ್ರಾಂಟ್ ಕೊಡುವ ವ್ಯವಸ್ಥೆಯಾಗಬೇಕು. ಈಗ ಅದು ಯಾವುದೇ ರಸ್ತೆ ಇರಲಿ, ಪಿ.ಡಬ್ಲ್ಯು.ಡಿ. ರಸ್ತೆ ಇರಲಿ ಜಿಲ್ಲಾ ಪಂಚಾಯಿತ್ ರಸ್ತೆ ಇರಲಿ. ಗ್ರಾಮೀಣ ಭಾಗದ ರಸ್ತೆಗಳಿರಲಿ, ಅದರ ಮ್ಯಾಪ್‌ನ್ನು ಮಾಡಬೇಕೆಂದು ಹೇಳಿದ್ದೇವೆ ಮತ್ತು ಒಂದು ರಸ್ತೆಯನ್ನು ಬಿಡದಂತೆ ಆ ಮಾಪ್‌ನಲ್ಲಿ ಸೇರಿಸಬೇಕೆಂದು ಆದೇಶ ಹೊರಡಿಸಿದ್ದೇವೆ. ಅದು ಆದನಂತರ ಈ ರೀತಿ ಸಮಸ್ಯೆ ಬರುವುದಿಲ್ಲ. ಎಲ್ಲೆಲ್ಲಿ ರಸ್ತೆಗಳಿದ್ದೂ ಪಟ್ಟಿಯಲ್ಲಿ ಇಲ್ಲ ಸೇರಿಸಬೇಕಾಗುತ್ತದೆ, ಅದಕ್ಕೂ ಮೇಂಟೆನೆನ್ಸ್ ಗ್ರಾಂಟ್‌ನ್ನು ಕೊಡಬೇಕಾಗತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಒಂದು ಕಡೆ ಹಣ ಇಲ್ಲದ್ದು ತೊಂದರೆ ಅವರಿಗೆ 35 ಸಾವಿರ ರೂಪಾಯಿ ರಸ್ತೆಗೆ ಕೊಟ್ಟಾ ಅವರು ರಸ್ತೆ ಬೆಳಸಿಲ್ಲ. ನಿಮಗೆ ಒಂದು ಕಡೆ ಹಣ ಬರುವ ಕಡಿಮೆ. ಆ ದುಡ್ಡನ್ನು ಹೇಗೆ ತಿಂದು ಹಾಕುತ್ತಾರೆ ಎಂಬ ಬಗ್ಗೆ ಉದಾರಹಣೆ ಕೊಡುತ್ತೇನೆ. ಬಂದ ಹಣವೂ ಅಪವ್ಯಯವಾಗಿ ಹೋದರೆ, ನೋಡುವವರೇ ಇಲ್ಲ, ದಿಕ್ಕೇ ಇಲ್ಲವೆಂದರೆ ಮುಂದೆ ಹೇಗೆ ಮಾಡುವುದು? ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ಪ್ರಶ್ನೆಯನ್ನು ಹಾಕಿದ್ದೆ. ಮುಂಡರಗಿ ತಾಲ್ಲೂಕಿನಲ್ಲಿ, ಜಿಲ್ಲಾ ಪಂಚಾಯಿತಿಯಿಂದ ಡಾಂಬರ್ ರಸ್ತೆ ಮಾಡಲು ಪ್ರಾರಂಭ ಮಾಡಿದ್ದಾರೆ. ಆ ಕೆಲಸವನ್ನು ಮಾಡಲು ಪ್ರಾರಂಭ ಮಾಡಿದಾಗ ಜನರು ಬಂದು ನನಗೆ ತಕರಾರು ಮಾಡಿದರು. ರಸ್ತಯನ್ನು ಬಹಳ ಕೆಡಿಸುವುದಕ್ಕೆ ಹತ್ತಿದ್ದಾರೆಂದು ಹೇಳಿದರು. ಸರಿ ನಾನು ಹೋಗಿ ನೋಡಿದೆ. ಅನಂತರ ನಾನೇ ನಿಮ್ಮ ಸಿ.ಇ.ಓ ಮತ್ತು ಇ.ಇ. ಅವರನ್ನು ಅಲ್ಲಿಗೆ ಕರೆದುಕೊಂಡು ಹೋದೆ, ಗುಡ್ಡದಿಂದ ಕಲ್ಲನ್ನು ತಂದು ಹಾಕಿ ರೋಲ್ ಹೊಡೆಯಲು ಹತ್ತಿದ್ದಾರೆ, ಇದರ ಬಗ್ಗೆ ಬರೆದು ಕೊಟ್ಟರೂ ಇದುವರೆಗೆ ಯಾರ ಮೇಲೂ ಕ್ರಮ ತೆಗೆದುಕೊಳ್ಳಲಾಗಿಲ್ಲ, ಇದಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಹಾಕಿದ್ದೆ, ತಾವೇ ಉತ್ತರ ಕೊಟ್ಟಿದ್ದೀರಿ. ಮುಂಡರಗಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದಿಂದ ಬೀಡಣಾಳ್, ಬೆಣ್ಯಾಳ್ ರಸ್ತೆ ಹಾಗೂ ಸಿಂಗಟಲೂರು ರಸ್ತೆ ಸಿಂಗಟಲೂರು ಸ್ಮಶಾಣಕ್ಕೆ ಹೋಗುವ ರಸ್ತೆ, ಇತರೆ ಕಾಮಗಾರಿಯಲ್ಲಿ ಕಳಪೆ ಮಟ್ಟದ ಜಲ್ಲಿ ವಗೈರೆ ಹಾಕಿದ್ದು ಮತ್ತು ಸರಿಯಾಗಿ ಕೆಲಸ ಮಾಡದೆ ಹಣದ ವೆಚ್ಚವನ್ನು ತೋರಿಸಿದ್ದು ಕಳಪೆ ಮಟ್ಟದ ಕಾಮಗಾರಿಯನ್ನು ಸ್ವತ: ಜಿಲ್ಲಾ ಪಂಚಾಯಿತಿಯ

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರು ಪರಿಶೀಲನೆ ಮಾಡಿದ್ದು ನಿಜವೇ ಎಂಬ ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಕಾಮಗಾರಿ ಕಳಪೆ ಮಟ್ಟದ್ದೇ ಆಗಿದ್ದಲ್ಲಿ ಇದರ ಬಗ್ಗೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂಬ ಪ್ರಶ್ನೆಗೆ 'ಈ ಕೆಲಸ ನಿರ್ವಹಣೆ ಮಾಡಿದ ಅಧಿಕಾರಿಯ ಮೇಲೆ ಇಲಾಖೆಯ ವಿಚಾರಣೆ ಪ್ರಗತಿಯಲ್ಲಿದೆ'ಯೆಂದು ಉತ್ತರ ಕೊಟ್ಟಿದ್ದೀರಿ.

ಶ್ರೀ ಎಸ್.ಹೆಚ್. ಪುಟ್ಟ ರಂಗನಾಥ್: ಬಹುತ್ತೇಕ ಜಿಲ್ಲಾ ಪಂಚಾಯಿತಿಗಳಲ್ಲಿ ಜಿಲ್ಲಾ ಪಂಚಾಯಿತಿ ಮೆಂಬರ್‌ಗಳ ಗಂಡಂದಿರೇ ಕೆಲಸ ಮಾಡುತ್ತಿರತಕ್ಕದ್ದು.

ಶ್ರೀ ಎಸ್.ಎಸ್. ಪಾಟೀಲ್: ಅದು ಎಲ್ಲರಿಗೂ ಗೊತ್ತಿದೆ. ಇದು ರಾಜ್ಯದಲ್ಲೆಲ್ಲಾ ನಡೆಯತಕ್ಕದ್ದು. ಶ್ರೀಮತಿ ಮೋಟಮ್ಮನವರೇ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯರಾಗಿ ದಯವಿಟ್ಟು ತಾವು ಸ್ವಲ್ಪ ಹೆಣುಮಕ್ಕಳನ್ನು ತಯಾರು ಮಾಡಬೇಕು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಹೇಳುವುದನ್ನು ನೋಡಿದರೆ ಮಹಿಳೆಯರೇ ಗುತ್ತಿಗೆದಾರರಾಗಿ ಬರಲಿ ಎಂದೋ.

ಶ್ರೀ ಎಸ್.ಎಸ್. ಪಾಟೀಲ್: ಈ ಎಲ್ಲಾ ಕಾಮಗಾರಿಗಳನ್ನು ಗುಣನಿಯಂತ್ರಣ ವಿಭಾಗದಿಂದ ತನಿಖೆ ಮಾಡಿಸಿ ಕ್ರಮ ಕೈಗೊಳ್ಳಲಾಗುವುದೇ? ಮಾನ್ಯ ಘೋರ್ಪಡೆಯವರೆ, ತಮ್ಮಲ್ಲಿ ಗುಣ ನಿಯಂತ್ರಣ ವಿಭಾಗವಿದೆಯೇ ಪಿ.ಡಬ್ಲ್ಯೂ.ಡಿ. ಗಾದರೂ ಕೊಡಿ, ಅವರು ಬಂದಾದರೂ ನೋಡಲಿ. ಆದ್ದಿರಂದ ತಮ್ಮಲ್ಲಿ ಗುಣನಿಯಂತ್ರಣ ವಿಬಾಗವಾಗಬೇಕು, ಇಲ್ಲದಿದ್ದರೆ ತಮ್ಮ ಕಾಮಗಾರಿಗಳೆಲ್ಲಾ ಹೊಲಸಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ: ಗುಣ ಮಟ್ಟದ ಬಗ್ಗೆ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ವ್ಯವಸ್ಥೆ ಎಲ್ಲಾ ಕಡೆ ಇರಬೇಕೆಂದು ಎಷ್ಟೋ ಸಲ ನಾನೇ ಹೇಳಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್: ಕೇವಲ ಹೇಳಿದರೇನು ಉಪಯೋಗ? ತಾವು ಮಾಡಲಿಲ್ಲವಲ್ಲಾ? ಕಾಮಗಾರಿ ಕಳಪೆಯಾಗಲು ಹತ್ತಿವೆ, ಮೂರನೆ ಪಾರ್ಟಿಯಿಂದ ಇನ್ಸ್‌ಪೆಕ್ಷನ್ ಮಾಡಬೇಕೆಂದು ತಾವು ಹೇಳಿದರಿ, ಆದರೆ ಮಾಡಲಿಲ್ಲ, ಇಲ್ಲದಿದ್ದರೆ ಈ ವ್ಯವಸ್ಥೆಯನ್ನು ತೆಗೆದಾದರೂ ಬಿಡಿ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ ಮೇಲೆ ಅದನ್ನು ಮಾಡಿ.

ಶ್ರೀ ಎಂ.ವೈ. ಘೋರ್ಪಡೆ: ಎಲ್ಲೆಲ್ಲಿ ಥರ್ಡ್ ಪಾಟಿ ಇನ್ಸ್‌ಪೆಕ್ಷನ್ ಮಾಡಬೇಕು ಎಂದು ತಾವು ಜಿಲ್ಲಾ ಪಂಚಾಯಿತಿಯವರಿಗೆ ಹೇಳಿ. ನಾವು ಇಲ್ಲಿಂದ ಆದೇಶ ಕಳುಹಿಸಿದ್ದೇವೆ, ಥರ್ಡ್ ಪಾರ್ಟಿಯಿಂದ ಇನ್ಸ್‌ಪೆಕ್ಷನ್ ಮಾಡಲು ಅವಕಾಶವಿದೆ.

ಶ್ರೀ ಎಸ್.ಎಸ್. ಪಾಟೀಲ್: ತಾವು ಹೇಳಬೇಕು. ಹಣವನ್ನು ರಿಲೀಸ್ ಮಾಡುವವರು ತಾವು. ನೀವು ಅದನ್ನು ನೋಡಬೇಕಾಗುತ್ತದೆ. ಗುಣನಿಯಂತ್ರಣ ಮಂಡಳಿ ಇಲ್ಲ. ತಮ್ಮ ಕಾಮಗಾರಿಗಳಲ್ಲಿ ಗುಣ ನಿಯಂತ್ರಣ ಇಲ್ಲವೇ ಇಲ್ಲ. ತಾವು ಕಟ್ಟಿರುವ ಕನ್ನಡ ಶಾಲೆಗಳೆಲ್ಲಾ ಇನ್ನೆರಡು ವರ್ಷದಲ್ಲಿ ಬಿದ್ದು ಹೋಗುತ್ತವೆ, ಕೆಲವು ಒಳಕ್ಕೆ ಹೋಗುವ ಮೊದಲೇ ಬಿದ್ದಿದ್ದಾವೆ. ಅಷ್ಟು ಗುಣ ಮಟ್ಟ ಇಲ್ಲ. ಏಕೆಂದರೆ ಜಿಲ್ಲಾ ಪಂಚಾಯಿತಿಯ ಮೆಂಬರ್ರೇ ಕಾಂಟ್ರಾಕ್ಟ್ ಮಾಡುತ್ತಾರೆ, ಅನಂತರ ಅವರು ಮತ್ತೊಬ್ಬರಿಗೆ ಸಬ್ ಕಾಂಟ್ರಾಕ್ಟ್ ಕೊಟ್ಟಿರುತ್ತಾರೆ, ನೂರು ರೂಪಾಯಿಯ ಕೆಲಸವನ್ನು 40 ರೂಪಾಯಿಗೇ ಮುಗಿಸಿ 60 ರೂಪಾಯಿ ತಿನ್ನುತ್ತಾರೆ.

ಪಿ.ಡಬ್ಲ್ಯೂ.ಡಿ. ಯಲ್ಲಿ 80 ರೂಪಾಯಿ ಕೆಲಸ ಮಾಡಿ. 20 ರೂಪಾಯಿ ತಿನ್ನುತ್ತಾರೆ. ಆದರೆ ಇವರು ಪೂರ್ಣವಾಗಿ ತಿನ್ನುತ್ತಾರೆ. ಅಧಿಕಾರ ವಿಕೇಂದ್ರೀಕರಣವೆಂದರೆ ಭ್ರಷ್ಟಾಚಾರದ ವಿಕೇಂದ್ರೀಕರಣವಾಗಿದೆ. ಭ್ರಷ್ಟಾಚಾರ ಅತೀ ಹೆಚ್ಚಾಗಿದೆ. ದಯವಿಟ್ಟು ಅದನ್ನು ಉಳಿಸಬೇಕಾಗುತ್ತದೆ. ಅದಕ್ಕೆ ನನ್ನದೊಂದು ಸಲಹೆ ಇದೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆಯ ಸಚಿವರು): ಮೊದಲು ಇಲ್ಲಿ ಬೆಂಗಳೂರಿನಲ್ಲಿ ಇತ್ತು, ನಾನು ಬಂದಮೇಲೆ ಧಾರವಾಡದಲ್ಲಿ ಮಾಡಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲಿ ಕ್ವಾಲಿಟಿ ಕಂಟ್ರೋಲ್ ಡಿವಿಜನ್‌ನ್ನು ವಿ ಹ್ಯಾವ್ ಸ್ಟಾರ್ಟೆಡ್. ಅದು ಎಲ್ಲಾ ಕಡೆ ಕೆಲಸ ಮಾಡುತ್ತಿದೆ. ಕೇರಳಾದಲ್ಲಿ ಪೀಪಲ್ ಆ್ಯಕ್ಷನ್ ಕಮಿಟಿ ಎಂದು ಇದೆ. ಎಲ್ಲಾ ಕಡೆ ಸಾರ್ವಜನಿಕರೂ ಕೂಡ ಪ್ರತಿಯೊಂದು ಕೆಲಸ ಆದಾಗ ಸರ್ಟಿಫೈ ಮಾಡಿದರೆ ಮಾತ್ರ ಬಿಲ್ ಆಗುತ್ತದೆ. ಅದರ ಬಗ್ಗೆ ವಿಚಾರ ಮಾಡಿ ಅದು ಕರ್ನಾಟದಲ್ಲಿ ಸಾಧ್ಯವಿಲ್ಲವೆಂದು ಹೇಳಿ, ಪ್ರೊಫೆಸರ್ ಜನ್ಮೋ ,ಮತ್ತು ವಿ.ರಾಘವನ್ ಥರ್ಡ್ ಫಾರ್ಟಿ,:, ಶಿಕಾರಿಪುರದಲ್ಲಿ ಕಾಮಗಾರಿ ಸರಿಯಾಗಿ ಆಗಿಲ್ಲವೆಂದು ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು. ನಾವು ಆ ಇಬ್ಬರನ್ನೂ ಅಲ್ಲಿಗೆ ಕಳುಹಿಸಿದ್ದೇವೆ, ರಾಯಚೂರಿಗೆ ಕಳುಹಿಸಿದ್ದೇವೆ, ಬೀದರ್‌ಗೆ ಕಳುಹಿಸಿದ್ದೇವೆ. ಅಲ್ಲಿ 95 ಲಕ್ಷ ರೂ. ಹಣ ದುರುಪಯೋಗವಾಗಿದೆ, ಅದಕ್ಕೆ ಸಂಬಂಧಿಸಿದಂತೆ 7 ಜನ ಇಂಜಿನಿಯರ್‌ಗಳನ್ನು ಸಸ್‌ಪೆಂಡ್ ಮಾಡಿದ್ದೇವೆ, ನಾವೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ, ಆದರೆ ತಾವು ಮಾಡಿಯೇ ಇಲ್ಲವೆಂದು ಹೇಳತಕ್ಕ ಧಾಟಿ ನೋಡಿದರೆ ಪತ್ರಿಕೆಯವರೂ ನಂಬುವಂತಾಗುತ್ತದೆ. ನಾವು ಒಂದೇ ಸಲ ಎಲ್ಲಾ ಕಡೆ ಮಾಡಿದ್ದೇವೆ ಎಂದು ಹೇಳುವುದಿಲ್ಲ, At least this Govt. has started this.

ಶ್ರೀ ಎಸ್.ಎಸ್. ಪಾಟೀಲ್: ದಯವಿಟ್ಟು ತಮ್ಮನ್ನು ಕರೆದುಕೊಂಡು ಹೋಗುತ್ತೇನೆ, ಇದರ ಬಗ್ಗೆ ವಿವಾದವೇ ಬೇಡ, ನೀವಿಬ್ಬರೂ ಬನ್ನಿ, ನಾನೂ ಬರುತ್ತೇನೆ, ಅವರ ಮತ್ತು ನಿಮ್ಮ ಗುಣ ಎರಡನ್ನೂ ನೋಡಿಬಿಡೋಣ. ರಾಜ್ಯದ ರಸ್ತೆಗಳನ್ನು ನೋಡಿಬರೋಣ. ಇದರ ಬಗ್ಗೆ ನಾನೇನೂ ಅಲಿಗೇಷನ್ ಮಾಡಲು ಹೊರಟಿಲ್ಲ. ಇರತಕ್ಕ ವಿಚಾರವನ್ನು ಹೇಳುತ್ತಿದ್ದೇನೆ. ನಿಮ್ಮ ಮೇಲೆ ಅಲಿಗೇಷನ್ ಆಗಿ ನೀವು ತಿಂದಿದ್ದೀರೆಂದು ನಾನು ಹೇಳುತ್ತಿಲ್ಲ. ಆದರೆ ರಾಜ್ಯದಲ್ಲಿ ನಡೆಯುತ್ತಿರುವುದು ಕಳಪೆ ಕಾಮಗಾರಿ ಎಂದು ಹೇಳುತ್ತಿದ್ದೇನೆ. ಹಿಂದೆ ಡಿ.ಎಲ್.ಬಿ.ಗಳು ಇತ್ತು. ಆಗ ಏನಾಗುತ್ತಿತ್ತೆಂದರೆ, ಕಟ್ಟಿ ಹಾಕುತ್ತಿದ್ದರು ಮತ್ತು ಅಳೆಯುತ್ತಿದ್ದರು, ಆದರೆ ಈಗ ಅಳೆಯುವವರೂ ಇಲ್ಲ ನೋಡುವವರೂ ಇಲ್ಲ. ಪಿ.ಡಬ್ಲ್ಯೂ.ಡಿ.ಯದು ಮತ್ತು ಅದರ ಹಣೆಬರಹ ಎರಡೂ ಒಂದೇ ಆಗಿದೆ. ಅವರು ಕಟ್ಟಿಹಾಕಿ ಮಾಡಿರುತ್ತಾರೆಯೇ ಎಂಬ ಬಗ್ಗೆ ತಮ್ಮನ್ನು ಕರೆದುಕೊಂಡು ಹೋಗುತ್ತೇನೆ. ಈ ಮಾತಿಗೆ ಚಾಲೆಂಜ್ ಕೊಡುತ್ತೇನೆ, ಇದು ನಡೆಯತಕ್ಕದ್ದು ಇದನ್ನು ಹೇಗೆ ಬಿಗಿಯಾಗಿ ಇಡುತ್ತೀರಿ ಎಂಬ ಬಗ್ಗೆ ಸಲಹೆ ಮಾಡುತ್ತೇನೆ. ನನಗೆ ತಿಳಿದ ಮಟ್ಟಿಗೆ ಜಿಲ್ಲಾ ಪಂಚಾಯಿತಿಯ ಇಂಜಿನಿಯರಿಂಗ್ ವಿಭಾಗ ಏನಿದೆ ಅದು ನನಗೆ ತಿಳಿದಮಟ್ಟಿಗೆ ಬೇಕಾಗಿಲ್ಲ. ಅದನ್ನು ತೆಗೆದುಬಿಡಿ. ತಮ್ಮಲ್ಲಿ ಲ್ಯಾಂಡ್ ಆರ್ಮಿಯೆಂದು ಇದೆ, ಅದರ ಬಗ್ಗೆಯೂ ನನ್ನಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲ. ಆದರೂ ಅದನ್ನು ಸ್ವಲ್ಪ ಇಂಪ್ರೂವ್ ಮಾಡಿ. ಇಲ್ಲಿ ಅವರಿಗೆ ಪಗಾರವು ಇದೆಗಿಗಾರವೂ ಇದೆ. ಆದರೆ ಲ್ಯಾಂಡ್ ಆರ್ಮಿಯವರಿಗೆ

ಯಾರೂ ಪಗಾರ ಕೊಡುವುದಿಲ್ಲ, ಅವರಿಗೆ ಸರ್ಕಾರಿ ಪಗಾರ ಇಲ್ಲ. ಅವರೇ ದುಡಿದು ಲಾಭಾ ಮಾಡಿಕೊಂಡು ತೆಗೆದುಕೊಳ್ಳಬೇಕು. ಆದ್ದರಿಂದ ತಾವು ಲ್ಯಾಂಡ್ ಆರ್ಮಿಯನ್ನು ಇಟ್ಟುಕೊಂಡುಬಿಡಿ. ಇಲ್ಲಿರುವ ಇಂಜಿನಿಯರ್‌ಗಳನ್ನು ತೆಗೆದು ಅವರಿಗೆ ಕಳುಹಿಸಿಬಿಡಿ. ಇದರಿಂದ ಸರ್ಕಾರಕ್ಕೆ ಪಗಾರವಾದರೂ ಉಳಿಯುತ್ತದೆ.

ಶ್ರೀ ಆರಗಜ್ಞಾನೇಂದ್ರ: ಮಾನ್ಯ ಪಾಟೀಲರೆ, ತಮಗೇನೋ ಲ್ಯಾಂಡ್ ಆರ್ಮಿಯ ಬಗ್ಗೆ ಒಳ್ಳೆಯ ಅಭಿಪ್ರಾಯವಿರಬಹುದು, ಆದರೆ ನಮಗೇನೋ ಬಹಳ ಕಹಿಯ ಅನುಭವ ಲ್ಯಾಂಡ್ ಆರ್ಮಿಯಿಂದಾಗಿದೆ. ಏಕೆಂದರೆ, ಅವರೇ ಎಸ್ಟಿಮೇಟ್, ಪ್ಲಾನ್ ಬಿಲ್ಲನ್ನು ಮಾಡಿಕೊಳ್ಳುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಹಿರಿಯ ಸದಸ್ಯರು ಲ್ಯಾಂಡ್ ಆರ್ಮಿ ಬಗ್ಗೆ ಪ್ರಶಂಸೆ ಮಾಡುತ್ತಿದ್ದಾರೆ, ಅವರು ಸೈಜ್ ಕಲ್ಲನ್ನು ಹೊತ್ತು ಹಾಕುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಒಳ್ಳೆಯ ಅಧಿಕಾರಿಯನ್ನು ಹಾಕಿದರೆ ಏನಾದರೂ ಮಾಡಬಹುದೇನೋ.

ಶ್ರೀ ಎಸ್.ಎಸ್. ಪಾಟೀಲ್: ನಾನು ಮಾತನಾಡುವುದನ್ನು ಪೂರ್ಣ ಕೇಳಿರಿ. ನನಗೆ ಲ್ಯಾಂಡ್ ಆರ್ಮಿ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಆದರೆ, ಅದನ್ನು ಸುಧಾರಿಸಿ, ಸರ್ಕಾರಕ್ಕೆ ಪಗಾರವಾದರೂ ಉಳಿಯುತ್ತದೆ. ಇವರ ಪಗಾರ ಹೆಚ್ಚಿ, ಲ್ಯಾಂಡ್ ಆರ್ಮಿಗಿಂತ ಕೆಟ್ಟದ್ದಾಗಿದೆ ನಿಮ್ಮ ಕೆಲಸ. ಈ ಕಡೆ ಪಗಾರವನ್ನೂ ತೆಗೆದುಕೊಳ್ಳುತ್ತಾರೆ, ಆ ಕಡೆ ಯಾವ ಕೆಲಸವೂ ಆಗುವುದಿಲ್ಲ. ಇದನ್ನು ಹೇಳುತ್ತಿದ್ದೇನೆ. ಆದ್ದರಿಂದ, ಕನಿಷ್ಟ ಲ್ಯಾಂಡ್ ಆರ್ಮಿಯನ್ನು ಇಂಪ್ರೂವ್ ಮಾಡಿ. ಇಲ್ಲದಿದ್ದರೆ, ಅದನ್ನು ತೆಗೆದು ಬಿಡಿ. ಇದನ್ನು ಇಟ್ಟುಕೊಳ್ಳುವ ಹಾಗಿದ್ದರೆ, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗವನ್ನು ತೆಗೆಯಿರಿ. ನೀವು ಲ್ಯಾಂಡ್ ಆರ್ಮಿ ಒಂದನ್ನೇ ಇಟ್ಟುಕೊಳ್ಳಿ, ಅದಕ್ಕೆ ಇನ್ನಷ್ಟು ಸಿಬ್ಬಂದಿ ಕೊಡಿ. ಅದನ್ನು ಸರಿಯಾಗಿ ಮಾಡಿ. ಅಂದರೆ, ಅವರ ಕೆಲಸದಲ್ಲೇ ಲಾಭಾ ಮಾಡಿ, ತೆಗೆದುಕೊಳ್ಳುತ್ತಾರೆ. ಅವರೂ ಕೂಡ ಒಬ್ಬ ಕಾಂಟ್ರಾಕ್ಟರ್ ಇದ್ದಹಾಗೆ. ಅವರಿಗೆ ಸರ್ಕಾರದ ಪಗಾರವೇ ಇಲ್ಲ. ಅವರೇ ದುಡಿದು ಪಗಾರ ತೆಗೆದುಕೊಳ್ಳುತ್ತಾರೆ. ಇಲ್ಲಿ ಪಗಾರವನ್ನು ತೆಗೆದುಕೊಳ್ಳುತ್ತಾರೆ, ಗಿಗಾರವನ್ನು ತೆಗೆದುಕೊಳ್ಳುತ್ತಾರೆ. ನಿಮ್ಮಲ್ಲಿ ಎರಡೂ ನಡೆದಿದೆ. ಮತ್ತೆ ಆ ಕೆಲಸಗಳೂ ಕಳಪೆ ಇವೆ. ಅದನ್ನು ಸುಧಾರಿಸಬೇಕಾದರೆ ಕನಿಷ್ಟಪಕ್ಷ ನಿಮ್ಮ ಇಂಜಿನಿಯರಿಂಗ್ ವಿಭಾಗವನ್ನಾದರೂ ಇಟ್ಟುಕೊಳ್ಳಿ ಇಲ್ಲವೇ ಲ್ಯಾಂಡ್ ಆರ್ಮಿಯನ್ನಾದರೂ ಇಟ್ಟುಕೊಳ್ಳಿ. ಇವೆರಡರಲ್ಲಿ ಒಂದನ್ನು ಇಟ್ಟುಕೊಳ್ಳಿ.

ಶ್ರೀ ಎಂ.ವೈ.ಘೋರ್ಪಡೆ: ಅಧ್ಯಕ್ಷರೇ, ಈ ಪ್ರಶ್ನೆಯನ್ನು ಎಲ್ಲಾ ಶಾಸಕರಿಗೆ ಕೇಳಿದರೆ, ಎಷ್ಟೋ ಜನ ಶಾಸಕರು ಈ ಲ್ಯಾಂಡ್ ಆರ್ಮಿಬೇಡ, ನಮಗೆ ಜಿಲ್ಲಾ ಪಂಚಾಯ್ತಿ ಇಂಜಿನಿಯರಿಂಗ್ ವಿಭಾಗವೇ ಬೇಕು ಎಂದು ಹೇಳುತ್ತಾರೆ. ಆ ಸ್ವಾತಂತ್ರ್ಯವನ್ನು ಅವರು ಕೊಡಬೇಕಾಗುತ್ತದೆ. ಡಿ.ದೇವರಾಜ ಅರಸು ಅವರ ಕಾಲಕ್ಕೆ ನಾವೇ ಲ್ಯಾಂಡ್ ಆರ್ಮಿಯನ್ನು ಪ್ರಾರಂಭ ಮಾಡಿದ್ದು. ಅದರ ಉದ್ದೇಶ ಏನೆಂದರೆ ಒಂದು ಕಾಂಪಿಟೇಷನ್ ಇರಲಿ ಎಂದು. ಗುಣಮಟ್ಟ ಯಾವ ರೀತಿ ಮಾಡಲಿಕ್ಕೆ ಸಾಧ್ಯ, ಆ ಟೆಸ್ಟ್‌ಗೆ ಎಷ್ಟು ಖರ್ಚಾಗುತ್ತದೆ ಅದನ್ನು ಕಂಪೇರ್ ಮಾಡಲಿಕ್ಕೆ ಇರಲಿ ಎಂದು ಇದನ್ನು ಮಾಡಿದ್ದು. ಇವತ್ತು ಲ್ಯಾಂಡ್ ಆರ್ಮಿಯೂ ಇದೆ, ಇಂಜಿನಿಯರಿಂಗ್ ವಿಭಾಗವೂ ಇದೆ. ನಾವು ಯಾವುದನ್ನು ರದ್ದು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಅಲ್ಲಿಯೂ ಇಂಜಿನಿಯರ್ಸ್ ಇದ್ದಾರೆ, ಇಲ್ಲಿಯೂ ಇಂಜಿನಿಯರ್ಸ್ ಇದ್ದಾರೆ, ಅದು ನಮಗೆ ಗೊತ್ತಿದೆ. ಇವರು ಅವರೇ, ಅವರೂ ಇವರೇ. ಕನಿಷ್ಟ ಅವರಿಗೆ ಪಗಾರವೇ ಇಲ್ಲ. ಅವರೇ ದುಡಿದು ತಿನ್ನುತ್ತಾರೆ. ಇವರು ಸರ್ಕಾರದಿಂದ ಪಗಾರವನ್ನೂ ತೆಗೆದುಕೊಳ್ಳುತ್ತಾರೆ, ಅವರಿಗಿಂತ ಕೆಟ್ಟದಾದ ಕೆಲಸವನ್ನು ಮಾಡುತ್ತಾರೆ ಮತ್ತು ಅವರಿಗಿಂತ ಹೆಚ್ಚು ದುಡ್ಡನ್ನು ತಿನ್ನುತ್ತಾರೆ. ನೀವು ಅಲ್ಲಿ ಹೋಗಿ ತೆಗೆದು ನೋಡಿ.

ಮಾನ್ಯ ಸದಸ್ಯರು: ಅಧ್ಯಕ್ಷರೇ, ಇವತ್ತು ಲ್ಯಾಂಡ್ ಆರ್ಮಿ ಏನಿದೆ, ಪ್ರಧಾನ ಮಂತ್ರಿಯವರ ಸಡಕ್ ರೋಡ್‌ಗಳು ಮತ್ತು ಜಿಲ್ಲಾ ಪಂಚಾಯ್ತಿಯ ರೋಡ್‌ಗಳನ್ನು ಅವರಿಗೆ ಕೊಟ್ಟಿದ್ದಾರೆ. ಅವರ ಹತ್ತಿರ ಹಾಟ್‌ಮಿಕ್ಸ್ ಪ್ಲಾಂಟ್, ಫೇವರ್ಸ್ ಏನು ಇಲ್ಲ. ಎಲ್ಲಾ ಮಿಷನರಿಯನ್ನೂ ಅವರು ಹೊರಗಡೆಯಿಂದ ತರಬೇಕು. ಅವರಿಗೆ ಈ ತರಹ ಕೆಲಸಗಳನ್ನು ಕೊಡುವುದು ನನಗನ್ನಿಸಿದಂತೆ ತಪ್ಪು ಎಂದು ಹೇಳುತ್ತೇನೆ. ಅವರು ಎಲ್ಲವನ್ನೂ ಹೊರಗಿಂದ ತರಬೇಕು ಮತ್ತು ಅವರಿಗೆ ಯಾವುದೇ ಅನುಭವ ಇಲ್ಲ. ಅಂತಹವರಿಗೆ ಇವತ್ತು ಪ್ರಧಾನ ಮಂತ್ರಿಯವರ ಸಡಕ್ ಯೋಜನೆಯ ರಸ್ತೆಗಳು ಮತ್ತು ಜಿಲ್ಲಾ ಪಂಚಾಯ್ತಿ ರೋಡ್‌ಗಳನ್ನು ಕೊಟ್ಟಿದ್ದಾರೆ.

ಶ್ರೀ ಎಂ.ವೈ.ಘೋರ್ಪಡೆ: ಲ್ಯಾಂಡ್ ಆರ್ಮಿಗಾದರೂ ಮನಾಪಲಿ ಕೊಡುವುದು ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಹಾಗಾದರೆ ಲ್ಯಾಂಡ್ ಆರ್ಮಿಯನ್ನು ಬಿಗಿ ಮಾಡಿ. ಅಲ್ಲಿ ಒಳ್ಳೆಯ ಇಂಜಿನಿಯರುಗಳನ್ನು ಇಡಿ. ಆದರೆ, ಇವತ್ತು ಇಲ್ಲಿಯೂ ಇಂಜಿನಿಯರ್ಸೇ, ಅಲ್ಲಿಯೂ ಇಂಜನಿಯರ್ಸೇ. ಇದೇ ರೀತಿ ನೀವು ಬಿಗಿ ಮಾಡಿ. ಅದೇನೋ ಒಳ್ಳೆಯದಿದೆ, ಆದರೆ ಸರಿಯಾಗಿ ಈ ಯೋಜನೆ ನಡೆಯುತ್ತಾ ಇಲ್ಲ. ಏಕೆ ನಮ್ಮ ಶಾಸಕರು ಬೈಯ್ಯುತ್ತಾರೆಂದರೆ ಸರಿಯಾಗಿ ಕೆಲಸ ಆಗುವುದಿಲ್ಲ, ಅದಕ್ಕೆ ಬೈಯ್ಯುತ್ತಾರೆ. ಆದರೆ, ಇಲ್ಲಿ ರೊಕ್ಕ ಉಳಿಯುತ್ತದೆ, ನಾನು ಕೂಡ ಲೆಕ್ಕ ಹಾಕಿ; ನೋಡಿದೆ, ನಾನು ಅದಕ್ಕೆ ವಿರೋಧಿಯಾಗಿಯೇ ಇದ್ದೆ. ಏನು ಲ್ಯಾಂಡ್ ಆರ್ಮಿ ಕೆಲಸ ಅಂತ. ಕನಿಷ್ಟಪಕ್ಷ ಅವರನ್ನು ಬಿಗಿ ಇಟ್ಟು, ಕೆಲಸ ಮಾಡುವುದಕ್ಕೆ ಹೇಳಿದರೆ, ಇಲ್ಲಿ ರೊಕ್ಕವಾದರೂ ಉಳಿಯುತ್ತದೆ. ಸರ್ಕಾರದ ಪಗಾರ ಉಳಿಯುತ್ತದೆ. ಆ ಕಾರಣದಿಂದ ನಾನು ದಯವಿಟ್ಟು ಹೇಳುತ್ತಿದ್ದೇನೆ. ನಿಮ್ಮ ಕಾಮಗಾರಿ ಈ ಗುಣಮಟ್ಟವೂ ಕೂಡ ಬಹಳ ಕಳಪೆ ಮಟ್ಟದ್ದು ಇದೆ, ಅದನ್ನೂ ಕೂಡ ಸುಧಾರಿಸುವಂತಹ ಪ್ರಯತ್ನವನ್ನು ತಾವು ಮಾಡಬೇಕು.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಸಲಹೆ ಇದೆ. ತಮಗೆ ಗೊತ್ತಿದೆ, ಕೇರಳದ ಕೆಲವು ಭಾಗಗಳಲ್ಲಿ ರೋಡ್ ರಬ್ಬರೈಸೇಷನ್ ಮಾಡಿದ್ದಾರೆ, ಇದರಿಂದ ಏನಾಗುತ್ತದೆಂದು ಹೇಳಿದರೆ ಆ ಭಾಗದಲ್ಲಿ 10 ವರ್ಷ ಕಾಲ ಆ ಮಾರ್ಗಕ್ಕೆ ರಿಪೇರಿ ಬರುವುದಿಲ್ಲ. ನಾನು ಮೊನ್ನೆ ರಬ್ಬರ್ ಬೋರ್ಡಿನವರ ಹತ್ತಿರ ಮಾತನಾಡಿದೆ. ಅವರೇನು ಹೇಳಿದರೆಂದರೆ, ಈ ರೋಡ್ ರಬ್ಬರೈಸೇಷನ್ ಮಾಡಿದರೆ, ಏನು ಹೆಚ್ಚುವರಿ ಹಣ ಖರ್ಚು ಮಾಡಿ ಟಾರ್ ಹಾಕಿ, ಡಾಂಬರೀಕರಣ ಮಾಡುತ್ತೀರಿ, ಅದಕ್ಕಿಂತ ಜಾಸ್ತಿ ಆಗುವ ಕಾಸ್ಟನ್ನು ರಬ್ಬರ್ ಬೋರ್ಡಿನವರು ಭರಿಸುತ್ತಾರಂತೆ. ತಾವು ದಯವಿಟ್ಟು ಅವರನ್ನು ಸಂಪರ್ಕ ಮಾಡಿ.

ಏಕೆಂದರೆ, ಈಗಾಗಲೇ ಘಾಟ್ ಸೆಕ್ಷನ್‌ನಲ್ಲಿ ಎಲ್ಲಾ ಕಡೆ ಹಾಕಿದ್ದಾರೆ. ಎಲ್ಲಿ ಶೀಘ್ರವಾಗಿ ರಸ್ತೆ ಠಾರ್‌ಗಳು ಹಾಳಾಗುತ್ತವೆ, ಅಲ್ಲೆಲ್ಲಾ ರಬ್ಬರೈಸೇಷನ್ ವ್ಯವಸ್ಥೆಯನ್ನು ಮಾಡಿದ್ದಾರೆ. ಅದೂ ಕೂಡ ರಬ್ಬರ್ ಬೋರ್ಡಿನವರ ಹತ್ತಿರ ಮಾತನಾಡುವಾಗ ಹೇಳಿದರು. ಇದನ್ನು ಇಂಜಿನಿಯರಿಂಗ್ ಇಲಾಖೆಯವರು ಒಪ್ಪಲಿಕ್ಕಿಲ್ಲ, ಏಕೆಂದರೆ 10 ವರ್ಷ ರಸ್ತೆ ರಿಪೇರಿ ಇಲ್ಲವೆಂದರೆ, ಅವರಿಗೆ ತಾಪತ್ರಯವಾಗುತ್ತದೆ. ಅದಕ್ಕಾಗಿ ನಾನು ಲೋಕೋಪಯೋಗಿ ಮಂತ್ರಿಗಳನ್ನು ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಆ ರಬ್ಬರೈಸೇಷನ್ ವಿಚಾರವನ್ನು ತಾವು ಅಧ್ಯಯನ ಮಾಡಿ, ಈ ರಬ್ಬರೈಸೇಷನ್ ಮಾಡುವ ಮುಖಾಂತರ ನಿಮಗೆ ಏನು ಕಾಸ್ಟ್ ಬೀಳುತ್ತದೆ, ಆ ಹೆಚ್ಚುವರಿ ಕಾಷ್ಟನ್ನು ರಬ್ಬರ್ ಬೋರ್ಡೇ ಭರಿಸುವುದರಿಂದ, ಹಣಕಾಸಿನ ಉಳಿತಾಯವೂ ಆಗುತ್ತದೆ. ಈಗ ಒಂದು ಲಕ್ಷ ರೂಪಾಯಿಗಳ ಡಾಂಬರೀಕರಣ ಮಾಡಲಿಕ್ಕೆ, 1 ಲಕ್ಷ 10 ಸಾವಿರ ಬರುವುದಿದ್ದರೆ, ಆ 10 ಸಾವಿರ ರೂ.ಗಳನ್ನು ರಬ್ಬರ್ ಬೋರ್ಡ್‌ನವರು ಭರಿಸುತ್ತಾರೆ. ಆದಕಾರಣ ನಮ್ಮ ಇಲಾಖೆಗೆ ಅಥವಾ ಸರ್ಕಾರಕ್ಕೆ ಏನೂ ತೊಂದರೆಯಾಗುವುದಿಲ್ಲ. ಈ ಒಂದು ಪದ್ಧತಿಯನ್ನು ಅಳವಡಿಸಿಕೊಂಡರೆ ಪ್ರಾಯಶಃ ಮುಂದಿನ ದಿನಗಳಲ್ಲಿ ರಸ್ತೆಗಳು ಈ ರೀತಿ ಬೇಗ ಹಾಳಾಗುವುದಿಲ್ಲ. ಈ ವರ್ಷ ಹಾಕಿದಂತಹ ರಸ್ತೆಗಳು ಮಳೆ ಬಂದು ಕೂಡಲೇ ಹೋಗುವಂತಾದ್ದು ಇದೆಲ್ಲಾ ನಿಲ್ಲಿಸಲಿಕ್ಕೆ ಸಾಧ್ಯ. ಈಗಾಗಲೇ ಶಿರಾಡಿ ಘಾಟ್ ಮತ್ತು ಅಲ್ಲಲ್ಲಿ ನೀವು ಹಾಕಿದ್ದೀರಿ. ನಮ್ಮ ರಾಷ್ಟ್ರೀಯ ಹೆದ್ದಾರಿಗಳಲ್ಲಿ, ಎಲ್ಲಾ ತಿರುವುಗಳಲ್ಲಿ ಈ ರಬ್ಬರೈಸೇಷನ್ ಮಾಡಿದ್ದಾರೆ. ಇದರಿಂದ, ಅಲ್ಲಿ ಭಾರಿ ಸ್ಪೀಡಾಗಿ ಹೋಗುವಂತಾದ್ದು ಅಥವಾ ಯಾವುದೇ ಒತ್ತಡಗಳ ಬಗ್ಗೆ ಬ್ರೇಕ್ ಹಾಕಿದರೂ ಕೂಡ, ಎಷ್ಟು ಲೋಡ್ ಲಾರಿ ಹೋದರೂ ಕೂಡ ಆ ಡಾಂಬರ್ ಹೋಗುವಂಥ ವ್ಯವಸ್ಥೆಗಳಾಗುತ್ತಿಲ್ಲ. ಈಗಾಗಲೇ ನಾವು ನಿದರ್ಶನಗಳನ್ನು ನೋಡಿದ್ದೇವೆ. ತಾವು ದಯವಿಟ್ಟು ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಡಿ. ಈ ರಬ್ಬರೈಸೇಷನ್ ವ್ಯವಸ್ಥೆಯನ್ನು ಮಾಡಿಕೊಂಡು ನಮ್ಮ ರಾಜ್ಯದಲ್ಲೂ ಕೂಡ ಎಷ್ಟು ಮಾಡುತ್ತೇವೆಯೋ ಅಷ್ಟನ್ನು ಶಾಶ್ವತವಾಗಿ ಉಳಿಸುವಂಥ ಕೆಲಸ ಮಾಡಿದರೆ ಸೂಕ್ತವೆಂದು ನನ್ನ ಸಲಹೆ.

ಶ್ರೀ ಧರ್ಮಸಿಂಗ್: ಇದರ ವಿಚಾರದಲ್ಲಿ ಕೇರಳದ ಲೋಕೋಪಯೋಗಿ ಮಂತ್ರಿಗಳು ಸಭೆ ಮಾಡಿ ನಮ್ಮ ಚೀಫ್ ಇಂಜಿನಿಯರರನ್ನೂ ಕರೆಸಿದ್ದರು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇದನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇದರಿಂದ ಡ್ಯೂರೆಬಿಲಿಟಿ ಹೆಚ್ಚಾಗುತ್ತದೆ. ಪ್ಲಾಸ್ಟಿಕ್, ವೇಸ್ಟ್ ಪೇಪರನ್ನು ಸರಿಯಾಗಿ ಡಾಂಬರಿನಲ್ಲಿ ಬೆರೆಸಿದರೆ ಡ್ಯೂರೆಬಿಲಿಟಿ ಬರತಕ್ಕಂಥಾದ್ದು ಇದೆ. ಪ್ರಾರಂಭದಲ್ಲೇ ಈ ಕೆಲಸ ಮಾಡಿರುವ ರಾಜ್ಯಗಳಲ್ಲಿ ಕರ್ನಾಟಕ ಮೊದಲ ರಾಜ್ಯವಾಗಿದೆ. ಇದನ್ನು ಬೇರೆ ರಾಜ್ಯದವರೂ ಕೂಡ ಬಂದು ನೋಡುತ್ತಿದ್ದಾರೆ. ಈ ತರಹ ವೇಸ್ಟ ಪೇಪರ್ ಉಪಯೋಗ ಮಾಡಿಕೊಂಡು, 5 ಕಿಲೋಮೀಟರನ್ನು ತೆಗೆದುಕೊಂಡಿದ್ದೇವೆ. ನೀವು ಸೋಷಿಯಲ್ ವೆಲ್‌ಫೇರ್ ಮಂತ್ರಿಗಳಾಗಿದ್ದೀರಿ, ರ್‍ಯಾಗ್ ಪಿಕ್ಕಾರ್ಸ್‌ಗಳಿಗೆ ಇದರಿಂದ ಹೆಚ್ಚಿನ ಬೆಲೆ ಬರುತ್ತದೆ. ಇದು ಡ್ಯೂರೆಬಿಲಿಟಿ ಬರುತ್ತಾ ಇದೆ. ಹಾಗೆಯೇ ಈ ರಬ್ಬರ್ ರೋಡ್ ಮಾಡತಕ್ಕಂಥಾದ್ದನ್ನು ಈಗಾಗಲೇ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಕೇರಳದ ಲೋಕೋಪಯೋಗಿ ಮಂತ್ರಿಗಳು ಕರೆಸಿದ ಸಭೆಯಲ್ಲಿ ಚರ್ಚೆಯಾಗಿದ್ದು, ನಮ್ಮ ಇಂಜಿನಿಯರ್‌ಗಳ ಜೊತೆಯಲ್ಲೂ ಚರ್ಚಿಸಿ ಅಳವಡಿಸಲು ಅದನ್ನೂ ಕರ್ನಾಟಕದಲ್ಲಿ ಪ್ರಾರಂಭ ಮಾಡಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ: ನಮ್ಮ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಾಲಿ ಏನು Existing National Highway pattern ಇದೆ. ಅದು ಬಹಳ ಟ್ರಾಫಿಕ್, ಅದರ ಮೇಲೆ ಬಹಳವಾಗಿ ಉಪಯೋಗಿಸುವಂಥ ವ್ಯವಸ್ಥೆ ಇದೆ. ಅದನ್ನು ನಾವು ಹೆಚ್ಚು ಮಾಡಿಕೊಳ್ಳದೇ ಹೋದರೆ, ಕಷ್ಟವಾಗುತ್ತದೆ. ಟೂವೇಸ್ ಫೋರ್ ವೇಸ್, ಈ ರೀತಿ ಮಾಡಿಕೊಳ್ಳಬೇಕು. ಬೆಂಗಳೂರು - ಹೊಸೂರು ಮಾರ್ಗದಲ್ಲಿ ಯಾವರೀತಿ ರಸ್ತೆಗಳಿವೆ, ಮದ್ರಾಸ್‌ಗೆ (ಚೆನ್ನೈಗೆ) ಹೋಗತಕ್ಕದ್ದು. ಅದೇ ರೀತಿ ಹೊಸಕೋಟೆ ಎನ್.ಹೆಚ್.-4 ನಲ್ಲಿ ಕೋಲಾರ, ಚಿತ್ತೂರು ವರೆಗೆ ಹೋಗುವಂಥ, ಈ ಕಡೆ ತುಮಕೂರು ಹೋಗುವಂಥ ಮಾರ್ಗಗಳಲ್ಲಿ 4 ವೇಸ್, 6 ವೇಸ್ ಮಾಡದೇ ಇದ್ದರೆ, ಹಾಲಿ ಇರತಕ್ಕ ರಸ್ತೆಗಳ ಮೇಲೆ ಒತ್ತಡ ಜಾಸ್ತಿಯಾಗಿ, ಅವು ಉಳಿಯುವುದಿಲ್ಲ. ಅದಕ್ಕೇನಾದರೂ ನಾವು ಯೋಚನೆ ಮಾಡಬೇಕು. ಕೇಂದ್ರ ಸರ್ಕಾರ ಈ ಯೋಜನೆ ಮಾಡಿದೆ ಎಂದು ಹೇಳುತ್ತಾರೆ. ದೇವನಹಳ್ಳಿ ಮಾರ್ಗದಲ್ಲಿ ಈಗ ಮಾಡುತ್ತಿದ್ದಾರೆ. 6 ವೇಸ್ ಎಂದು ಹೈದ್ರಾಬಾದ್ ಕಡೆಗೆ ಮಾಡಿಕೊಂಡು ಹೋಗುತ್ತಿದ್ದಾರೆ. ಈ ವಿಚಾರವೇನಾದರೂ ತಮ್ಮ ಮುಂದೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್: ಹಾಲಿ ಎರಡು ರಸ್ತೆಗಳಿಗೆ 4 ಲೈನ್ ಮಾಡತಕ್ಕ ಕಾರ್ಯಕ್ರಮ ಇದೆ. ದೇವನಹಳ್ಳಿಯಿಂದ 6 ರಸ್ತೆಗಳ ಕೆಲಸವನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇದಕ್ಕೆ 700 ಕೋಟಿ ರೂ ಖರ್ಚು ಮಾಡುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿ-4ರಲ್ಲಿ ನಿಪ್ಪಾಣಿಯವರೆಗೆ ಕೂಡ 4 ವೇಸ್ ಮಾಡತಕ್ಕ ವಿಚಾರದಲ್ಲಿ ಲ್ಯಾಂಡ್ ಅಕ್ವಿಸಿಷನ್ ಪ್ರಾರಂಭ ಮಾಡಿದ್ದೇವೆ. ಇವತ್ತು ಪ್ರಧಾನ ಮಂತ್ರಿಗಳ Golden Quadrange ನಲ್ಲಿ ಕರ್ನಾಟಕ ದೊಡ್ಡ ಫಿನಿಷಿಷ್ ರೀಸ್ ಸ್ಟೇಟ್ ಆಗಿದೆ. ಇಲ್ಲಿ 3,600 ಕೋಟಿ ರೂ ಸ್ಪೆಂಡ್ ಮಾಡಲಾಗಿದೆ. ಎನ್.ಹೆಚ್-4 ಮತ್ತು ಎನ್.ಹೆಚ್.7 ಕೂಡ ಪ್ರಾರಂಭವಾಗುತ್ತಾ ಇದೆ. ಇವತ್ತು ಬೆಂಗಳೂರು - ಮೈಸೂರು ನಾನ್ ಸ್ಟಾಪಾಗಿ ಹೋಗತಕ್ಕಂಥಾದ್ದು, ಎಲ್ಲಿಯೂ ಕೂಡ ಅಪಘಾತಗಳು ಆಗದಂಥ ರೀತಿಯಲ್ಲಿ ವ್ಯವಸ್ಥೆಯಾಗುತ್ತಿದೆ. ಇವತ್ತು ಮಲೇಷಿಯಾ-ಸಿಂಗಾಪುರ585 ಕಿಲೋಮೀಟರ್ ಹೋಗಬೇಕಾದರೆ, ಬಹಳ ಕಡಿಮೆ ಸಮಯದಲ್ಲಿ ಕವರ್ ಮಾಡುತ್ತೇವೆ. ಬೆಂಗಳೂರು ಮೈಸೂರು 4 ಲೈನ್ ಅದೂ ಸಿಮೆಂಟ್ ಕಾಂಕ್ರೀಟ್ ರೋಡ್ ನಾವು ಮಾಡುತ್ತಿದ್ದೇವೆ. After anticipating the projected population, the Government have taken a decision. ಈಗಿನ ಸರ್ಕಾರ ಪ್ರಾರಂಭ ಮಾಡುತ್ತಿದೆ. ಇವತ್ತು ಹೊಸೂರಿನಲ್ಲಿ 4 ಲೈನ್ ಇದ್ದೂರ ಕೂಡ 6 ಲೈನ್ ಆಗಬೇಕೆಂಬುದು ಪ್ರಸ್ತಾವನೆ ಬಂದಿದೆ. ದೇವನಹಳ್ಳಿ ಮತ್ತು ಎನ್.ಹೆಚ್. 4 ನಲ್ಲಿ 6 ಲೈನ್ ಆಗುತ್ತಾ ಇದೆ. ಮತ್ತೆ ಎನ್.ಹೆಚ್-7ನಲ್ಲಿ ಕೂಡ 4 ಲೈನ್ ಮಾಡತಕ್ಕ ಕಾರ್ಯಕ್ರಮವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಕರ್ನಾಟಕದಲ್ಲಿ ಸುಮಾರು 3,600 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ನಾನು ಮಾತನಾಡುವುದು ಇನ್ನೂ ಬಹಳ ಇದೆ. ಇದುವರೆಗೆ ನಾನು ಮಾತನಾಡಿಯೇ ಇಲ್ಲ. ಈಗ ಮುಗಿಸುವುದಕ್ಕೆ ಆಗುವುದಿಲ್ಲ.

ಶ್ರೀ ಧರ್ಮಸಿಂಗ್: ಈಗ ಕಾವೇರಿ ಬಗ್ಗೆ ಸರ್ವ ಪಕ್ಷಗಳ ಸಭೆ ಇದೆ.

ಶ್ರೀ ಎಸ್.ಎಸ್. ಪಾಟೀಲ್: ಹಾಗಾದರೆ ಸದನವನ್ನು ಮುಂದೂಡಿ, ನಾಳೆ ಮುಂದುವರೆಸುತ್ತೇನೆ.